ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ "೧೯೮೬ನೇ ಇಸವಿಯ ಕರ್ನಾಟಕ ವಿಮಾನಗಾರಿಕೆ ಬಂದರು ಸರಹದ್ದುಗಳ ಪ್ರಾಧಿಕಾರ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಂಡನೆಗೆ ಅನುಮತಿ ನೀಡಲಾಯಿತು.

ಶ್ರೀ ಸಿ. ಭೈರೇಗೌಡ (ವಿಮಾನಗಾರಿಕೆ ಮತ್ತು ಬಂದರುಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ "೧೯೮೬ನೇ ಇಸವಿಯ ಕರ್ನಾಟಕ ವಿಮಾನಗಾರಿಕೆ ಮತ್ತು ಬಂದರು ಸರಹದ್ದುಗಳ ಪ್ರಾಧಿಕಾರ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

*ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

ವಿತ್ತೀಯ ಕಾರ್ಯಕಲಾಪ

೧೯೮೬-೮೭ನೇ ಸಾಲಿನ ಆಯವ್ಯಯ ಪತ್ರದ ಮೇಲಿನ ಸಾಮಾನ್ಯ ಚರ್ಚೆ.

† ಶ್ರೀ ಎಂ. ಎಸ್. ನಾರಾಯಣರಾವ್ (ಗಾಂಧಿನಗರ).—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕಂಥ ೧೯೮೬-೮೭ನೇ ಸಾಲಿನ ಆಯವ್ಯಯ ಪತ್ರವನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ ಕೆಲವು ವಿಚಾರಗಳನ್ನು ಸದನದ ಗಮನಕ್ಕೆ ತರಬಯಸುತ್ತೇನೆ.

(ಛೇರ್ಮನ್ ಶ್ರೀ ಹೆಚ್. ಟಿ. ಕೃಷ್ಣಪ್ಪನವರು ಪೀಠವನ್ನು ಅಲಂಕರಿಸಿದ್ದರು)

ಮೊಟ್ಟಮೊದಲನೆಯದಾಗಿ ಕೆಲವಾರು ಅಂಶಗಳನ್ನು ನಾನು ಈ ಸದನದ ಗಮನಕ್ಕೆ ತರಬಯಸುವುದೇನೆಂದರೆ ಕೇಂದ್ರ ಸರ್ಕಾರದ ಒಂದು ಧೋರಣೆಯಿಂದ, ಕೇಂದ್ರ ಸರ್ಕಾರದ ಆರ್ಥಿಕ ನೀತಿಯಿಂದ ಬರುಬರುತ್ತಾ ಎಲ್ಲಾ ರಾಜ್ಯ ಸರ್ಕಾರಗಳು ತಮ್ಮ ತಮ್ಮ ಆರ್ಥಿಕ ನೀತಿಗೆ ಧಕ್ಕೆ ಬರುವಂತಾಗಿದೆ. ಇದು ಒಂದು ಆರ್ಥಿಕ ನೀತಿಯನ್ನು ಕೇಂದ್ರ ಸರ್ಕಾರ ಮುಂದುವರೆಸಿಕೊಂಡು ಹೋಗುವುದಾದರೆ ಇಡೀ ರಾಷ್ಟ್ರದ ರಾಜ್ಯ ಸರ್ಕಾರಗಳು ಮುನಿಸಿಪಾಲಿಟಿಗಳು ಆಗಬಹುದು ಎನ್ನತಕ್ಕಂಥ ಅಂಶವನ್ನು ನಾನು ಸದನದ ಗಮನಕ್ಕೆ ತರಬಯಸುತ್ತೇನೆ. ತಮಗೆಲ್ಲ ಗೊತ್ತಿರುವ ಹಾಗೆ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ತೆರಿಗೆಯನ್ನು ಹಾಕಬೇಕಾದರೆ ಅಥವಾ ಹೆಚ್ಚಿನ ಕರ ವಿಧಿಸಬೇಕಾದರೆ, ಆ ತೆರಿಗೆಯನ್ನು ವಸೂಲು ಮಾಡಬೇಕಾದರೆ ಆ ಜನರೆಲ್ಲಾ ಒಬ್ಬರೆ. ಇಂತಹ ಒಂದು ಪರಿಸ್ಥಿತಿ ಇದ್ದರೂ ಸಹ ಕೇಂದ್ರ ಸರ್ಕಾರದವರು ಹೆಚ್ಚು ಹೆಚ್ಚು ತೆರಿಗೆಯನ್ನು ಎಲ್ಲಾ ವಲಯಗಳಲ್ಲಿ ಹಾಕುತ್ತಾ ಬಂದರೆ ಆಗ ರಾಜ್ಯ ಸರ್ಕಾರದ ಆರ್ಥಿಕನೀತಿಯ ಸ್ವಾತಂತ್ರ್ಯಕ್ಕೆ ಧಕ್ಕೆ ಬರುತ್ತದೆ. ಎನ್ನುವ ಅಭಿಪ್ರಾಯ ನನ್ನದು ತಮಗೆಲ್ಲಾ ಗೊತ್ತಿರುವ ಹಾಗೆ ಕೇಂದ್ರ ಸರ್ಕಾರದ ಆರ್ಥಿಕ ಸಚಿವರು, ಕೇಂದ್ರ ಸರ್ಕಾರದ ಫಿಜಿಕಲ್ ಪಾಲಿಸಿಯಲ್ಲಿ ಏನು ಹೇಳಿದ್ದಾರೆ ಎನ್ನುವ ವಿಚಾರವನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅವರು ಅದರಲ್ಲಿ ಏನು ಹೇಳಿದ್ದಾರೆಂದರೆ ಇನ್ನು ಮೂರು ವರ್ಷಗಳವರೆವಿಗೂ ನಾವು ಯಾವುದೇ ಡೈರೆಕ್ಟ್ ಟ್ಯಾಕ್ಸ್‌ಗಳನ್ನು ಹೆಚ್ಚು ಮಾಡುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಈ ರೀತಿ ಮಾಡುವುದರಿಂದ ರಾಜ್ಯ ಸರ್ಕಾರಗಳಿಗೆ ಇನ್ನು ಮುಂದೆ ತೆರಿಗೆಯನ್ನು ಹಾಕುವ ಶಕ್ತಿ ಮತ್ತು ಅಥಾರಿಟಿ ಇರುವುದಿಲ್ಲ. ಇದರಿಂದ ಕೇಂದ್ರ ಸರ್ಕಾರಕ್ಕೆ ಹಣ ಶೇಖರಣೆಯಾಗುತ್ತಿರುತ್ತದೆ. ಆದರೆ ರಾಜ್ಯ ಸರ್ಕಾರಗಳಿಗೆ ಯಾವುದೇ ರೀತಿಯ ಹಣ ಶೇಖರಣೆಯಾಗುವುದಿಲ್ಲ. ಆಗ ರಾಜ್ಯ ಸರ್ಕಾರಗಳು ಏನು ಮಾಡಬೇಕು ಪ್ರತಿಯೊಂದು ತೆರಿಗೆಯನ್ನು ರಾಜ್ಯದ ಜನತೆಯ ಮೇಲೆ ಹಾಕುತ್ತಾ ಹೋದರೆ ಆಗ ಜನತೆ ತೆರಿಗೆಯನ್ನು ಕೊಡುವ ಶಕ್ತಿಯನ್ನು ಎಲ್ಲಿ ಹೊಂದಿರುತ್ತಾನೆ. ಮತ್ತೆ ಕೇಂದ್ರ ಸರ್ಕಾರದವರು ಇನ್ನು ಕೆಲವು ವಸ್ತುಗಳ ಮೇಲೆ ತೆರಿಗೆಯನ್ನು ಹಾಕಿದರೆ ಎಲ್ಲಿ ರಾಜ್ಯ ಸರ್ಕಾರಕ್ಕೆ ಪಾಲು ಕೊಡಬೇಕಾಗುತ್ತದೆಯೋ ಎನ್ನುವ ದೃಷ್ಟಿಯಿಂದ ಬೆಲೆಗಳನ್ನೇ ಜಾಸ್ತಿ ಮಾಡಿಬಿಡುತ್ತಾರೆ. ಇದರಿಂದ ಅವರಿಗೆ ಹಣ ಶೇಖರಣೆಯಾಗುತ್ತದೆ.

---

* Annexure.

† ಈ ಚಿಹ್ನೆಯು ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ರಾಜ್ಯಗಳಿಗೆ ಅಪಾಯಕಾರಿಯಾದಂಥ ಪರಿಸ್ಥಿತಿಯನ್ನು ತಂದೊಡ್ಡುತ್ತಾರೆ. ಇದರಿಂದ ನಾನು ಮೊದಲೇ ಹೇಳಿದ ಹಾಗೆ ರಾಜ್ಯ ಸರ್ಕಾರಗಳ ಆರ್ಥಿಕ ನೀತಿ ಕುಂಠಿತವಾಗುತ್ತದೆ. ಆಗ ಎಲ್ಲಾ ರಾಜ್ಯಗಳು ಸಹ ಮುನಿಸಿಪಾಲಿಟಿಗಳ ಲೆವೆಲ್‌ಗೆ ಬರುತ್ತವೆ. ಈ ವಿಚಾರವನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯ ಪತ್ರದಲ್ಲಿ ಬಹಳ ಗಹನವಾಗಿ ವಿಚಾರ ಮಾಡಿದ್ದಾರೆ. ಅವರು ತಮ್ಮ ಆಯವ್ಯಯ ಪತ್ರದಲ್ಲಿ ಹೇಳಿದ್ದಾರೆ. ಇದರಿಂದ ರಾಜ್ಯ ಸರ್ಕಾರಗಳಿಗೆ ಅನ್ಯಾಯವಾಗುತ್ತದೆ. ರಾಜ್ಯ ಸರ್ಕಾರಗಳಿಗೆ ಬರಬೇಕಾದಂಥ ಗ್ರಾಂಟುಗಳು ಸರಿಯಾಗಿ ಬರುತ್ತಿಲ್ಲ. ಕೇಂದ್ರ ಸರ್ಕಾರದವರು ಕೊಟ್ಟಿರುವ ಸಾಲವನ್ನು ಬಡ್ಡಿಯ ಸಮೇತ ಸಾಲ ತೀರಿಸಬೇಕಾಗುತ್ತದೆ ಆಗ ರಾಜ್ಯ ಸರ್ಕಾರಗಳ ಪರಿಸ್ಥಿತಿ ಏನಾಗಬೇಕು ಎಂಬುದನ್ನು ತಾವೇ ಯೋಚನೆ ಮಾಡಿ. ನಿನ್ನೆಯ ದಿವಸ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಎಂ. ವೀರಪ್ಪಮೊಯ್ಲಿಯವರು ಮಾತನಾಡುತ್ತಾ ಹೇಳಿದರು ರಾಜ್ಯ ಸರ್ಕಾರ ಯೋಜನೆಗಳಿಗೆ ಸರಿಯಾದ ಪ್ರಮಾಣದಲ್ಲಿ ಹಣವನ್ನು ಅಲಾಟ್‌ಮೆಂಟ್ ಮಾಡಿಕೊಂಡಿಲ್ಲ, ಯೋಜನೆಗಳಿಗೆ ಎಷ್ಟು ನಿಗದಿತ ಹಣ ಬೇಕಾಗಿತ್ತೋ ಅಷ್ಟು ಪ್ರಮಾಣದ ಹಣವನ್ನು ಒದಗಿಸಿಕೊಂಡಿಲ್ಲ ಎಂದು. ಮತ್ತು ರಾಜ್ಯ ಸರ್ಕಾರ ತಪ್ಪು ಮಾಡಿದೆ ಎನ್ನುವ ಮಾತನ್ನು ಸಹ ಅವರು ಹೇಳಿದರು. ಈ ಮೇಲಿನ ಅಂಶಗಳಿಂದ ನಾವು ತಾಳೆ ಮಾಡಿ ನೋಡಿದಾಗ ರಾಜ್ಯ ಸರ್ಕಾರ ಯಾವುದೇ ರೀತಿಯ ತಪ್ಪು ಮಾಡಿಲ್ಲ ಎಂದು ಹೇಳಬಯಸುತ್ತೇನೆ. ಕೇಂದ್ರ ಸರ್ಕಾರದವರು ನ್ಯಾಯಯುತವಾಗಿ ರಾಜ್ಯ ಸರ್ಕಾರಗಳಿಗೆ ಕೊಡಬೇಕಾದಂಥ ಹಣವನ್ನು ಕೊಡದಿದ್ದರೆ ಯಾವ ರೀತಿಯಲ್ಲಿ ಹಣ ಶೇಖರಣೆ ರಾಜ್ಯ ಸರ್ಕಾರ ಮಾಡುವುದಕ್ಕೆ ಸಾಧ್ಯವಿದೆ ? ರಾಜ್ಯ ಸರ್ಕಾರ ಏನು ಮಾಡಬೇಕು ? ಇದನ್ನು ತಾವೇ ಯೋಚನೆ ಮಾಡಿ. ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ದೃಷ್ಟಿಯಿಂದ ನಮ್ಮ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯ ಪತ್ರದಲ್ಲಿ ಒಂದು ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಅದೇನೆಂದರೆ ಸುಮಾರು ೩೫ ವರ್ಷಗಳಿಂದ ನಮ್ಮ ಯೋಜನೆಗಳಲ್ಲಿ ನಗರಾಭಿವೃದ್ಧಿ ಮತ್ತು ದೊಡ್ಡ ದೊಡ್ಡ ಇಂಡಸ್ಟ್ರಿಗಳಿಗೆ ಹೆಚ್ಚಿನ ಗಮನ ಕೊಟ್ಟಿರುವುದರಿಂದ ಈಗ ನಾವು ಗ್ರಾಮಾಂತರ ಪ್ರದೇಶಗಳ ಬಗ್ಗೆ ಮತ್ತು ಅವರ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಈ ಒಂದು ಅಂತರವನ್ನು ಸರಿ ಮಾಡುವುದಕ್ಕೆ ಈ ಆಯವ್ಯಯ ಪತ್ರದಲ್ಲಿ ಕೆಲವು ರೂಪರೇಖೆಗಳನ್ನು ಹಾಕಿಕೊಂಡಿದ್ದಾರೆ ಎಂದು ಹೇಳಿದರೆ ಅದು ತಪ್ಪಾಗುವುದಿಲ್ಲ. ಅದರಲ್ಲಿ ಬಹಳ ಮುಖ್ಯವಾದ ಒಂದೇ ಒಂದು ವಿಚಾರವೆಂದರೆ ಗ್ರಾಮಾಂತರ ಪ್ರದೇಶದ ಪ್ರತಿಯೊಂದು ಹಳ್ಳಿಗೂ ಸಹ ಡಾಂಬರ್ ಹಾಕಿಸಿಕೊಡುವುದು. ಇದು ಒಂದು ಹೊಸ ಯೋಜನೆ. ಇದರಿಂದ ಗ್ರಾಮಾಂತರ ಪ್ರದೇಶದ ಜನರ ಕಲ್ಯಾಣವಾಗುತ್ತದೆಂದು ನಾನು ಭಾವಿಸಿದ್ದೇನೆ.

ಇದೇ ತರಹ ಇನ್ನೂ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ.

> "ಎಣ್ಣೆಕಾಳುಗಳ ಬೆಳೆಗಾರರ ೨೪೦ ಪ್ರಾಥಮಿಕ ಸಹಕಾರ
> ಸಂಘಗಳನ್ನು ಸಂಘಟಿಸುವ ಮೂಲಕ ಕರ್ನಾಟಕ
> ಎಣ್ಣೆ ಬೆಳೆಗಾರರ ಮಹಾಮಂಡಲದ ಕಾರ್ಯಚಟುವಟಿಕೆ
> ಗಳನ್ನು ಪ್ರಾರಂಭಿಸುವುದು."

ಇದರಿಂದಲೂ ಸಹ ಗ್ರಾಮೀಣ ಭಾಗದಲ್ಲಿನ ಜನತೆಗೆ ಹೆಚ್ಚಿನ ಸಹಾಯ ಸಿಕ್ಕುತ್ತದೆ ಎಂದರೆ ತಪ್ಪಾಗಲಾರದು. ಇನ್ನು ರೈತರ ಸಾಲದ ಭಾರ ಏನಿದೆ ಅದನ್ನೂ ಕಡಿಮೆ ಮಾಡಿದ್ದಾರೆ. ನಾಲ್ಕು ಕೋಟಿ ರೂಪಾಯಿಗಳ ಬಡ್ಡಿಯನ್ನು ಮನ್ನಾ ಮಾಡಿದ್ದಾರೆ. ೬.೦೬ ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದ್ದಾರೆ. ಇದರಿಂದಲೂ ಸಹ ಗ್ರಾಮೀಣ ಜನತೆಗೆ ಬಹಳಷ್ಟು ಸಹಾಯವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇನ್ನೂ ಅನೇಕ ಗ್ರಾಮೀಣ ಪುನಶ್ಚೇತನಕ್ಕೆ ಸಂಬಂಧಿಸಿದಂತಹ ಯೋಜನೆಗಳನ್ನು ಆಯವ್ಯಯದಲ್ಲಿ ಹೇಳಿದ್ದಾರೆ. ಅದರಲ್ಲಿ ಒಂದು ಬಹಳ ಮುಖ್ಯವಾದ ಅಂಶ. ಇದೇ ಸಮಯದಲ್ಲಿ ಗ್ರಾಮೀಣ ಪುನಶ್ಚೇತನಕ್ಕೆ ರೂಪುರೇಷೆಗಳನ್ನು ಹಾಕಿಕೊಂಡಿದ್ದಾರೆ. ಇದೇ ತರಹ ನಗರಾಭಿವೃದ್ಧಿಗೂ ಕೆಲವು ರೂಪುರೇಷೆಗಳನ್ನು ಹಾಕಿಕೊಳ್ಳುವುದು ಅವಶ್ಯಕವೆಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಬೆಂಗಳೂರು ನಗರದಲ್ಲಿ ಎಲ್ಲರೂ ಚೆನ್ನಾಗಿರುತ್ತಾರೆಂದು ಹೇಳಿದರೆ ಅದು ಸರಿಯಾಗುವುದಿಲ್ಲ. ಈ ಆಯವ್ಯಯಪತ್ರದಲ್ಲಿ ಕೆಲವು ಅಂಕಿ ಅಂಶಗಳು ಇವೆ. ನಗರಕ್ಕೆ ಹೋಲಿಸಿದರೆ, ಬಹಳಷ್ಟು

ಅಂತರ ಇದೆಯೆಂದು ಹೇಳಿದ್ದಾರೆ, ಇರಬಹುದು ಅದು ತಪ್ಪೆಂದು ನಾನು ಹೇಳುವುದಿಲ್ಲ, ಶೇಕಡ ೬೦ಕ್ಕೂ ಹೆಚ್ಚು ಜನ ನಗರ ಪ್ರದೇಶದಲ್ಲೂ ಬಡವರು ಇದ್ದಾರೆ. ಇಲ್ಲಿ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ೧೯೮೩ರಲ್ಲಿ ಗ್ರಾಮೀಣ ಪ್ರದೇಶಗಳ ಮಾಸಿಕ ಬಳಕೆಯ ಸರಾಸರಿ ವೆಚ್ಚ ೧೧೨ ರೂಪಾಯಿ ಆಗಿದ್ದು, ನಗರ ಪ್ರದೇಶಗಳಲ್ಲಿ ಈ ವೆಚ್ಚ ೧೬೪ ರೂಪಾಯಿ ಎಂದು ಹೇಳಿದ್ದಾರೆ. ಇದು ಕೇವಲ ಶೇಕಡ ೧೦–೧೫ ಜನಗಳಿಗೆ ಮಾತ್ರ ಅನ್ವಯವಾಗುತ್ತದೆಯೇ ಹೊರತು, ನಗರದ ಎಲ್ಲಾ ಜನಗಳಿಗೆ ಈ ವೆಚ್ಚದ ಪರಿಮಿತಿ ಅನ್ವಯವಾಗುವುದಿಲ್ಲವೆಂದು ತಿಳಿದುಕೊಂಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ — ನೀವು ಕೊಟ್ಟಿರುವ ಅಂಕಿ ಅಂಶ, ನಗರ ಪ್ರದೇಶಗಳ ಸಂಘಟಿತ ವಲಯದಲ್ಲಿನ ಕಾರ್ಮಿಕರನ್ನು ಗಣನೆಗೆ ತೆಗೆದುಕೊಂಡಾಗ, ಕಾರ್ಮಿಕನ ಒಟ್ಟು ಸರಾಸರಿ ವರಮಾನ ೧೦,೮೬೦ ರೂಪಾಯಿ ಎಂದು ಹೇಳಿದ್ದೀರಿ, ರೂರಲ್ ಏರಿಯಾದ ವರಮಾನ ೩,೦೬೦ ಎಂದು ಇದೆ. ಅದರ ಮೇಲೆ ತಾವು ವ್ಯತ್ಯಾಸ ಕಂಡುಕೊಳ್ಳಬಹುದು.

ಶ್ರೀ ಎಂ ಎಸ್. ನಾರಾಯಣರಾವ್.— ಈ ಒಂದು ಪರಿಮಿತಿ ಏನಿದೆ, ನಗರ ಪ್ರದೇಶದಲ್ಲಿ ಈ ವೆಚ್ಚ ೧೬೪ ರೂಪಾಯಿ ಎಂದು ಹೇಳಿರುವುದು, ಇದು ನಗರ ಪ್ರದೇಶದ ಎಲ್ಲಾ ಜನಗಳಿಗೂ ಶಕ್ತಿ ಇಲ್ಲ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಗರದಲ್ಲಿ ಬಹಳಷ್ಟು ಕೊಳಚೆ ಪ್ರದೇಶಗಳು ಇವೆ, ಕೊಳಚೆ ಪ್ರದೇಶಗಳ ನಿವಾಸಿಗಳು ಇದ್ದಾರೆ. ಕೆಳವರ್ಗದ ಜನಗಳು ಇದ್ದಾರೆ, ಅವರಿಗೂ ಸರಾಸರಿ ವೆಚ್ಚ ೧೬೪ ರೂಪಾಯಿ ಮಾಡುವ ಶಕ್ತಿ ಇಲ್ಲವೆಂದು ತಿಳಿದುಕೊಂಡಿದ್ದೇನೆ. ಅದೇ ತರಹ ವರಮಾನದ ಸರಾಸರಿಯನ್ನೂ ಕೊಟ್ಟಿದ್ದಾರೆ. ಈ ಶಕ್ತಿಯು ನಗರದ ಎಲ್ಲಾ ಜನಗಳಿಗೂ ಇಲ್ಲ. ನಗರಗಳ ಬಗ್ಗೆಯೂ ಯೋಜನೆಗಳನ್ನು ಮಾಡಬೇಕಾದ್ದು ಬಹಳಷ್ಟು ಅವಶ್ಯಕತೆ ಇದೆಯೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಗ್ರಾಮ ಮತ್ತು ನಗರಗಳ ಜನತೆಯ ಅಂತರವನ್ನು ನಾವು ಇಂದು ನೋಡುತ್ತಿದ್ದೇವೆ. ನಗರಗಳಲ್ಲಿ ಬೇರೆ ಬೇರೆ ಅಂಶಗಳನ್ನು ನೋಡುತ್ತೇವೆ. ಇಲ್ಲಿ ಬಹಳಷ್ಟು ಶ್ರೀಮಂತರೂ ಇದ್ದಾರೆ, ಬಹಳಷ್ಟು ಬಡವರೂ ಇದ್ದಾರೆ ಈ ಅಂತರವನ್ನು ತೆಗೆದುಹಾಕುವುದಕ್ಕೆ ಸರ್ಕಾರದವರು ಏನಾದರೂ ಯೋಜನೆಯನ್ನು ಮಾಡಿಕೊಳ್ಳುವುದು ಬಹಳ ಮುಖ್ಯವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಗರದಲ್ಲೂ ವಸತಿ ಸೌಕರ್ಯವಿಲ್ಲ, ಕುಡಿಯುವ ನೀರಿನ ಬವಣೆ ಇದೆ, ಪರಿಸರ ನೈರ್ಮಲ್ಯತೆ ಇದೆ, ಕೊಳಚೆ ಪ್ರದೇಶಗಳು ಹೆಚ್ಚಾಗುತ್ತಿವೆ. ಈ ಅಂಶಗಳ ಕಡೆಗೂ ಗಮನ ಕೊಡದೇ ಹೋದರೆ, ನಗರದಲ್ಲೂ ಅಂತರ ಹೆಚ್ಚಾಗುತ್ತದೆ. ಇಂತಹ ಒಂದು ಪ್ರಕ್ಷುಬ್ಧ ವಾತಾವರಣಕ್ಕೆ ಎಡೆ ಕೊಡಬೇಡಿ. ಆಯವ್ಯಯಪತ್ರದಲ್ಲಿ ಯಾವ ರೀತಿ ಗ್ರಾಮೀಣ ಜನತೆಗೆ ರೂಪುರೇಷಗಳನ್ನು ಹಾಕಿಕೊಂಡಿದ್ದೀರೋ ಅದೇ ತರಹ ನಗರದಲ್ಲಿನ ಕಡುಬಡವರ ಬಗ್ಗೆಯೂ ಯೋಜನೆ ಹಾಕಬೇಕು. ಅವರನ್ನು ಮೇಲೆ ತರುವ ಪ್ರಯತ್ನ ಮಾಡಿದರೆ ಒಳ್ಳೆಯದು. ಈ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ. ಈ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡರೆ, ಖಂಡಿತ ನಮ್ಮ ಕಡುಬಡವರು, ದುರ್ಬಲವರ್ಗದವರನ್ನು ಮೇಲೆ ತರಬಹುದು.

ಇನ್ನು ಕೆಲವು ಮುಖ್ಯವಾದ ವಿಚಾರಗಳ ಬಗ್ಗೆ ಕೆಲವು ರಿಯಾಯಿತಿಗಳನ್ನು ಕೊಟ್ಟಿದ್ದಾರೆ, ಟ್ಯಾಕ್ಸ್ ರಿಯಾಯಿತಿ ಬಗ್ಗೆ ಹೇಳಿದ್ದಾರೆ. ಇವುಗಳಿಂದ ಜನಗಳಿಗೆ ಬಹಳ ಅನುಕೂಲವಾಗಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕ್ವಾರ್ಟರ್ಲಿ ಸೇಲ್ಸ್ ಟ್ಯಾಕ್ಸ್ ಬಗ್ಗೆ ಕೂಡ ರಿಯಾಯಿತಿ ಕೊಟ್ಟಿದ್ದಾರೆ ಇನ್ನು ಮೋಟಾರು ವೆಹಿಕಲ್ಸ್ ಟ್ಯಾಕ್ಸ್ ಕೂಡ ಬಹಳಷ್ಟು ಉತ್ತಮ ಮಾಡಿದ್ದಾರೆ. ಇದನ್ನು ಮಾಡಿರುವುದರಿಂದ ಜನಗಳು ಪ್ರತಿ ವರ್ಷ, ಹೋಗಿ ನಿಂತು ಬವಣೆ ಪಡುತ್ತಿದ್ದುದು ತಪ್ಪುತ್ತದೆ. ಈ ಒಂದು ಯೋಜನೆ ಮಾಡಬೇಕಾದ್ದು ಎಂದು ಹೇಳುತ್ತೇನೆ. ಅದೇ ತರಹ ಈ ಆಯವ್ಯಯದಲ್ಲಿ ನಮ್ಮ ಬೆಂಗಳೂರು ನಗರಕ್ಕೆ ಸಂಬಂಧಪಟ್ಟಂತೆ ಹೆಚ್ಚು ಏನೂ ಇಲ್ಲದೇ ಹೋದರೂ, ಒಂದು ಯೋಜನೆಯನ್ನು ಹೇಳಿದ್ದಾರೆ. ಕಾವೇರಿ ಮೂರನೇ ಹಂತದ ನೀರು ಪೂರೈಕೆಗೆ ಹೆಚ್ಚು ಹಣವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಬೆಂಗಳೂರು ನಗರದ ಜನರು ನೀರಿಗಾಗಿ ಪಡುತ್ತಿರುವ ಭವಣೆಯನ್ನು ವಿವರಿಸುವುದಕ್ಕಾಗುವುದಿಲ್ಲ. ಆದಷ್ಟು ಬೇಗ ಈ ೩ನೇ ಹಂತದ ಯೋಜನೆಯನ್ನು ಪೂರ್ಣಗೊಳಿಸಿ, ನಗರದ ಜನತೆಗೆ ಅವಶ್ಯಕವಾದ ನೀರನ್ನು ಒದಗಿಸಿಕೊಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮಗೆ ಗೊತ್ತಿರುವ ಹಾಗೆ ಇದಕ್ಕೆ ದುಡ್ಡನ್ನು ಕೊಟ್ಟಿದ್ದಾರೆ. ಇದು ಸಾಲದು. ಇನ್ನೂ ಸುಮಾರು ೧೦–೧೫ ಕೋಟಿ ರೂಪಾಯಿ ಕೊಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಷ್ಟಾದರೂ ಕೊಡದೇ ಹೋದರೆ' ಈ

ಯೋಜನೆಯನ್ನು ಮುಗಿಸುವುದಕ್ಕೆ ಇನ್ನೂ ೧೦ ವರ್ಷ ಬೇಕಾಗುತ್ತದೆ. ೫ ಕೋಟಿ ಅಥವಾ ಅದಕ್ಕಿಂತ ಕಡಿಮೆ ಕೊಟ್ಟರೆ, ಬಹಳ ಕಾಲವನ್ನು ತೆಗೆದುಕೊಳ್ಳುತ್ತದೆ. ಈ ನೀರಿನ ಸಮಸ್ಯೆ ಸಮಸ್ಯೆಯಾಗಿಯೇ ಉಳಿಯುತ್ತದೆ. ಆದಷ್ಟು ಬೇಗ ಹೆಚ್ಚು ಹಣವನ್ನು ಕೊಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಅದೇ ತರಹ ಮುಖ್ಯವಾದ ಇನ್ನೊಂದು ವಿಚಾರವನ್ನು ಸನ್ಮಾನ್ಯ ಮುಖ್ಯಮಂತ್ರಿಯವರ ಮುಂದೆ ಇಡಲು ಬಯಸುತ್ತೇನೆ. There must be economy in the administration ಆದಷ್ಟು ದುಂದು ವೆಚ್ಚವನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ನಾನು ಹೋದ ಸಾರಿಯೂ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೆ. ಇದರ ಕಡೆ ಆದಷ್ಟು ಗಮನ ಹೋಗಿಲ್ಲವೆಂದು ಹೇಳುತ್ತೇನೆ. ಈ ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್‌ನಲ್ಲಿ ಬಹಳಷ್ಟು ವೆಚ್ಚ ನಡೆಯುತ್ತಿದೆ. ಇವುಗಳನ್ನು ತಪ್ಪಿಸುವುದಕ್ಕೆ ಶೀಘ್ರವಾಗಿ ಕ್ರಮಗಳನ್ನು ಹಾಕಿಕೊಳ್ಳಬೇಕು. ಜನಗಳ ಮೇಲೆ ತೆರಿಗೆ ಜಾಸ್ತಿ ಮಾಡುತ್ತಾ ಹೋದರೆ, ದುಡ್ಡನ್ನು ದುಂದು ವೆಚ್ಚ ಮಾಡುತ್ತಾ ಹೋದರೆ ಅದು ಅಕ್ಷಮ್ಯ ಅಪರಾಧವಾಗುತ್ತದೆ. ದುಂದು ವೆಚ್ಚವನ್ನು ನಿಲ್ಲಿಸುವುದು ಒಳ್ಳೆಯದು. ಒಂದೇ ಒಂದು ಸಣ್ಣ ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಶಾಸಕರಿಗೆ ಬೇಕಾದಷ್ಟು ಹೊಸ ವರ್ಷದ ಶುಭಾಶಯ ಪತ್ರಗಳನ್ನು ಕಳುಹಿಸುತ್ತಾರೆ. ಕಾರ್ಪೊರೇಷನ್ ಚೇರ್ಮನ್‌ಗಳು ಹಾಗೂ ಬೇರೆಯವರೂ ಸಹ ಕಳುಹಿಸುತ್ತಾರೆ. ಇವೂ ಕೂಡ ಸರ್ಕಾರದ ವೆಚ್ಚದಿಂದ ಆಗತಕ್ಕಂಥ ಕೆಲಸ. ಇದಕ್ಕಾಗಿ ಮಾಡತಕ್ಕ ವೆಚ್ಚವನ್ನು ತಪ್ಪಿಸಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇನೆ. ಯಾವುದೇ ಕಾಲದಲ್ಲಿ ಒಂದು ನಯಾ ಪೈಸೆಯು ದುಂದು ವೆಚ್ಚ ಆಗುತ್ತಿದ್ದರೂ, ಅದನ್ನು ನಿಲ್ಲಿಸಬೇಕು. ಕಾರ್ಪೊರೇಷನ್, ಬೋರ್ಡ್ ಇತ್ಯಾದಿ ಸಂಸ್ಥೆಗಳಿಂದ ಶುಭಾಶಯ ಪತ್ರಗಳನ್ನು ಕಳುಹಿಸುವುದು ತಪ್ಪು ಎಂದು ಭಾವಿಸುತ್ತೇನೆ. ಆಮೇಲೆ ನಿಗಮಗಳು ಮತ್ತು ಕಾರ್ಪೊರೇಷನ್‌ಗಳು, ವಾರ್ಷಿಕ ವರದಿ ಸಿದ್ಧಪಡಿಸಿ ಕೊಡುತ್ತಾರೆ. ಅವುಗಳನ್ನು ನೋಡಿದರೆ ಅಸಹ್ಯವಾಗುತ್ತದೆ. ದುಬಾರಿ ಕಾಗದಗಳ ಮೇಲೆ ಮುದ್ರಿಸಿ ಕೊಡುತ್ತಾರೆ. ದುಂದು ವೆಚ್ಚ ಮಾಡದೇ, ಸಾಮಾನ್ಯ ಪೇಪರ್‌ನಲ್ಲಿ ಮುದ್ರಿಸಿ ಕೊಟ್ಟರೂ ನೋಡುತ್ತಾರೆ. ಹೆಚ್ಚು ಹಣವನ್ನು ಪ್ರಿಂಟ್ ಮಾಡುವುದಕ್ಕೆ ಕೊಟ್ಟು, ಮಾಡುವಂತಹ ಅವಶ್ಯಕತೆ ಇಲ್ಲವೆಂದು ಹೇಳುತ್ತೇನೆ.

೪-೦೦ ಪಿ.ಎಂ.

ಆದುದರಿಂದ ಈ ಒಂದು ದುಂದು ವೆಚ್ಚವನ್ನು ನಿಲ್ಲಿಸಿದರೆ ಜನಗಳ ಹಣವನ್ನು ಸರಿಯಾದ ರೀತಿಯಲ್ಲಿ ವಿನಿಯೋಗ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ವಿನಾ ಈ ರೀತಿಯಾಗಿ ದುಂದುವೆಚ್ಚ ಮಾಡಿದರೆ ತೆರಿಗೆಯ ಹಣವನ್ನು ವ್ಯಯ ಮಾಡುವುದು ಅಕ್ಷಮ್ಯ ಅಪರಾಧವಾಗುತ್ತದೆ. ಆದುದರಿಂದ ಈ ದುಂದು ವೆಚ್ಚವನ್ನು ತಪ್ಪಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಇದೇ ತರಹದಲ್ಲಿ ಇನ್ನು ೨-೩ ವಿಚಾರದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ತಾವು ಬೆಂಗಳೂರಿನಲ್ಲಿ ಬೆಟ್ಟಿಂಗ್ ಟ್ಯಾಕ್ಸ್ ಕಡಿಮೆ ಮಾಡಿದ್ದೀರಿ. ಈಗ ೧೦ ಪರ್ಸೆಂಟ್ ಮಾಡಿದ್ದೀರಿ ಇದು ಸದುದ್ದೇಶದಿಂದಲೇ ಇರಬಹುದು. ಈವಾಗ ಬೆಂಗಳೂರಿನಲ್ಲಿ ರೇಸ್‌ಕೋರ್ಸ್‌ಗೆ ಹೊರಗಡೆಯವರು ಬೆಟಿಂಗ್ ಮಾಡುವುದಕ್ಕಾಗುವುದಿಲ್ಲವೆಂದು ಈ ತೆರಿಗೆಯನ್ನು ಕೊಡದೆ ತಪ್ಪಿಸಿಕೊಳ್ಳುತ್ತಾರೆಂದು ಅವರು ಒಳಗಡೇನೇ ರೇಸ್‌ಕೋರ್ಸ್‌ನಲ್ಲಿ ಬೆಟಿಂಗ್ ಮಾಡಲಿ ಅನ್ನುವ ಸದುದ್ದೇಶದಿಂದ ತಾವು ಮಾಡಿರಬಹುದು. ನಾನು ಇದನ್ನು ಸರಿಯೋ ತಪ್ಪೋ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಇದರಿಂದ ಬೆಟಿಂಗ್ ಹ್ಯಾಬಿಟ್ ಇರುವವರು ಯಾರು ಇದ್ದಾರೆ ಅವರಿಗೆ ನೀವು ಪ್ರೋತ್ಸಾಹ ಕೊಟ್ಟ ಹಾಗೆ ಆಗುತ್ತದೆ. ಈ ಪ್ರೋತ್ಸಾಹ ಅಷ್ಟು ಸರಿಯಾದುದಲ್ಲ ಆದುದರಿಂದ ಈ ಬೆಟಿಂಗ್ ಟ್ಯಾಕ್ಸನ್ನು ಕಡಿಮೆ ಮಾಡುವುದಕ್ಕೆ ಬಿಟ್ಟು ಜಾಸ್ತಿ ಮಾಡಿದರೆ ಉತ್ತಮವಾಗುತ್ತದೆ, ಇದರ ಕಡೆಗೆ ಮಾನ್ಯ ಮುಖ್ಯಮಂತ್ರಿಗಳು ಗಮನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏತಕ್ಕೆಂದರೆ ಈವೊತ್ತು ಮೈಸೂರಿನಲ್ಲಿ ಕಡಿಮೆ ಇದೆ. ಅದೇ ರೀತಿಯಾಗಿ ಬೆಂಗಳೂರಿನಲ್ಲೂ ಇರಬೇಕು ಅನ್ನುವುದು ಸರಿಯಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಈ ಬೆಟಿಂಗ್ ಟ್ಯಾಕ್ಸನ್ನು ಜಾಸ್ತಿ ಮಾಡಿದರೆ ಒಳ್ಳೆಯದು ಎಂದು ಹೇಳುತ್ತೇನೆ. ಸರ್ಕಾರದವರು ಇದರ ಬಗ್ಗೆ ಏನೊಂದು ಸದುದ್ದೇಶ ಇಟ್ಟುಕೊಂಡಿದ್ದಾರೋ ಅವರು ದುಡ್ಡು ಇಲ್ಲದೇ ಹೊರಗೆ ಇದನ್ನು ಬೆಟಿಂಗ್ ಮಾಡದೇ ಒಳಗೇನೆ ಬೆಟಿಂಗ್ ಮಾಡುತ್ತಾರೆ ಅಂದುಕೊಂಡು ಈ ತೆರಿಗೆಯನ್ನು ಕಡಿಮೆ ಮಾಡಿರಬಹುದು. ಅಲ್ಲದೇ ಯಾರೂ ಕೂಡಾ ಹೊರಗಡೆ ಬೆಟಿಂಗ್ ಮಾಡಿದರೆ ಇದರಿಂದ ಫಲಪ್ರದವಾಗಲಾರದು. ಒಳಗೇನೇ ಬೆಟಿಂಗ್ ಮಾಡಲಿ ಎಂದು ತಿಳಿದುಕೊಂಡು ಈ ತೆರಿಗೆಯನ್ನು ಕಡಿಮೆ ಮಾಡಿರಬಹುದು, ಆದುದರಿಂದ ನಾನು ಮತ್ತೊಮ್ಮೆ ಹೇಳುತ್ತೇನೆ, ಈ

ಬೆಟಿಂಗ್ ಟ್ಯಾಕ್ಸನ್ನು ಕಡಿಮೆ ಮಾಡಿರುವುದನ್ನು ಪುನಃ ಹೆಚ್ಚು ಮಾಡಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದನ್ನು ಮತ್ತೊಮ್ಮೆ ಪುನರಾಲೋಚಿಸಬೇಕೆಂದು ಹೇಳುತ್ತೇನೆ. ಇದರ ಜೊತೆಗೆ ರೆಕ್ಟಿಫೈಡ್‌ಸ್ಪಿರೀಟ್‌ಗೆ ಮತ್ತು ವೈನ್‌ಗೆ ಏನು ತೆರಿಗೆ ಕಡಿಮೆ ಮಾಡಿದ್ದೀರೋ ಅದನ್ನೂ ಸಹ ಜಾಸ್ತಿ ಮಾಡುವ ಹಾಗೆ ಪುನರಾಲೋಚಿಸಬೇಕು ಎಂದು ಹೇಳುತ್ತೇನೆ.

ಇನ್ನೊಂದೆರಡು ಮುಖ್ಯವಾದ ವಿಚಾರಗಳನ್ನು ಪ್ರಸ್ತಾಪ ಮಾಡಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ. ಈ ಬೆಂಗಳೂರು ನಗರದ ಜನತೆಗೆ ಸರ್ಕಾರದ ಸೌಲಭ್ಯಗಳು ಯಾವುದೂ ಸಿಕ್ಕುವುದಿಲ್ಲ. ಸಿಕ್ಕಿದರೂ ಬಹಳ ಕಡಿಮೆ ಸೌಲಭ್ಯಗಳು ಸಿಕ್ಕುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಬೆಂಗಳೂರು ನಗರ ಪಾಲಿಕೆ ಇದ್ದಾಗಿನಿಂದಲೂ ಯಾವ ತರಹ ಪರಿಸ್ಥಿತಿ ಇಲ್ಲಿ ಇತ್ತೋ ಅದೇ ಪರಿಸ್ಥಿತಿ ಈವೊತ್ತೂ ಇದೆ. ಒಂದು ರಸ್ತೆಯ ವಿಷಯದಲ್ಲಾಗಲಿ, ಕುಡಿಯುವ ನೀರಿನ ಬಗ್ಗೆಯಾಗಲಿ, ವಿದ್ಯುಚ್ಛಕ್ತಿ ಸರಬರಾಜು ಆಗಲಿ, ಅಥವಾ ಸ್ಟ್ರೀಟ್ ಲೈಟ್ ಬಗ್ಗೆಯಾಗಲಿ ಈ ಬಗ್ಗೆ ಬೆಂಗಳೂರಿನ ಜನತೆ ಕಾರ್ಪೊರೇಷನ್‌ಗೆ ಏನು ತೆರಿಗೆ ಕೊಡುತ್ತಾರೆ, ಆ ತೆರಿಗೆಯಿಂದ ಅವರು ಆ ಕೆಲಸವನ್ನು ಮಾಡಿಕೊಂಡು ಹೋಗಿ ಅವರಿಗೆ ತಕ್ಕ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಈವೊತ್ತಿನ ದಿವಸ ಈ ನಗರ ಪಾಲಿಕೆಯವರು ಬೆಂಗಳೂರಿನ ಜನತೆಗೆ ಸರಿಯಾದ ಸೌಲಭ್ಯಗಳನ್ನು ಕೊಡದೆ ಹಿಂದಿನ ಒಂದು ಪರಿಸ್ಥಿತಿಯಲ್ಲೇ ಕೈ ಕಟ್ಟಿಕೊಂಡು ಕೂತಿದ್ದಾರೆ, ಇದು ಒಂದು ಚಿಂತಾಜನಕವಾದ ಪರಿಸ್ಥಿತಿ ಎಂದು ಹೇಳಿದರೆ ತಪ್ಪಾಗಲಾರದು. ನಮ್ಮ ರಾಜ್ಯದಲ್ಲಿ ಆಕ್ಟ್ರಾಯಿಯನ್ನು ತೆಗೆದು ಹಾಕಿದ ಮೇಲೆ ನಗರಪಾಲಿಕೆಗಳು ಮತ್ತು ಮುನಿಸಿಪಾಲಿಟಿಗಳ ಒಂದು ಆರ್ಥಿಕ ಪರಿಸ್ಥಿತಿ ಈವೊತ್ತಿನ ದಿವಸ ಅಷ್ಟು ಚೆನ್ನಾಗಿಲ್ಲ. ಇದನ್ನು ಉತ್ತಮ ಪಡಿಸಬೇಕಾದುದು ಬಹಳ ಮುಖ್ಯ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಗಮನ ಕೊಡಬೇಕು ಎಂದು ಹೇಳುತ್ತೇನೆ. ಈಗಾಗಲೇ ಇದರ ಬಗ್ಗೆ ಒಂದು ಸಮಿತಿಯನ್ನು ಏರ್ಪಡಿಸಿದ್ದರು. ಅವರು ಸ್ಥಳೀಯ ಸಂಸ್ಥೆಗಳ ಹಣಕಾಸಿನ ಪರಿಸ್ಥಿತಿಯ ವಿಚಾರವಾಗಿ ಅಧ್ಯಯನ ಮಾಡಿ ಅವುಗಳನ್ನು ಹೇಗೆ ಉತ್ತಮ ಪಡಿಸಬೇಕೆನ್ನುವುದರ ಬಗ್ಗೆ ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಸರ್ಕಾರದವರು ಆ ವರದಿಯನ್ನು ಆದಷ್ಟು ಶೀಘ್ರವಾಗಿ ಒಪ್ಪಿಕೊಂಡು ಈ ನಗರಪಾಲಿಕೆ ಮತ್ತು ಮುನಿಸಿಪಾಲಿಟಿಗಳ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಪಡಿಸುವ ಹಾಗೆ ಕ್ರಮ ತೆಗೆದುಕೊಳ್ಳಬೇಕಾದುದು ಬಹಳ ಮುಖ್ಯ ಎಂದು ನಾನು ಈ ಸಂದರ್ಭದಲ್ಲಿ ತಮ್ಮ ಮುಂದೆ ಹೇಳಬಯಸುತ್ತೇನೆ. ಇನ್ನು ಈ ಮೋಟಾರ್ ವೆಹಿಕಲ್ ಟ್ಯಾಕ್ಸ್‌ನಿಂದ ಸ್ವಲ್ಪ ಷೇರ್ಸನ್ನು ಕಾರ್ಪೋರೇಷನ್ನಿನವರಿಗಾಗಲಿ ಮುನಿಸಿಪಾಲಿಟಿಯವರಿಗಾಗಲಿ ಕೊಟ್ಟು ಅವರನ್ನು ಮೇಲಕ್ಕೆತ್ತಬೇಕಾದುದು ಬಹಳ ಮುಖ್ಯ. ಆ ಕೆಲಸವನ್ನು ತಾವು ಮಾಡಬೇಕಾಗಿದೆ ಇಲ್ಲವಾದರೆ ಅವರು ಹಣಕಾಸಿನ ಮುಗ್ಗಟ್ಟಿನಿಂದ ಯಾವಕೆಲಸವೂ ಆಗದೆ ಅನೇಕ ತೊಂದರೆಗಳು ಆಗುತ್ತವೆ. ಈದೃಷ್ಟಿಯಿಂದ ನಗರ ಪಾಲಿಕೆಗೂ ಮತ್ತು ಮುನಿಸಿಪಾಲಿಟಿಗೂ ಅವರಿಗೆ ವರಮಾನ ಹೆಚ್ಚಾಗಿ ಬರುವಂತೆ ತಾವು ನೋಡಿಕೊಳ್ಳಬೇಕು ಎಂದು ಹೇಳುತ್ತೇನೆ. ಮೊದಲು ಆಕ್ಟ್ರಾಯಿ ಇದ್ದಾಗ ಬೆಂಗಳೂರಿನ ನಗರಪಾಲಿಕೆಯ ಪರಿಸ್ಥಿತಿ ಚೆನ್ನಾಗಿತ್ತು, ಈಗ ಆಕ್ಟ್ರಾಯಿ ತೆಗೆದಿದ್ದರಿಂದ ಅವರಿಗೆ ಪರಿಹಾರ ಕೊಡುವುದು ಕಡಿಮೆಯಾಗಿರುವುದರಿಂದ ಜನತೆಗೆ ಹೆಚ್ಚು ಸೌಲಭ್ಯಗಳು ಸಿಕ್ಕುತ್ತಾ ಇಲ್ಲ. ಈ ನಗರಪಾಲಿಕೆಯವರು ಬೆಂಗಳೂರಿನ ಜನತೆಗೆ ಹೆಚ್ಚು ಹೆಚ್ಚು ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಅವರು ನಮಗೆ ಈ ಆಕ್ಟ್ರಾಯಿ ಕಾಂಪನ್ಸೇಷನ್ ಏನು ಕೊಡುತ್ತಾರೋ ಅದು ಬಹಳಷ್ಟು ಕಡಿಮೆ ಜಾಸ್ತಿ ಮಾಡಿದರೆ ಒಳ್ಳೆಯದು ಎಂದು ಹೇಳುತ್ತಾರೆ. ಆದುದರಿಂದ ನಗರಪಾಲಿಕೆಗಾಗಲಿ ಅಥವಾ ಮುನಿಸಿಪಾಲಟಿಗೇ ಆಗಲಿ ಆ ಜನತೆಗೆ ಹೆಚ್ಚು ಸೌಲಭ್ಯಗಳನ್ನು ಕೊಡುವುದಕ್ಕೆ ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಗಮನ ಕೊಡಬೇಕೆಂದು ನಾನು ಅವರನ್ನು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಪ್ರೊಫೆಷನಲ್ ಟ್ಯಾಕ್ಸ್ ಬಗ್ಗೆ ಈ ಆಯವ್ಯಯ ಪತ್ರದಲ್ಲಿ ಒಂದು ವಿಚಾರ ಹೇಳಿದೆ. ಈಗ ಸ್ಯಾಲರೀಡ್ ಪೀಪಲ್‌ಗೆ ೧೫೦೦ ರೂಪಾಯಿನವರೆಗೆ ಎಕ್ಸ್‌ಮ್ಷನ್ ಲಿಮಿಟ್ ಮಾಡಿದ್ದಾರೆ. ಆದೇ ಬೇರೆಯವರಿಗೆ ಈ ತರಹದ ಯಾವ ಎಕ್ಸ್‌ಮ್ಷನ್ ಇಲ್ಲ. ಬೇರೆಯವರಿಗೆ ೧೦೦ ರೂಪಾಯಿ ವರಮಾನ ಬಂದರೂ ಕೂಡ ಈ ಪ್ರೊಫೆಷನಲ್ ಟ್ಯಾಕ್ಸ್ ಅನ್ನು ಕಟ್ಟಲೇಬೇಕು. ಆದುದರಿಂದ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಎಲ್ಲಾ ಜನಗಳಿಗೂ ಸಮಾನ ರೀತಿಯಲ್ಲಿ ಇದು ಅನ್ವಯಿಸುವ ಹಾಗೆ ಈ ಪ್ರೊಫೆಷನಲ್ ಆಕ್ಟ್‌ಗೆ ಒಂದು ತಿದ್ದುಪಡಿ ತರಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.— ಪ್ರೊಫೆಷನಲ್ ಟ್ಯಾಕ್ಸನ್ನು ತೆಗೆದು ಹಾಕುತ್ತೇವೆಂದು ನಿಮ್ಮ ಜನತಾಪಕ್ಷದ ಪ್ರಣಾಳಿಕೆಯಲ್ಲೇ ಹೇಳಿದ್ದಾರೆ. ನಿಮ್ಮ ಭಾಷಣದಲ್ಲಿ ಅದನ್ನು ತೆಗೆದುಹಾಕುತ್ತೇವೆ ಅನ್ನುವ ಪ್ರಶ್ನೆಯೇ ಬರುವುದಿಲ್ಲವಲ್ಲ. ಇದಕ್ಕೆ ಒಂದು ತಿದ್ದುಪಡಿ ತೆಗೆದುಕೊಂಡು ಬನ್ನಿ ಎಂದು ನಿಮ್ಮ ಪ್ರಣಾಳಿಕೆಗೆ ಇದು ವಿರುದ್ಧವಾಗುವುದಿಲ್ಲವೇ?

ಶ್ರೀ ಎಂ.ಎಸ್. ನಾರಾಯಣರಾವ್.— ಇದು ಸಧ್ಯಕ್ಕೆ ಮಾಡಬೇಕಾದ ವಿಚಾರ. ಮಾನ್ಯ ಮುಖ್ಯಮಂತ್ರಿಗಳ ಗಮನ ಹರಿಸಿದ್ದೇವೆ. ಈ ಪ್ರೊಫೆಷನಲ್ ಟ್ಯಾಕ್ಸನ್ನು ತೆಗೆದು ಹಾಕಬೇಕೆಂದು ಪ್ರಣಾಳಿಕೆಯಲ್ಲಿದ್ದರೂ ಸಹ ಅದನ್ನು ಯಾವ ವರ್ಷದಿಂದ ತೆಗೆದುಹಾಕಬೇಕೆಂದು ಹೇಳಲಿಲ್ಲ. ಈ ವರ್ಷ ತೆಗೆದು ಹಾಕಬೇಕೋ, ಮುಂದಿನ ವರ್ಷ ತೆಗೆದುಹಾಕಬೇಕೋ. ಅದರ ಮುಂದಿನ ವರ್ಷ ತೆಗೆದದುಹಾಕ ಬೇಕೋ ಅದೊಂದನ್ನೂ ಅದರಲ್ಲಿ ಹೇಳಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.— ನೀವೆಲ್ಲಾ ಸೇರಿ ತೆಗೆದು ಹಾಕಬೇಕೆಂದು ಹೇಳಿ ಮುಖ್ಯಮಂತ್ರಿಗಳ ಗಮನಕ್ಕೆ ತರಬಹುದಲ್ಲ.

ಶ್ರೀ ಎಂ. ಎಸ್. ನಾರಾಯಣರಾವ್— ಈ ಪ್ರೊಫೆಷನಲ್ ಟ್ಯಾಕ್ಸ್ ಬಗ್ಗೆ ತೆಗೆದು ಹಾಕುವುದರ ಬಗ್ಗೆ ಈಗಾಗಲೇ ಅವರಿಗೆ ಗೊತ್ತಿದೆ. ನಾನು ಹೇಳಿದ್ದು ಇದು ತುರ್ತಾಗಿ ಆಗಬೇಕಾದ ವಿಚಾರವಾದು ದರಿಂದ ಇದರ ಬಗ್ಗೆ ಸ್ಟೆಪ್ಸ್ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಪ್ರೊಫೆಷನಲ್ ಟ್ಯಾಕ್ಸ್ ಅನ್ನು ತೆಗೆದುಹಾಕಬಾರದು ಅನ್ನುವ ಉದ್ದೇಶವಿಲ್ಲ, ಅದನ್ನು ಹಂತ ಹಂತವಾಗಿ ತೆಗೆದುಹಾಕಬೇಕು ಅನ್ನುವ ಅಭಿಪ್ರಾಯ ಇದೆ. ಅದುವರೆಗೆ ಈ ಸ್ಯಾಲರೀಡ್ ಪೀಪಲ್‌ಗೆ ೧೫೦೦ ರೂಪಾಯಿ ಬರುವ ವರೆಗೆ ಯಾವ ರೀತಿಯಾಗಿ ಈಗ ಎಕ್ಸೆಮ್ಷನ್ ಇದೆಯೋ ಅದೇ ರೀತಿಯಾಗಿ ಎಲ್ಲರಿಗೂ ಕೂಡ ಇದು ಅನ್ವಯಿಸುವ ಹಾಗೆ ಇರಬೇಕು ಎನ್ನುವುದು ನನ್ನ ಒಂದು ಅಭಿಪ್ರಾಯ. ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ಪರಿಶೀಲಿಸಿ ಖಂಡಿತ ಮಾಡಿಕೊಡಬೇಕೆಂದು ಹೇಳುತ್ತೇನೆ. ಇಲ್ಲದೇ ಹೋದರೆ ಬೆಂಗಳೂ ರಿನ ನಗರವಾಸಿಗಳಿಗೆ, ಪೆಟ್ಟಿ ಬಿಸಿನೆಸ್ ಕೂಲಿಗಾರರು ಇನ್ನು ಇತರರಿಗೆ ಬಹಳ ತೊಂದರೆಯಾಗುತ್ತದೆ. ಬೇರೆಯವರು ಸ್ವತಂತ್ರವಾಗಿ ಉದ್ದಿಮೆ ಇಟ್ಟುಕೊಂಡಿರುವವರಿಗೆ ಬಹಳ ತೊಂದರೆಯಾಗುತ್ತದೆ. ಎಲ್ಲರಿಗೂ ಸಮನಾಗಿ ಅನ್ವಯಿಸುವ ಹಾಗೆ ಮಾಡಬೇಕು ಎಂದು ಹೇಳುತ್ತೇನೆ. ಇನ್ನು ಪ್ರೊಫೆಷನಲ್ ಟ್ಯಾಕ್ಸ್ ಅನ್ನು ಕಟ್ಟದೇ ಇದ್ದವರಿಗೆ ಬಡ್ಡಿ ಮತ್ತು ದಂಡ ಈ ಎರಡನ್ನೂ ಕೂಡ ವಿಧಿಸುತ್ತಾರೆ. ಬಹಳ ಕಾಲದಿಂದ ಈ ತೆರಿಗೆಯನ್ನು ಕಟ್ಟದೇ ಉಳಿಸಿಕೊಂಡಂಥಾವರಿಗೆ ಬಡ್ಡಿ ಮತ್ತು ದಂಡ ಏನು ವಿದಿಸು ತ್ತಾರೆ ಇದರಿಂದ ಆ ಜನರಿಗೆ ಬಹಳ ತೊಂದರೆಯಾಗಿದೆ. ಆದುದರಿಂದ ನಾನು ಹೇಳುವುದೇನೆಂದರೆ ಈ ಬಡ್ಡಿ ಮತ್ತು ದಂಡವನ್ನು ಮನ್ನಾ ಮಾಡಿ ಈ ಪ್ರೊಫೆಷನಲ್ ಟ್ಯಾಕ್ಸ್ ಅನ್ನು ಹಂತ ಹಂತವಾಗಿ ಕಂತಿನ ಮುಖಾಂತರವಾಗಿ ಕಟ್ಟಿಸಿಕೊಳ್ಳುವ ಒಂದು ವ್ಯವಸ್ಥೆ ಮಾಡುವ ಹಾಗೆ ಮಾನ್ಯ ಮುಖ್ಯ ಮಂತ್ರಿಗಳು ಪರಿಶೀಲಿಸಬೇಕು ಎಂದು ಹೇಳುತ್ತೇನೆ. ಇದು ಈಗ ಸುಪ್ರೀಂಕೋರ್ಟಿನಲ್ಲಿದೆ. ಹೈ ಕೋರ್ಟಿಗೆ ಇದು ಹೋಗಿತ್ತು. ಅವರು ಈ ಪ್ರೊಫೆಷನಲ್ ಟ್ಯಾಕ್ಸ್ ಹಾಕುವುದು ಸರಿ ಅಂದ ಮೇಲೆ ಇದು ಸುಪ್ರೀಂಕೋರ್ಟಿಗೆ ಹೋಗಿದೆ. ಅದರಿಂದ ಎಷ್ಟೋ ಜನರು ತೆರಿಗೆಗಳು ಕೊಟ್ಟಿಲ್ಲ. ಅವರು ಈ ತೆರಿಗೆಯನ್ನು ಕೊಡಬೇಕಾದರೆ ಬಡ್ಡಿ ಮತ್ತು ದಂಡ ಎರಡನ್ನೂ ಸೇರಿಸಿಕೊಡಬೇಕಾಗುತ್ತದೆ. ಆದುದರಿಂದ ಈ ಬಡ್ಡಿ ಮತ್ತು ದಂಡವನ್ನು ಮನ್ನಾ ಮಾಡಿ, ಕೊಡಬೇಕಾದ ತೆರಿಗೆಯನ್ನು ಕಂತಿನ ಮೇಲೆ ಕೊಡತಕ್ಕ ಸೌಲಭ್ಯವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಿಕೊಡಬೇಕೆಂದು ನಾನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಆದುದರಿಂದ ಈ ಆಯವ್ಯಯ ಪತ್ರದಲ್ಲಿ ಸಾಕಷ್ಟು ಒಳ್ಳೆಯ ಅಂಶ ಗಳಿರುವುದರಿಂದ ನಾನು ಇದನ್ನು ಸಂಪೂರ್ಣವಾಗಿ ಬೆಂಬಲಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಜಿ.ರಾಜೂಗೌಡ (ಹನೂರು).— ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈ ಸದನದ ಮುಂದೆ ಮಂಡಿಸಿದಂಥ ೧೯೮೬-೮೭ರ ಆಯವ್ಯಯ ಪತ್ರವನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲಿಕ್ಕೆ ಇಚ್ಛಿಸುತ್ತೇನೆ. ಸ್ವಾಮಿ, ಪ್ರಥಮತಃ ಒಂದು ರಾಜ್ಯದ ಆಡಳಿತವು ಹೇಗೆ ಇರಬೇಕು ಎನ್ನುವುದರ ಬಗ್ಗೆ ಸ್ವಲ್ಪ ಸಮೀಕ್ಷೆ ಮಾಡಬೇಕು. ಒಂದು ರಾಜ್ಯದ ಆಡಳಿತದಲ್ಲಿ ಭ್ರಷ್ಟಾಚಾರ ಕಡಿಮೆಯಾಗಿ ಎಲ್ಲೆಲ್ಲೂ ಶಾಂತಿ ಸೌಹಾರ್ದತೆ ಬೇರೂರಿ ಜನರ ಆಸ್ತಿ, ಪ್ರಾಣ ರಕ್ಷಣೆಗೆ ಯಾವ ರೀತಿಯಲ್ಲೂ ಭಂಗ ಬಾರದಂತೆ ಆಡಳಿತ ವ್ಯವಸ್ಥೆ ಮಾಡಿ, ಸಮಾಜದ ಕಟ್ಟಕಡೆಯ ಮನುಷ್ಯನಿಗೂ ಹೊಟ್ಟೆ ತುಂಬುವಷ್ಟು ಆಹಾರ ಮತ್ತು ಎಲ್ಲಾ ವಿಧವಾದ ನಾಗರೀಕ ಸೌಲಭ್ಯ ದೊರೆ

ತಾಗ ಅಂತಹ ಒಂದು ಆಡಳಿತವನ್ನು ಉತ್ತಮವಾದ ಆಡಳಿತ ಎಂದು ಪರಿಗಣಿಸಲಿಕ್ಕೆ ಸಾಧ್ಯವಾಗುತ್ತದೆ. ಈಗ ನಾನು ಹೇಳಿರತಕ್ಕ ವಿಷಯದಲ್ಲಿ ಒಂದೊಂದು ಅಂಶವನ್ನೂ ಕೂಡ ಒರೆಗೆ ಹಚ್ಚಿ ನೋಡಿದಾಗ, ನಮ್ಮ ರಾಜ್ಯದ ಆಡಳಿತ ಎಷ್ಟರಮಟ್ಟಿಗೆ ಸಮರ್ಪಕವಾಗಿ ನಡೆಯುತ್ತಿದೆ ಎಂದು ವಿಶ್ಲೇಷಣೆ ಮಾಡುವುದಾದರೆ ಭ್ರಷ್ಟಾಚಾರ ಎನ್ನತಕ್ಕಂಥಾದ್ದು ಈ ರಾಜ್ಯದಲ್ಲಿ ವ್ಯಾಪಕವಾಗಿ ಇದೆ ಎನ್ನುವುದನ್ನು ಸರ್ಕಾರವೇ ಒಪ್ಪಿಕೊಂಡಿದೆ, ಅಂದ ಮೇಲೆ ನಾನು ಆ ಬಗ್ಗೆ ವಾದ ವಿವಾದ ಮಾಡಲಿಕ್ಕೆ ಇಚ್ಛೆಪಡುವುದಿಲ್ಲ. ಎರಡನೆಯದು, ಶಾಂತಿ ಸೌಹಾರ್ದತೆ ಇದು ಕನಸಿನ ಗಂಟಾಗಿದೆ. ಬೆಳಿಗ್ಗೆ ಎದ್ದ ತಕ್ಷಣ ರಾಜ್ಯದ ಅನೇಕ ಕಡೆ ಗಲಭೆ. ಹಿಂಸಾಚಾರಗಳಿಂದ ಜನಜೀವನ ಅಸ್ತವ್ಯಸ್ತವಾಗಿದೆ ಎನ್ನುವುದನ್ನು ದಿನಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ, ಬಾನುಲಿ ವರದಿಗಳಿಂದ ನಾವೆಲ್ಲರೂ ಕೇಳುತ್ತಾ ಇದ್ದೇವೆ. ನಿಜವಾಗಲೂ ಕೂಡ ಕಾನೂನು ಮತ್ತು ಶಾಂತಿಪಾಲನೆ ಸುವ್ಯವಸ್ಥೆಯಾಗಿ ದೇಶದಲ್ಲಿಯೋ ಎನ್ನುವುದರ ಬಗ್ಗೆ ಒಂದು ಉದಾಹರಣೆ ಮೂಲಕ ಮಾನ್ಯ ಸದನಕ್ಕೆ ನಾನು ನಿರೂಪಣೆ ಮಾಡುವುದಾದರೆ ಸ್ವಾಮಿ, ಒಬ್ಬ ಸುರದ್ರೂಪಿಯಾಗಿರತಕ್ಕಂಥ ಯುವತಿ ತನ್ನ ಅಂಗಾಂಗಗಳಿಗೆಲ್ಲಾ ಹೆಚ್ಚಿನ ಮೌಲ್ಯವಿರತಕ್ಕಂಥ ಒಡವೆಗಳನ್ನು ಧರಿಸಿಕೊಂಡು ಹಿಮಾಲಯ ಪರ್ವತದಿಂದ ಕನ್ಯಾಕುಮಾರಿವರೆಗೆ ಏಕಾಂಗಿಯಾಗಿ ಅಹೋರಾತ್ರಿ ಸಂಚಾರ ಮಾಡಿದಾಗ ಅವಳ ಮೈಮೇಲೆ ಇಗತಕ್ಕಂಥ ಒಂದು ಕೂದಲಿಗೂ ಕೊಂಕು ಇಲ್ಲದೇ ಇರತಕ್ಕ ಪರಿಸ್ಥಿತಿ ಬಂದಾಗ ಈ ದೇಶದಲ್ಲಿ ಶಾಂತಿ ಮತ್ತು ಕಾನೂನು ಸುವ್ಯವಸ್ಥೆಯಾಗಿದೆ ಎಂದು ಘಂಟಾಘೋಷವಾಗಿ ಹೇಳಲಿಕ್ಕೆ ಸಾಧ್ಯ ಎಂದು ನನ್ನ ವೈಯಕ್ತಿಕ ಅಭಿಪ್ರಾಯ. ಆ ರೀತಿ ಈ ದೇಶದಲ್ಲಿ ಇದೆಯೋ ಎಂದು ನಾವು ಪರೀಕ್ಷೆ ಮಾಡಿದಾಗ ಖಂಡಿತವಾಗಿಯೂ ಆ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಯಾರಾದರೂ ಕೂಡ ಹೇಳಲಿಕ್ಕೆ ಸಾಧ್ಯವಾಗುತ್ತದೆ. ಅಂದ ಮೇಲೆ ಇಂತಹ ಸನ್ನಿವೇಶವನ್ನು ನಾವು ಕಾಣಲಿಕ್ಕೆ ಸಾಧ್ಯವಾಗುತ್ತದೆಯೋ ಮುಂದೆ ಬರತಕ್ಕ ದಿನಗಳಲ್ಲಿ ಎಂದು ಯೋಚನೆ ಮಾಡಿದಾಗ ಅದೂ ಕೂಡ ಸಾಧ್ಯವಾಗುವುದಿಲ್ಲ ಎಂದು ಹೇಳಲಿಕ್ಕೆ ಇಚ್ಛಿಸುತ್ತೇನೆ. ಏಕೆಂದರೆ, ನಮ್ಮ ಆಸ್ತಿ ಮತ್ತು ಪ್ರಾಣವನ್ನು ಯಾರು ರಕ್ಷಣೆ ಮಾಡಬೇಕೋ ಅಂತಹ ಪೋಲೀಸರಿಂದಲೇ ಅತ್ಯಾಚಾರ, ಮಾನಾಪಹರಣ ನಡೆಯತಕ್ಕ ಕಾಲದಲ್ಲಿ ಕಿರು ವಯಸ್ಸಿನಲ್ಲೇ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಕಾಮಕೇಳಿ. ಲಗ್ನವಾಗಿ ಎಷ್ಟೋ ವರ್ಷಗಳಾದ ಮೇಲೆ ವರದಕ್ಷಿಣೆಗೆ ಒತ್ತಾಯ ಇಂತಹ ಪಿಡುಗು ಇರತಕ್ಕ ಸನ್ನಿವೇಶದಲ್ಲಿ ಶಾಂತಿ ಸೌಹಾರ್ದತೆಯನ್ನು ಬಯಸತಕ್ಕದ್ದು ಕನಸಿನ ಗಂಟಾಗಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಎರಡನೆಯದಾಗಿ, ಮನುಷ್ಯ ತನ್ನ ಪೈಶಾಚಿಕತೆಯಿಂದ ಮಾನವ ಮಾಂಸವನ್ನು ಶೋಷಣೆ ಮಾಡಿ ತೃಪ್ತಿ ಪಡುವುದನ್ನು ವೃತ್ತಿ ಮಾಡಿಕೊಂಡಿರತಕ್ಕ ಕಾಲದಲ್ಲಿ ಖಂಡಿತವಾಗಿ ಒಳ್ಳೆಯ ದಿನಗಳನ್ನು ನೆನೆಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಜೊತೆಗೆ ಮಾನವನ ಪರಿಸರದಲ್ಲಿ ಶಾಂತಿ ಸೌಹಾರ್ದತೆ ನೆಲೆಸುವುದು ಅಸಾಧ್ಯ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಸಮಾಜದ ಕಟ್ಟಕಡೆಯ ಮನುಷ್ಯನಿಗೆ ಹೊಟ್ಟೆ ತುಂಬ ಆಹಾರ ಕೊಡುವುದರ ಬಗ್ಗೆ ಯೋಚನೆ ಮಾಡುವುದಾದರೆ, ಇಂದು ಆಹಾರದ ವಿಷಯದಲ್ಲಿ ಸ್ವಾವಲಂಬಿಗಳಾಗಿದ್ದೇವೆ. ಆದರೆ ಅನೇಕರು ತಮ್ಮ ಹೊಟ್ಟೆ ತುಂಬುವಷ್ಟು ತಮಗೆ ಸಿಗುತ್ತಿಲ್ಲ ಎಂದು ಪರಿತಪಿಸುತ್ತಾ ಇದ್ದಾರಲ್ಲಾ ಅದಕ್ಕೆ ಏನು ಕಾರಣ ಎಂದು ನೋಡಿದಾಗ ಆಹಾರ ಪದಾರ್ಥಗಳನ್ನು ಕೊಂಡುಕೊಳ್ಳ ಶಕ್ತಿಯನ್ನು ಪಡೆದಿಲ್ಲ ಎಂದು ಹೇಳದೇ ವಿಧಿಯಿಲ್ಲ. ಕೊಂಡುಕೊಳ್ಳತಕ್ಕ ಶಕ್ತಿಯನ್ನು ತುಂಬಿಕೊಡತಕ್ಕ ವ್ಯವಸ್ಥೆ ಮಾಡಬೇಕು. ಅದನ್ನು ಯಾವ ರೀತಿ ಮಾಡಬೇಕು ಅಂದರೆ ಕೈತುಂಬ ಕೆಲಸ ಕೊಡಬೇಕು. ಅದು ಯಾವ ರೀತಿ ಅಂದರೆ, ಎರಡು ನೀತಿಯ ಮುಖಾಂತರ ಕೈತುಂಬ ಕೆಲಸ ಒದಗಿಸಲಿಕ್ಕೆ ಸಾಧ್ಯ. ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವುದರ ಮೂಲಕ ಅವನ ಜೀವನೋಪಾಯಕ್ಕೆ ಕೆಲಸವನ್ನು ಒದಗಿಸತಕ್ಕಂಥಾದ್ದು ಒಂದು ನೀತಿ. ಎರಡನೆಯದು, ಒಣ ಪ್ರದೇಶವನ್ನು ನೀರಾವರಿಗೆ ಒಳಪಡಿಸಿ ತನ್ಮೂಲಕ ಜನಗಳನ್ನು ಉದ್ಯೋಗದಲ್ಲಿ ತೊಡಗಿಸತಕ್ಕದು ಒಂದು ನೀತಿ. ಈ ಎರಡು ನೀತಿಗಳಿಂದ ಜನಗಳಿಗೆ ಕೆಲಸಗಳನ್ನು ಕೊಡುವುದಕ್ಕೆ ಸಾಧ್ಯ ಎನ್ನುವುದು ನನ್ನ ಅಭಿಪ್ರಾಯ. ನಮ್ಮ ರಾಜ್ಯದಲ್ಲಿ ಶೇಕಡ ೧೫ರಿಂದ ೧೬ರಷ್ಟು ಮಾತ್ರ ಖುಷ್ಕಿ ಭೂಮಿ ನೀರಾವರಿಗೆ ಒಳಪಟ್ಟಿದೆ. ಹೆಚ್ಚಿನ ಭೂಮಿ ಖುಷ್ಕಿಯಾಗಿರುವುದರಿಂದ ರಾಜಾಸ್ಥಾನ ಬಿಟ್ಟರೆ ಕರ್ನಾಟಕದಲ್ಲಿ ಅತೀ ಹೆಚ್ಚಿನ ಖುಷ್ಕಿ ಭೂಮಿ ಇರುವುದರಿಂದ ಈ ಭೂಮಿ ನೀರಾವರಿಗೆ ಒಳಪಟ್ಟರೆ ಮಾತ್ರ, ಹೆಚ್ಚಿನ ಜನಗಳಿಗೆ ಕೈತುಂಬ ಕೆಲಸಕೊಡುವುದಕ್ಕೆ ವ್ಯವಸಾಯ ಕ್ಷೇತ್ರದಲ್ಲಿ ಸಾಧ್ಯ. ಈ ದಿಶೆಯಲ್ಲಿ ಸರ್ಕಾರ ಕಾರ್ಯೋನ್ಮುಖವಾಗಿ ಸಣ್ಣ, ಮಧ್ಯಮ, ಭಾರಿ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದಾರೆ. ಇವನ್ನೆಲ್ಲಾ ಮುಗಿಸಬೇಕಾದರೆ ೬೫೦೦ ಕೋಟಿ ರೂಪಾಯಿಗಳು ನಮಗೆ ಬೇಕಾಗುತ್ತದೆ ಎಂಬ ಅಂದಾಜನ್ನು ತಜ್ಞರು ಮಾಡಿದ್ದಾರೆ.

ಬಹುಶಃ ಇಷ್ಟು ದುಡ್ಡು ಎಲ್ಲಿಂದ ಬರುತ್ತದೆ ಎಂದು ಯೋಚನೆ ಮಾಡಿದಾಗ ಬಹಳ ಕಷ್ಟ ಎನಿಸುತ್ತದೆ, ರಾಜ್ಯದ ಸಂಪನ್ಮೂಲವನ್ನು ಗಮನದಲ್ಲಿಟ್ಟುಕೊಂಡಾಗ ಈ ಒಂದು ನೀರಾವರಿ ಕೆಲಸವನ್ನು ನಾವು ನಿಗದಿ ಮಾಡಿರತಕ್ಕ ಅವಧಿಯಲ್ಲಿ ಮುಗಿಸಲಿಕ್ಕೆ ಸಾಧ್ಯವಾಗುತ್ತದೆಯೋ ಎಂದು ಪರಿಶೀಲನೆ ಮಾಡಿದಾಗ ಖಂಡಿತ ಸಾಧ್ಯವಾಗುವುದಿಲ್ಲ. ಎನ್ನುವುದು ಎಲ್ಲರಿಗೂ ಅರ್ಥವಾಗುತ್ತದೆ. ಅಂದ ಮೇಲೆ ನಾವು ಯಾವ ರೀತಿ ಮಾಡಲಿಕ್ಕೆ ಸಾಧ್ಯ ಎಂದು ವಿಶ್ಲೇಷಣೆ ಮಾಡಿದಾಗ ಕೆಲವು ವಿಚಾರಗಳಲ್ಲಿ ತ್ಯಾಗ ಮಾಡಲೇ ಬೇಕಾಗಿರುತ್ತದೆ. ಇದು ಅತಿ ಮುಖ್ಯವಾದ ವಿಷಯ ಚೀನಾ ದೇಶದಲ್ಲಿ ತಮ್ಮ ದೇಶವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಬೇಕು ಎಂದು ಮನಸ್ಸು ಮಾಡಿದಾಗ ಸಾಕಷ್ಟು ಸಂಪನ್ಮೂಲ ಇಲ್ಲದೇ ಇರತಕ್ಕ ಕಾಲದಲ್ಲಿ ಒಂದು ವರ್ಷ ದೇಶದಲ್ಲಿರತಕ್ಕ ಯಾರೂ ಕೂಡ ವಾಹನಗಳನ್ನು ಉಪಯೋಗಿಸಿಕೊಳ್ಳಬಾರದು ಎಂದು ಹೇಳಿ ಪೆಟ್ರೋಲ್, ಡೀಸಲ್‌ನ ಸಾವಿರಾರು ಕೋಟಿ ರೂಪಾಯಿಗಳನ್ನು ಉಳಿಸಿ ತಮ್ಮ ದೇಶವನ್ನು ಅಭಿವೃದ್ಧಿಯ ಕಡೆಗೆ ಕೊಂಡೊಯ್ದರು. ಅದೇ ರೀತಿ ನಾವು ತ್ಯಾಗವನ್ನು ಮಾಡುವುದಕ್ಕೆ ತಯಾರಾಗಿರಬೇಕು. ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಸಲಹೆ ಕೊಡುತ್ತೇನೆ. ನಾವು ಇವತ್ತಿನ ದಿವಸ ಕೈಗೆತ್ತಿಕೊಂಡಿರತಕ್ಕ ಭಾರಿ, ಮಧ್ಯಮ, ಸಣ್ಣ ನೀರಾವರಿ ಯೋಜನೆಗಳೆಲ್ಲವನ್ನೂ ಪೂರೈಸಬೇಕಾದರೆ ೬೫೦೦ ಕೋಟಿ ರೂಪಾಯಿ ಬೇಕು ಎಂದು ಏನು ಹೇಳುತ್ತಾರೋ ಆ ಸಂಪನ್ಮೂಲವನ್ನು ಒದಗಿಸತಕ್ಕ ವಿಧಾನವನ್ನು ಹೇಳುತ್ತೇನೆ ಏನೆಂದರೆ, ಈ ರಾಜ್ಯದಲ್ಲಿ ಮುಜರಾಯಿಗೆ ಒಳಪಟ್ಟಿರತಕ್ಕ ೩೫ ಸಾವಿರ ದೇವಸ್ಥಾನಗಳಿವೆ ಅವರಲ್ಲಿ ೨೦೦ ದೊಡ್ಡ ದೇವಾಲಯಗಳಿವೆ. ದೊಡ್ಡ ದೇವಾಲಯಗಳಲ್ಲಿ ಪ್ರತಿ ವರ್ಷ ಅದರ ಆದಾಯಕ್ಕೆ ಕೈ ಹಾಕುವುದು ಬೇಡ, ವಿಗ್ರಹಗಳಿಗೆ ದಿನನಿತ್ಯ ಅಲಂಕಾರ ಮಾಡುತ್ತಾರಲ್ಲಾ ಅದಕ್ಕೆ ಕೈಹಾಕುವುದು ಬೇಡ, ವಿಶೇಷ ಪೂಜೆ ದಿವಸ ಅಲಂಕಾರ ಮಾಡುತ್ತಾರಲ್ಲಾ ಅದಕ್ಕೆ ಕೈ ಹಾಕುವುದು ಬೇಡ, ಇವೆಲ್ಲವನ್ನೂ ಬಿಟ್ಟು ಯಥೇಚ್ಛವಾಗಿ ಭಕ್ತಾದಿಗಳಿಂದ ಬಂದಿರತಕ್ಕ ವಜ್ರ ವೈಢೂರ್ಯ, ಬೆಳ್ಳಿ ಬಂಗಾರ ಮುಂತಾದ ಅಮೂಲ್ಯ ಒಡವೆ ವಸ್ತುಗಳನ್ನು ಯಾವುದೋ ಒಂದು ಸ್ಥಳದಲ್ಲಿ ಇಟ್ಟಿದ್ದಾರೆ. ಅದು ಎಷ್ಟೋ ಇದೆ, ಅದಕ್ಕೆ ಲೆಕ್ಕ ಇಲ್ಲ, ಎಷ್ಟಿದೆ ಎಂದು ಗೊತ್ತೂ ಇಲ್ಲ. ಬಹುಶಃ ೮೦೦ ದೇವಸ್ಥಾನಗಳಲ್ಲಿರತಕ್ಕ ಈ ನಿಧಿಯನ್ನು ಗಣನೆಗೆ ತೆಗೆದುಕೊಂಡರೆ ಎಷ್ಟು ಕೋಟಿ ರೂಪಾಯಿಗಳು ನೀರಾವರಿಗೆ ಬೇಕೋ ಅದಕ್ಕಿಂತ ಹೆಚ್ಚು ಸಂಪನ್ಮೂಲವನ್ನು ಈ ಮೂಲಕವಾಗಿ ಸಂಗ್ರಹಿಸಬಹುದು ಎಂದು ನನ್ನ ಬುದ್ಧಿಗೆ ಹೊಳೆಯುತ್ತಿದೆ. ಸರ್ಕಾರದವರು ಯಾವ ರೀತಿ ಸಂಪನ್ಮೂಲಗಳನ್ನು ಸಂಗ್ರಹಿಸಬೇಕೋ ಅದನ್ನೆಲ್ಲಾ ಸಂಗ್ರಹಿಸಿದ್ದಾರೆ. ಆದರೆ ಈ ಕಡೆ ಅವರ ದೃಷ್ಟಿ ಬಿದ್ದಿಲ್ಲ.

ಅವರ ದೃಷ್ಟಿ ಈ ಕಡೆ ಹರಿದಿಲ್ಲ. ಏಕೆ ಹರಿದಿಲ್ಲವೋ ಗೊತ್ತಿಲ್ಲ. ಇದರ ಕಡೆಗೆ ದೃಷ್ಟಿಯನ್ನು ಹರಿಸಿದರೆ ಹೆಚ್ಚು ಸಂಪನ್ಮೂಲವನ್ನು ಗಳಿಸಬಹುದು ಮತ್ತು ನೀರಾವರಿ ಕಾರ್ಯವನ್ನು ಮುಗಿಸಬಹುದು. ೧೦೦ ಕೋಟಿ ರೂಪಾಯಿಯನ್ನು ಖರ್ಚು ಮಾಡಬೇಕೆಂದು ನಮ್ಮ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿದೆ ಅದಕ್ಕಿಂತ ಹೆಚ್ಚಿನ ದುಡ್ಡನ್ನು ಖರ್ಚು ಮಾಡಿ ಕೃಷ್ಣಾ ಮೇಲ್ದಂಡೆ ಯೋಜನೆ ಮತ್ತು ಕಾವೇರಿ ಬೇಸಿನ್ ಯೋಜನೆ ಏನು ಇದೆ ಅವನ್ನೆಲ್ಲಾ ಶೀಘ್ರವಾಗಿ ಮಾಡಬಹುದು. ಹೆಚ್ಚಿನ ಭೂಮಿ ನೀರಾವರಿಗೆ ಒಳಪಟ್ಟಾಗ ಹೆಚ್ಚಿನ ಜನರಿಗೆ ಕೆಲಸವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಖುಷ್ಕಿ ಭೂಮಿಯಲ್ಲಿ ಒಂದು ಎಕರೆಯಲ್ಲಿ ಒಂದು ವರ್ಷದಲ್ಲಿ ೧೫ ಜನಕ್ಕೆ ಕೆಲಸ ಕೊಡಬಹುದು. ಅದೇ ಒಂದು ಎಕರೆ ನೀರಾವರಿ ಭೂಮಿಯಲ್ಲಿ ಸುಮಾರು ೪೦–೫೦ ಜನಗಳಿಗೆ ಕೆಲಸ ಕೊಡುವುದಕ್ಕೆ ಬರುತ್ತದೆ. ಇದರಿಂದ ಮೂರು ಪಟ್ಟು ಕೆಲಸವನ್ನು ಜನಗಳಿಗೆ ಒದಗಿಸಿದಂತಾಗುತ್ತದೆ. ಈ ದಿಶೆಯಲ್ಲಿ ಸರ್ಕಾರ ಗಮನಹರಿಸಿ ಸಂಪನ್ಮೂಲ ಹೆಚ್ಚು ಮಾಡತಕ್ಕಂತಹ ಕೆಲಸವನ್ನು ಮಾಡಬೇಕೆಂದು ನಾನು ಅವರನ್ನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ರಾಜೂಗೌಡರವರು ದೇವಸ್ಥಾನದ ಆಭರಣದ ಬಗ್ಗೆ ಮಾತನಾಡುತ್ತಿದ್ದಾರೆ. ಅವರ ಉದ್ದೇಶ ದೇವರ ವಿಗ್ರಹಕ್ಕೂ ಕೈ ಹಾಕಬೇಕೆಂದೇ.

ಶ್ರೀ ಜಿ. ರಾಜೂಗೌಡ.—ನಾನು ಮೊದಲೇ ಹೇಳಿದ ಹಾಗೆ ತಾವು ಅರ್ಥ ಮಾಡಿಕೊಳ್ಳಲಿಲ್ಲ. ದೇವಸ್ಥಾನದಲ್ಲಿರತಕ್ಕಂತಹ ಚಿರ ಆಸ್ತಿಗಳಿಗೆ ಕೈ ಹಾಕುವುದು ಬೇಡ, ನಿತ್ಯ ಪೂಜೆ ಮಾಡುವ ಮತ್ತು ದೇವರಿಗೆ ಹಾಕುವ ಆಭರಣಗಳಿಗೆ ಕೈ ಹಾಕುವುದು ಬೇಡ, ವಿಶೇಷ ಪೂಜೆಗಳಲ್ಲಿ ಹಾಕುವ ಆಭರಣಗಳಿಗೆ ಕೈ ಹಾಕುವುದು ಬೇಡ. ಅದೆಲ್ಲಕ್ಕಿಂತಲೂ ಹೆಚ್ಚಾಗಿ ಭಕ್ತಾದಿಗಳಿಂದ ಸಂಗ್ರಹಣೆ ಆಗಿರತಕ್ಕಂತಹ

ಚಿನ್ನ, ಬೆಳ್ಳಿ ಮುಂತಾದವೆಲ್ಲಾ ಅರ್ಚಕರ ಪಾಲಾಗುತ್ತದೆ. ಇದರಿಂದಾಗಿ ಅನೇಕ ದುರುಪಯೋಗ ವಾಗುತ್ತಿದೆ. ಇಂತಹ ವಸ್ತುಗಳ ಕಡೆಗೆ ತಾವು ದೃಷ್ಟಿಯಿಟ್ಟು ಅದನ್ನು ಸದುಪಯೋಗ ಮಾಡಿಕೊಳ್ಳಿ ಎಂದು ಸಲಹೆಯನ್ನು ಕೊಡುತ್ತಿದ್ದೇನೆ. ಆ ವಸ್ತುಗಳನ್ನು ಏನು ಮಾಡುತ್ತಿದ್ದಾರೆಂದರೆ, ಪೆಟ್ಟಿಗೆಯಲ್ಲಿ ಇಟ್ಟಿದ್ದಾರೆ ಅದು ಯಾರ ಪಾಲಾಗುತ್ತದೆಯೋ ಗೊತ್ತಿಲ್ಲ. ಅವೆಲ್ಲಾ ಅರ್ಚಕರ ಪಾಲಾಗುತ್ತಿದೆ. ನೀರಾವರಿ ಕಾರ್ಯಗಳಿಗೆ ಏನೂ ಸಿಕ್ಕುತ್ತಿಲ್ಲ. ತಾವು ದಯವಿಟ್ಟು ಇದನ್ನು ಅರ್ಥ ಮಾಡಿಕೊಳ್ಳಬೇಕು. ಮುಂದೆ ನಮ್ಮ ಭವಿಷ್ಯದಲ್ಲಿನ ಭಾವೀ ಪ್ರಜೆಗಳು ತಮ್ಮ ಸರಹದ್ದಿನಲ್ಲಿ ಕೆಲಸ ಮಾಡಬೇಕಾದರೆ, ನೀರಾವರಿ ಯೋಜನೆ ಏನಿದೆಯೋ ಅದೆಲ್ಲವನ್ನೂ ಅವರು ಉಪಯೋಗಿಸಿಕೊಳ್ಳಬೇಕೆಂಬ ದೃಷ್ಟಿಯಲ್ಲಿ ಹೇಳುತ್ತಿದ್ದೇನೆ. ಇದನ್ನು ಅಪಾರ್ಥ ಮಾಡಿಕೊಳ್ಳತಕ್ಕಂಥಾದ್ದು ಬೇಡವೆಂದು ಶ್ರೀ ಹೆಮ್ಮಿಗೆಯವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಜನತಾ ಸರ್ಕಾರ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಒಂದು ಘೋಷಣೆ ಮಾಡಿದೆ. ಪ್ರತಿಯೊಂದು ಮಂಡಲ ಪಂಚಾಯಿತಿಯಲ್ಲೂ ಕೊನೇ ಪಕ್ಷ ಸುಮಾರು ೨೫೦ ಎಕರೆ ಪ್ರದೇಶವನ್ನು ನೀರಾವರಿಗೆ ಒಳಪಡಿಸುತ್ತೇವೆಂದು ಹೇಳಿದ್ದಾರೆ. ಎಲ್ಲಿ ನೀರಾವರಿ ಇದೆಯೋ ಅಲ್ಲಿ ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ, ಎಲ್ಲಿ ನೀರಾವರಿಯಿಲ್ಲವೋ ಅಲ್ಲಿ ಈ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಲೋಕೋಪಯೋಗಿ ಸಚಿವರು ಒಂದು ಒಳ್ಳೆಯ ಯೋಜನೆಯನ್ನು ಮಾಡಿದ್ದಾರೆ ಅದು ಯಾವುದೆಂದರೆ ಗಂಗಾ ಕಲ್ಯಾಣ ಯೋಜನೆ. ಎಲ್ಲಿ ಪರಿಶಿಷ್ಟ ವರ್ಗದ ಜನಗಳಿದ್ದಾರೆಯೋ, ಎಲ್ಲಿ ಅಪರ ಜಮೀನಿದೆಯೋ ಅಲ್ಲಿ ಗಂಗಾ ಕಲ್ಯಾಣ ಯೋಜನೆ ಮಾಡಿ ತನ್ಮೂಲಕ ನೀರಾವರಿ ಮಾಡಬೇಕೆಂಬ ಉದ್ದೇಶ ಇದೆ. ಬಹುಶಃ ಪ್ರತಿಯೊಂದು ಮಂಡಲ ಪಂಚಾಯಿತಿಗೂ ಕೂಡ ಇಂತಹ ೨-೩ ಗಂಗಾ ಕಲ್ಯಾಣ ಯೋಜನೆಯನ್ನು ಮಾಡಿದಾಗ ಅರ್ಧ ಎಕರೆ, ಒಂದು ಎಕರೆ ಇರತಕ್ಕಂತಹ ರೈತರಿಗೆ ಈ ಮೂಲಕ ಅನುಕೂಲವಾಗುತ್ತದೆ. ಆದುದರಿಂದ ಈ ಕಾರ್ಯವನ್ನು ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಇಲ್ಲಿ ಭೀಕರ ಬರಗಾಲದ ಬಗ್ಗೆ ಮಾತನಾಡಿದ್ದೇವೆ. ನಮ್ಮ ರಾಜ್ಯದಲ್ಲಿ ಬರಗಾಲ ಬಂದಿದೆಯೆಂದು ಎಲ್ಲರೂ ವಿಶೇಷವಾಗಿ ಪುಟಗಟ್ಟಲೆ ಮಾತನಾಡಿದ್ದೇವೆ. ಒಂದು ವಿಚಿತ್ರವಾದಂತಹ ಸನ್ನಿವೇಶವೇನೆಂದರೆ ಈ ಸಾರಿ ಮಲೆನಾಡಿನಲ್ಲಿ ಮತ್ತು ಕರಾವಳಿ ಪ್ರದೇಶದಲ್ಲಿ ಕುಡಿಯುವ ನೀರಿಗೆ ಬಹಳ ಅಭಾವ ಬಂದಿದೆ. ಇದು ಈಗ ಏಕೆ ಬಂತು? ಹಿಂದೆ ಮಳೆಗಾಲದಲ್ಲಿ ಕನಿಷ್ಠ ಮಳೆಯಾಗಿರಲಿಲ್ಲವೇ ಆಗ ಈ ಪರಿಸ್ಥಿತಿ ಬಂದಿರಲಿಲ್ಲ. ಮಲೆನಾಡು, ಕರಾವಳಿ ಪ್ರದೇಶದಲ್ಲಿ ಈ ಸಾರಿ ಏಕೆ ಬಂತು ಎಂದು ಯೋಚನೆ ಮಾಡಿದಾಗ ಈ ಕೊರೆ ಬಾವಿಗಳು ಬಂದು ಹೀಗಾಗಿದೆಯೆಂದು ಅನಿಸುತ್ತದೆ. ನಮ್ಮ ಸರ್ಕಾರ ೯೦,೦೦೦ ಕೊರೆ ಬಾವಿಗಳನ್ನು ಈ ರಾಜ್ಯದಲ್ಲಿ ಕೊರೆದಿದ್ದಾರೆಂದು ಹೇಳಿದ್ದಾರೆ. ಕೊಳವೆ ಬಾವಿಗಳ ಸಂಖ್ಯೆಯನ್ನು ಹೆಚ್ಚು ಮಾಡುತ್ತಾ ಮಾಡುತ್ತಾ ಭೂಮಿಯಲ್ಲಿರತಕ್ಕಂತಹ ಜಲ ಸಂಪತ್ತನ್ನು ಹೆಚ್ಚಿಗೆ ಉಪಯೋಗಿಸುತ್ತಾ ಉಪಯೋಗಿಸುತ್ತಾ ನೀರಿನ ಮಟ್ಟ ಕಡಿಮೆಯಾಗುತ್ತದೆ. ಇದು ೨೦೦-೩೦೦ ಅಡಿ ಕೆಳಗಡೆ ಹೋಗಿರುವುದರಿಂದ ಮಲೆನಾಡು, ಕರಾವಳಿ ಪ್ರದೇಶದಲ್ಲಿ ಕುಡಿಯುವ ನೀರಿನ ಅಭಾವ ಜಾಸ್ತಿಯಾಗುತ್ತಿದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರ ಇದರ ಬಗ್ಗೆ ಅತಿ ಮುತುವರ್ಜಿ ವಹಿಸಿ ಗಮನಹರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ರಾಜ್ಯದಲ್ಲಿ ಎಷ್ಟು ನೀರು ದೊರೆಯುತ್ತದೆ ಅನ್ನತಕ್ಕಂಥಾದ್ದನ್ನು ಜಲ ಅನ್ವೇಷಣಾ ಅಧಿಕಾರಿಗಳಿಂದ ಪರೀಕ್ಷಿಸಿ ಎಲ್ಲೆಲ್ಲಿ ಕೊಳವೆ ಬಾವಿಗಳನ್ನು ಹಾಕಬೇಕೋ ಅಲ್ಲಲ್ಲಿ ಹಾಕಬೇಕು. ಯದ್ವಾತದ್ವ ಕೊಳವೆ ಬಾವಿಗಳನ್ನು ಹಾಕಿ ಜಲ ಸಂಪತ್ತನ್ನೆಲ್ಲಾ ಖಾಲಿ ಮಾಡಬೇಕೇ? ಮುಂದಿನ ಪೀಳಿಗೆ ಬಗ್ಗೆ ಯೋಚನೆ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮೂರನೆಯದಾಗಿ ಎರಡು ಸಾವಿರಕ್ಕಿಂತಲೂ ಹೆಚ್ಚು ಜನಸಂಖ್ಯೆ ಇರತಕ್ಕಂತಹ ಪ್ರತಿಯೊಂದು ಗ್ರಾಮಕ್ಕೂ ನೀರನ್ನು ಒದಗಿಸುತ್ತೇವೆಂಬ ಘೋಷಣೆಯನ್ನು ಮಾಡಿದ್ದಾರೆ. ಆ ದಿಶೆಯಲ್ಲಿ ರಾಷ್ಟ್ರೀಯ ಕಾರ್ಯಕ್ರಮವಾಗಲೀ, ನೀರು ಸರಬರಾಜು ಯೋಜನೆಯಾಗಲೀ ಕೈಗೆ ಎತ್ತಿಕೊಳ್ಳಲಿಲ್ಲವೆಂದರೆ, ಇದೇನು ನಮಗೆ ಅರ್ಥವಾಗುತ್ತಿಲ್ಲ. ಪ್ರತಿಯೊಂದು ಸಾರಿ ಕೇಳಿದಾಗ ಮಾಡುತ್ತೇವೆಂಬ ಭರವಸೆ ಕೊಟ್ಟರೇ ಹೊರತು ಕಾರ್ಯತಃ ಮಾಡಿಲ್ಲ. ೭ ಸಾವಿರ ೮ ಸಾವಿರ ಜನರಿರತಕ್ಕಂತಹ ಕಡೆಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಆರು ಸಾವಿರ ಪ್ರಜಾ ಸಂಖ್ಯೆಯಿರುವ ಗ್ರಾಮಗಳಿಗೂ ಕೂಡ ಕುಡಿಯುವುದಕ್ಕೆ ನಲ್ಲಿ ಮುಖಾಂತರ ನೀರು ಸರಬರಾಜು ಮಾಡಿಲ್ಲ. ಈಗ ತಾವು ಏನು ಘೋಷಣೆ ಮಾಡಿದ್ದೀರಿ ಅದನ್ನು ಬದಲಾಯಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ? ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ೧೯೮೧-೮೨ನೇ ಇಸವಿಯಲ್ಲಿ ತಲಾದಾಯ ಎಷ್ಟಿತ್ತೋ

ಅದನ್ನು ಈಗ ಅಂದರೆ, ೧೯೮೫—೮೬ರಲ್ಲಿ ಜಾಸ್ತಿ ಮಾಡಿದ್ದೇವೆಂದು ಹೇಳಿದ್ದೀರಿ. ಇದರಿಂದ ಅವರು ಶ್ರೀಮಂತರಾಗುತ್ತಾರೆ ಅನ್ನತಕ್ಕಂತಹ ಘೋಷಣೆಯನ್ನು ಮಾಡಿದ್ದಾರೆ. ಇದು ನನಗೆ ಹಿಡಿಸಲಿಲ್ಲ. ಯಾವುದೋ ಒಂದು ಕಾರ್ಖಾನೆಯನ್ನು ಮಾಡುತ್ತಿದ್ದೀರಿ, ಆ ಕಾರ್ಖಾನೆಗೆ ೧೦ ಲಕ್ಷ ರೂಪಾಯಿ ಲಾಭ ಬಂದಿದೆಯೆಂದು ಆಡಿಟ್ ರಿಪೋರ್ಟ್‌ನಲ್ಲಿ ಇದೆ. ಆ ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕಂತಹ ಕಾರ್ಮಿಕರೇನಿದ್ದಾರೆ, ಅವನ ಸ್ಥಿತಿ ಏನಿತ್ತೋ, ಹಾಗೆಯೇ ಮುಂದುವರೆದಿದೆ. ಕಾರ್ಖಾನೆ ಪ್ರಾರಂಭವಾದಾಗ ಯಾವ ಗುಡಿಸಲಿನಲ್ಲಿ ಆ ಕಾರ್ಮಿಕ ವಾಸ ಮಾಡುತ್ತಿದ್ದನೋ ಯಾವ ಮಡಿಕೆ, ಕುಡಿಕೆ ಉಪಯೋಗಿಸುತ್ತಿದ್ದನೋ ಅದೇ ಸ್ಥಿತಿ ಮುಂದುವರಿದಿದೆ. ಈ ಕಡೆಗೆ ದೃಷ್ಟಿ ಹರಿಸಬೇಕೇ ಹೊರತು ೧೦ ಕೋಟಿ ರೂಪಾಯಿ ಲಾಭ ಬಂದಿದೆಯೆನ್ನುವುದರಲ್ಲಿ ಅರ್ಥವಿಲ್ಲ. ೧೯೮೦-೮೧ನೇ ಇಸವಿಗಿಂತಲೂ ಈಗ ತಲಾದಾಯ ಹೆಚ್ಚಿದೆಯೆಂದು ಹೇಳುವುದರಲ್ಲಿ ಅರ್ಥವಿಲ್ಲ. ಒಂದು ರಾಜ್ಯದಲ್ಲಿ ಎಷ್ಟು ಜನಸಂಖ್ಯೆಯಿದೆ ಅದರಲ್ಲಿ ಶೇಕಡಾ ಎಷ್ಟರಷ್ಟು ಜನ ಎರಡು ಹೊತ್ತು ನೆಮ್ಮದಿಯಾಗಿ ಊಟ ಮಾಡುತ್ತಿದ್ದಾರೆನ್ನುವ ಬಗ್ಗೆ ಲೆಕ್ಕ ಹಾಕಬೇಕೇ ವಿನ: ೧೯೮೦—೮೧ರಲ್ಲಿ ೧೬೦೦ ತಲಾದಾಯವಿದ್ದು ಈಗ ೨೦೧೦ ಇದೆಯೆಂದು ಹೇಳುವುದಲ್ಲ. ಆ ಮಾತಿನಲ್ಲಿ ಅರ್ಥವಿಲ್ಲ. ಶೇಕಡಾ ಎಷ್ಟರಷ್ಟು ಜನ ಎರಡು ಹೊತ್ತು ಆಹಾರವನ್ನು ಕೊಂಡುಕೊಳ್ಳುವುದಕ್ಕೆ ಶಕ್ತಿಯಿಲ್ಲವೆಂಬುದನ್ನು ಸಮೀಕ್ಷೆ ಮಾಡಿ ತಲಾದಾಯವನ್ನು ತೋರಿಸುವುದು ಒಳ್ಳೆಯದು ಎನ್ನುವುದರ ಬಗ್ಗೆ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಯಾವುದಾದರೂ ಒಂದು ಕ್ಲಿಷ್ಟ ಪರಿಸ್ಥಿತಿ ಬಂದಾಗ, ಸಮಸ್ಯೆ ಉದ್ಭವವಾದಾಗ ಈ ಸಮಸ್ಯೆಯು ಒಬ್ಬರಿಂದೊಬ್ಬರಿಗೆ ಹಾಡಿದಾಗ ಆಯೋಗ ರಚನೆ ಮಾಡಿ, ಅದು ಬರಲಿ, ಎಂದು ಸಂಬಂಧಪಟ್ಟವರನ್ನು ಸಮಾಧಾನ ಮಾಡತಕ್ಕಂತಹ ಪರಿಪಾಠ ಬಹಳ ಕಾಲದಿಂದ ನಡೆದು ಬಂದಿದೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎಷ್ಟು ಆಯೋಗಗಳನ್ನು ರಚನೆ ಮಾಡಿದೆ. ಎಷ್ಟು ಆಯೋಗಗಳ ವರದಿಯು ಸರ್ಕಾರದ ಕೈ ಸೇರಿದೆ. ಅದರಲ್ಲಿ ಎಷ್ಟು ಅಂಗೀಕಾರವಾಗಿದೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಯಾವ ಆಯೋಗದ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಆ ಆಯೋಗ ರಚನೆ ಮಾಡುವಾಗ ಎಷ್ಟು ಕೋಟಿ ರೂಪಾಯಿ ಖರ್ಚಾಗಿದೆ. ಉದಾಹರಣೆಗೆ ಹೇಳಬೇಕೆಂದರೆ, ಗಂಗಾರಾಂ ಕಟ್ಟಡದ ಬಗ್ಗೆ ದೇಸಾಯಿ ಸಮಿತಿಯನ್ನು ನೇಮಿಸಿದ್ದೀರಿ. ಅಲ್ಲಿಂದ ವರದಿ ಬಂದಿದೆ. ಸರ್ಕಾರದ ಕೈಸೇರಿದೆ. ಅದರಲ್ಲಿ ಅನೇಕ ಅಧಿಕಾರಿಗಳು ತಪ್ಪಿತಸ್ಥರೆಂದು ನಿರೂಪಣೆಯಾಗಿದೆ. ಅವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಎಷ್ಟು ವರ್ಷದಿಂದ ತನಿಖೆಯಾಗುತ್ತಿದೆ? ಇಂತಹ ಎಷ್ಟು ಆಯೋಗಗಳನ್ನು ರಚನೆ ಮಾಡಿದ್ದೀರಿ. ಇದಕ್ಕೆ ಸರ್ಕಾರದಿಂದ ಎಷ್ಟು ದುಡ್ಡು ಖರ್ಚಾಗಿದೆ. ಕೆಲವು ಅಧಿಕಾರಿಗಳು ತಪ್ಪಿತಸ್ಥರೆಂದು ದೇಸಾಯಿಯವರು ತೀರ್ಮಾನ ಮಾಡಿದ್ದರೂ ಕೂಡ ಅದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಆಯೋಗ ರಚನೆ ಮಾಡತಕ್ಕಂತಹ ಉದ್ದೇಶವಾದರೂ ಏನು?

೪-೩೦ ಪಿ. ಎಂ.

ಏತಕ್ಕೋಸ್ಕರ ಇಂತಹ ಆಯೋಗ ರಚನೆ ಮಾಡುತ್ತಿದ್ದೀರಿ, ಇಂತಹ ಪರಿಪಾಠವನ್ನು ಬಿಡುತ್ತೀರಾ? ಆಯೋಗ ರಚನೆ ಮಾಡಿದಮೇಲೆ ಅವರಿಂದ ಬರತಕ್ಕ ವರದಿಯನ್ನು ಈ ಸಭೆಯ ಮುಂದಿಟ್ಟು ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಲು ಶೀಘ್ರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇನ್ನು ಇವೊತ್ತಿನ ದಿವಸ ಉಚ್ಚನ್ಯಾಯಾಲಯದಲ್ಲಿ ಸುಮಾರು ೭೦ ಸಾವಿರ ಕೇಸುಗಳು ಪೆಂಡಿಂಗ್ ಇದೆ ಎಂದು ಹೇಳಿದ್ದೀರಲ್ಲ ಅಂದರೆ ಏನು ಅರ್ಥ. ಪುರಾತನ ಕಾಲದಲ್ಲಿ ಅನ್ಯಾಯವಾದವರು ಬಂದು ಗಂಟೆ ಬಾರಿಸಿದರೆ ಸಾಕು, ರಾಜ ಬಂದು ನ್ಯಾಯ ಕೊಡುತ್ತಿದ್ದ ಎನ್ನುವ ಕಾಲ ಇತ್ತು. ಪ್ರಜಾ ಪ್ರಭುತ್ವದಲ್ಲಿ ೭೦ ಸಾವಿರ ಕೇಸುಗಳು ಉಚ್ಚನ್ಯಾಯಾಲಯದಲ್ಲಿ ಪೆಂಡಿಂಗ್ ಇದೆ ಅಂದರೆ ಸರ್ಕಾರ ಇದೆಯೋ ಎಂದು ಕೇಳಬೇಕಾಗುತ್ತದೆ. ಅಡ್ವೋಕೇಟ್ ಜನರಲ್ ಇದ್ದಾರೆ, ಗವರ್ನಮೆಂಟ್ ಪ್ಲೀಡರ್ ಇದ್ದಾರೆ, ಆದರೂ ಇದನ್ನು ಬಗೆಹರಿಸಿಲ್ಲ. ಅದರಲ್ಲಿ ೫ ವರ್ಷದ ಕೇಸುಗಳು ೧೦ ವರ್ಷದ ಕೇಸುಗಳು ಎಷ್ಟು ಇವೆ? ಇವುಗಳನ್ನೆಲ್ಲಾ ಗುಡ್ಡೆಹಾಕಿಕೊಂಡು ಹೇಳುತ್ತಾ ಹೋದರೆ ಏನೂ ಪ್ರಯೋಜನ ಇಲ್ಲ. ಗ್ರಾಮಾಂತರ ಪ್ರದೇಶದ ಭೂ ಸ್ವಾಧೀನ ಪ್ರಕರಣಗಳು ಏನಿವೆ ಅವೆಲ್ಲಾ ಉಚ್ಚನ್ಯಾಯಾಲಯಕ್ಕೆ ಬಂದು ಅದು ಬಹಳ ವರ್ಷಗಳಿಂದ ಪೆಂಡಿಂಗ್ ಇದೆ. ಆದ್ದರಿಂದ, ಅವುಗಳನ್ನು ಬೇಗ ವಿಲೇವಾರಿ ಮಾಡಲಿಕ್ಕೆ

ಸೂಕ್ತ ವ್ಯವಸ್ಥೆ ಮಾಡಿ, ರಾಜ್ಯದಲ್ಲಿರತಕ್ಕ ಸಾಮಾನ್ಯ ಪ್ರಜೆಗೆ ನ್ಯಾಯವನ್ನು ಆದಷ್ಟು ಶೀಘ್ರವಾಗಿ ದೊರಕಿಸಿಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ರೇಷ್ಮೆ ಅಭಿವೃದ್ಧಿ ಬಗ್ಗೆ ವಿಶ್ವಬ್ಯಾಂಕಿನವರು ಒಂದು ಯೋಜನೆ ತಯಾರು ಮಾಡಿ ೫ ವರ್ಷದಲ್ಲಿ ಖರ್ಚು ಮಾಡಬೇಕೆಂದು ಹೇಳಿದ್ದರ ಬಗ್ಗೆ, ನಮಗೆ ಇರತಕ್ಕ ಸಂಪನ್ಮೂಲ ಕಡಿಮೆ ಎಂದು ಹೇಳಿ, ರೀಇಂಬರ್ಸ್ ಮಾಡತಕ್ಕ ವಿಚಾರ ತಿಳಿದುಬಂದಾಗ ನಾನು ಒಂದು ಗಮನಸೆಳೆಯುವ ಸೂಚನೆಯನ್ನು ಕೊಟ್ಟೆ. ಆಗ ಮಂತ್ರಿಗಳು ಅದಕ್ಕೆಲ್ಲಾ ಅವಕಾಶ ಕೊಡುವುದಿಲ್ಲ ಖಂಡಿತವಾಗಿ ನಾವು ಏನು ಒಂದು ಅವಧಿಯನ್ನು ನಿಗಧಿ ಮಾಡಿದ್ದೇವೋ ಆ ಅವಧಿಯಲ್ಲಿ ವಿಶ್ವಬ್ಯಾಂಕಿನ ಯೋಜನೆಯಲ್ಲಿ ಅಡಗಿರತಕ್ಕ ಎಲ್ಲ ಕಾರ್ಯಕ್ರಮವನ್ನು ಚಾಚೂ ತಪ್ಪದೆ ಮಾಡುತ್ತೇನೆಂದು ಆಶ್ವಾಸನೆಯನ್ನು ನನಗೆ ಕೊಟ್ಟರು. ಇವತ್ತಿನ ದಿವಸ ನೋಡಿದರೆ ಮಂತ್ರಿಗಳು ಕೊಟ್ಟಿರತಕ್ಕ ಆಶ್ವಾಸನೆ ಪೊಳ್ಳು ಎಂದು ಅನಿಸುತ್ತದೆ, ಈ ಸಂದರ್ಭದಲ್ಲಿ ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದು ಇಷ್ಟೆ, ನಾವು ಅತಿ ಹೆಚ್ಚಿನ ಜನ ಆದರಿಂದ ಏನು ಜೀವನ ಮಾಡುತ್ತಿದ್ದೇವೆ ನಾವೆಲ್ಲಾ ತೊಂದರೆಗೆ ಒಳಗಾಗುತ್ತೇವೆ. ಆದ್ದರಿಂದ ಈ ಯೋಜನೆಗೆ ಏನು ಒಂದು ಅವಧಿ ಇದೆ ಆ ಅವಧಿಯಲ್ಲಿ ಯೋಜನೆಯ ಕಾರ್ಯಕ್ರಮವನ್ನು ಕಾರ್ಯಗತ ಮಾಡಲಿಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ಮಂತ್ರಿಗಳು ಈ ಸದನದಲ್ಲಿ ಏನು ಉತ್ತರವನ್ನು ಕೊಟ್ಟಿದ್ದಾರೆ ಅದನ್ನು ಅವರು ನಡೆಸಿಕೊಂಡು ಬರಬೇಕು, ಅವರ ವಾಗ್ದಾನವನ್ನು ಪೂರೈಸಿಕೊಡಬೇಕು. ಇನ್ನೊಂದು ವಿಷಯವನ್ನು ವಿಶೇಷವಾಗಿ ಹೇಳಬೇಕೆಂದರೆ, ಹಿಂದೆ ತಾಲ್ಲೂಕು ಮತ್ತು ಜಿಲ್ಲಾ ಮಟ್ಟಗಳ ಪುನರ್‌ವಿಂಗಡಣಾ ಆಯೋಗ ರಚನೆ ಮಾಡಿದರು. ವಾಸುದೇವರಾವ್ ಏಕಸದಸ್ಯ ಆಯೋಗವೊಂದನ್ನು ರಚಿಸಿದರು. ಅದು ಏನಾಯಿತೋ ಗೊತ್ತಿಲ್ಲ. ಹುಂಡೇಕರ್ ಸಮಿತಿ ಮಾಡಿ ಆಯೋಗ ರಚಿಸಿದರು ಅದು ಏನಾಯಿತೋ ಗೊತ್ತಿಲ್ಲ. ಎಲ್ಲರೂ ವರದಿಗಳನ್ನು ಕೊಟ್ಟಿದ್ದಾರೆಂದು ಕೇಳಿದ್ದೇನೆ. ಇನ್ನು ಇಡೀ ಕರ್ನಾಟಕಕ್ಕೆ ದೊಡ್ಡ ತಾಲ್ಲೂಕು ನನ್ನ ತಾಲ್ಲೂಕು. ಆದ್ದರಿಂದ, ಕೊಳ್ಳೇಗಾಲ ತಾಲ್ಲೂಕು ಎರಡು ಮಾಡಿ, ಹನೂರು ತಾಲ್ಲೂಕು ಒಂದು ಮಾಡಬೇಕು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಆ ತಾಲ್ಲೂಕಿನ ಕಡೆಯ ಭಾಗ ತೆಗೆದುಕೊಂಡರೆ ನೂರಾರು ಕಿಲೋಮೀಟರ್ ಉದ್ದ ಇದೆ. ಅವರು ತಾಲ್ಲೂಕು ಕಛೇರಿಗೆ ಬರಬೇಕು ಎಂದರೆ ಎರಡು ದಿವಸ ಆಗುತ್ತದೆ. ಇದರಿಂದ ಬಹಳ ಕಷ್ಟವಾಗುತ್ತದೆ. ಆದ್ದರಿಂದ, ಹನೂರು ಅನ್ನು ಒಂದು ತಾಲ್ಲೂಕು ಆಗಿ ಮಾಡಬೇಕೆಂದು ಹೇಳುತ್ತೇನೆ. ಇನ್ನು ನಾಡಾ ಆಫೀಸ್ ಮಾಡಿಕೊಡಿ ಎಂದು ಕೇಳಿಕೊಂಡರೂ ಅದನ್ನು ಮಾಡಿಕೊಟ್ಟಿಲ್ಲ. ಅದನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ಮಹದೇಶ್ವರ ಸಕ್ಕರೆ ಕಾರ್ಖಾನೆಯ ಬಗ್ಗೆ ಒಂದು ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಅದು ೧೯೭೭ರಲ್ಲಿ ಪ್ರಾರಂಭವಾಯಿತು. ೧೯೮೨–೮೩ನೆಯ ಸಾಲಿನವರೆಗೆ ಕಬ್ಬು ಅರೆಯುತಕ್ಕ ಕೆಲಸ ಮುಂದುವರಿಸಿಕೊಂಡು ಬಂತು. ೧೯೮೩–೮೪, ೧೯೮೪–೮೫ನೇ ಸಾಲಿನಲ್ಲಿ ಕಬ್ಬು ಅರೆಯುತಕ್ಕ ಕೆಲಸ ನಿಂತುಹೋಯಿತು. ೧೯೫೭ರ ರೂಲ್ ಪ್ರಕಾರ ೨೧–೧೨–೧೯೮೩ರಲ್ಲಿ ಈ ಕಾರ್ಖಾನೆ ಲೇ ಆಫ್ ಮಾಡಿದರು. ಈಗ ಕಾರ್ಖಾನೆ ಸ್ಥಗಿತವಾಗಿದೆ. ಈ ಕಾರ್ಖಾನೆಯನ್ನು ಬೇರೆ ಖಾಸಗಿಯವರಿಗೆ ಮಾರಾಟ ಮಾಡಬೇಕೆಂದು ಸರ್ಕಾರ ವ್ಯವಹಾರ ಮಾಡುವ ವಿಷಯ ತಿಳಿದುಬಂತು. ನಮ್ಮ ತಾಲ್ಲೂಕಿನಲ್ಲಿ ಕಬಿನಿ ನಾಲೆ ಬಂದು ಸುಮಾರು ೨೮ ಸಾವಿರ ಎಕರೆಗೆ ಅನುಕೂಲವಾಗಿದೆ. ಆಗ ನಾವು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಸಂಬಂಧಪಟ್ಟ ಸಹಕಾರ ಮಂತ್ರಿಗಳಲ್ಲಿ ಕೇಳಿಕೊಂಡು ಈ ಸಾರಿ ಯಾರಿಗೂ ಮಾರಾಟ ಮಾಡತಕ್ಕದ್ದು ಬೇಡ ಹಾಗೆಯೆ ನಡೆಸಿಕೊಂಡು ಹೋಗಬೇಕೆಂದು ಹೇಳಿದೆವು. ನಮ್ಮಲ್ಲಿ ಸಂಪನ್ಮೂಲ ಇಲ್ಲ, ಕೊಡಲಿಕ್ಕೆ ಆಗುವುದಿಲ್ಲ ಎಂದು ಹೇಳಿದ್ದಕ್ಕೆ, ದುಡ್ಡನ್ನು ಯಾವರೀತಿ ಸಂದಾಯ ಮಾಡಬೇಕು ಎನ್ನುವ ಬಗ್ಗೆ ಒಂದು ಸಭೆ ಕರೆಯಿರಿ ಎಂದು ಕೇಳಿದ್ದಕ್ಕೆ ಆಗ ಅವರು ಆಗಲಿ ಒಂದು ಸಭೆ ಸೇರಿಸುತ್ತೇವೆಂದು ಒಪ್ಪಿಕೊಂಡಿದ್ದಾರೆ. ಆದ್ದರಿಂದ, ಈ ಕೆಲಸಕ್ಕೆ ಕೈ ಹಾಕುವುದು ಬೇಡ. ನಾವು ನೀವು ಸೇರಿ ಆ ಕಾರ್ಖಾನೆಯನ್ನು ಒಳ್ಳೆಯ ರೀತಿಯಲ್ಲಿ ನಡೆಸಲಿಕ್ಕೆ ಏನು ಮಾಡಬೇಕು ಅದಕ್ಕೆ ಸರಿಯಾದ ವಾತಾವರಣ ಸೃಷ್ಟಿ ಮಾಡಬೇಕೆಂದು ಕೇಳಿಕೊಂಡು, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್, ಯಡಿಯೂರಪ್ಪ.—ಅಧ್ಯಕ್ಷರೆ, ೩೩೪ರ ಬಗ್ಗೆ ನಾನು ಹೇಳಿಕೆ ಕೇಳಿದ್ದೆ.

ಮಂತ್ರಿಯವರ ಹೇಳಿಕೆ

ಬರಗಾಲ ಪ್ರದೇಶಗಳಲ್ಲಿ ಸಾಲ ವಸೂಲಿಗೆ ವಿನಾಯ್ತಿ ಕೊಡುವ ಬಗ್ಗೆ

ಶ್ರೀ ಆರ್, ಎಲ್. ಜಾಲಪ್ಪ.—ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಕೆಳಗಿನ ಹೇಳಿಕೆಯನ್ನು ಕೊಡುತ್ತೇನೆ,

೧೯೮೫-೮೬ರಲ್ಲಿ ರಾಜ್ಯದಲ್ಲಿ ಭೀಕರ ಬರಗಾಲ ಬಂದಿರುವುದರಿಂದ ರಾಜ್ಯದ ಬಹುಭಾಗದಲ್ಲಿ ಮಳೆ ಇಲ್ಲದೆ ಬೆಳೆಗಳು ಹಾನಿಗೊಳಗಾಗಿವೆ. ಬೆಳೆ ಹಾನಿಯಾದ ಬಗ್ಗೆ ಜಿಲ್ಲಾಧಿಕಾರಿಗಳು ಆಣೆವಾರಿ ಸರ್ಟಿಫಿಕೇಟುಗಳನ್ನು ಕೊಟ್ಟ ಮೇಲೆ, ಯಾವ ಯಾವ ಪ್ರದೇಶದಲ್ಲಿ ೬ ಆಣೆಗಿಂತ ಬೆಳೆ ಕಡಿಮೆಯಾಗಿದೆಯೋ ಆ ಪ್ರದೇಶದಲ್ಲಿ ಕೊಟ್ಟಿರುವ ಅಲ್ಪಾವಧಿ ಬೆಳೆ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತಿಸಲು ಸರ್ಕಾರ ನಿರ್ಧರಿಸಿದೆ. ಹಾಗೆ ಪರಿವರ್ತನೆ ಮಾಡುವಾಗ ಬಡ್ಡಿಯನ್ನು ಕೊಟ್ಟ ನಂತರವೇ ಪರಿವರ್ತನೆ ಆಗಬೇಕಿತ್ತು. ಈಗಾಗಲೇ ಸರ್ಕಾರ ಒಂದು ಆದೇಶವಿತ್ತು ಸಣ್ಣ ಮತ್ತು ಅತಿ ಸಣ್ಣ ರೈತರ ಸಾಲ ಪರಿವರ್ತನೆ ಮಾಡುವಾಗ ಈ ನಿರ್ಬಂಧ ಬೇಕಿಲ್ಲವೆಂದು ತಿಳಿಸಲಾಗಿದೆ. ಈ ಮಧ್ಯೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಬಡ್ಜೆಟ್ ಭಾಷಣದಲ್ಲಿ ಅಂತಹ ಹಾನಿಗೊಳಗಾದ ಸಣ್ಣ ಮತ್ತು ಅತಿ ಸಣ್ಣ ರೈತರು ೧೯೮೫-೮೬ರಲ್ಲಿ ಪಡೆದಿರುವ ಹಣದ ಮೇಲೆ ಈ ವರ್ಷ ಕೊಡಬೇಕಾದ ಬಡ್ಡಿಯನ್ನು ಮಜಾ ಮಾಡಲಾಗುವುದೆಂದು ಪ್ರಕಟಿಸಿದ್ದಾರೆ,

ಆದರೆ ಇತರ ರೈತರ ಸಾಲ ಪರಿವರ್ತನೆ ಆಗಬೇಕಾದರೆ ಅವರು ಶೇಕಡ ೧೨½ ಯಿಂದ ೧೪½ರಂತೆ ಬಡ್ಡಿ ಕೊಟ್ಟ ನಂತರವೇ ಅವರ ಸಾಲ ಪರಿವರ್ತನೆ ಮಾಡುವ ಕಾನೂನಿದೆ. ಈ ಸಭೆಯ ಹಲವು ಸದಸ್ಯರು ಮತ್ತು ಬಹಳ ಮಂದಿ ಸಾಲಗಾರರು ಸಣ್ಣ ರೈತರಿಗೆ ಕೊಟ್ಟಿರುವಂತಹ ಸೌಲಭ್ಯಗಳನ್ನು ಕೊಡಬೇಕೆಂದು ಒತ್ತಾಯಿಸಿದ್ದಾರೆ. ಸರ್ಕಾರ ಇಂತಹ ಒತ್ತಾಯಗಳನ್ನು ಹಾಗೂ ದೊಡ್ಡ ರೈತರಿಗೆ ಆಗಿರುವ ತೊಂದರೆಗಳನ್ನು ಗಮನಿಸಿ ದೊಡ್ಡ ರೈತರ ಸಾಲ ಪರಿವರ್ತನೆ ಮಾಡಲು ಕೇವಲ ಶೇಕಡ ೭ರಂತೆ ಬಡ್ಡಿ ಕೊಟ್ಟರೆ ಬೆಳೆ ಸಾಲಗಳ ಪರಿವರ್ತನೆ ಮಾಡಲು ನಿರ್ಧರಿಸಿದೆ. ಉಳಿದ ಬಡ್ಡಿಯನ್ನು ಸಹಕಾರಿ ಸಂಘಗಳಿಗೆ ಸರ್ಕಾರ ತುಂಬಿ ಕೊಡಲು ತೀರ್ಮಾನಿಸಿದೆ. ತಾರೀಖು ೨೮-೨-೧೯೮೬ರೊಳಗಾಗಿ ಬಡ್ಡಿ ಕೊಟ್ಟು ಪರಿವರ್ತನೆ ಮಾಡಿಕೊಳ್ಳಲು ಸಮಯ ಸಾಲದುದರಿಂದ ಈ ರಿಯಾಯಿತಿಯನ್ನು ತಾರೀಖು ೩೦-೩-೧೯೮೬ರವರೆವಿಗೆ ವಿಸ್ತರಿಸಲಾಗಿದೆ.

ಈ ಮೇಲ್ಕಂಡ ಸೌಲಭ್ಯಗಳು ಟ್ರ್ಯಾಕ್ಟರ್ ಇಟ್ಟುಕೊಂಡಿರುವವರಿಗೆ, ಆದಾಯ ತೆರಿಗೆ ಕೊಡುತ್ತಿರುವವರಿಗೆ ಹಾಗೂ ನಿರಂತರವಾದ ನೀರಿನ ಸೌಲಭ್ಯ ಇರುವವರಿಗೆ ದೊರೆಯುವುದಿಲ್ಲ.

೧೯೮೬-೮೭ನೇ ಸಾಲಿನ ಆಯವ್ಯಯ ಪತ್ರದ ಮೇಲಿನ ಸಾಮಾನ್ಯ ಚರ್ಚೆ

† ಶ್ರೀ ಜಿ. ಹೆಚ್ ಅಶ್ವತ್ಥ ರೆಡ್ಡಿ (ಜಗಳೂರು).—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮಕೃಷ್ಣ ಹೆಗಡೆಯವರು ೮೬-೮೭ನೇ ಸಾಲಿನ ಆಯವ್ಯಯ ಪತ್ರವನ್ನು ಸದನದ ಮುಂದೆ ಮಂಡನೆ ಮಾಡಿದ್ದಾರೆ. ನಾನು ಕೆಲವು ಕಾರಣಗಳಿಂದ ಈ ಆಯವ್ಯಯವನ್ನು ವಿರೋಧಿಸಬೇಕಾಗಿದೆ, ಮತ್ತೆ ಕೆಲವು ಸಲಹೆಗಳನ್ನು ಕೂಡ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಭೀಕರವಾದ ಬರಗಾಲ ಪರಿಸ್ಥಿತಿ ಇದ್ದು. ಅದನ್ನು ಎದುರಿಸುವುದಕ್ಕೆ ಸರ್ಕಾರ ನಾನಾ ಕಾರ್ಯಕ್ರಮಗಳನ್ನು ಹಾಕಿಕೊಂಡು ಆ ಮೂಲಕ ಎಲ್ಲರಿಗೂ ಉದ್ಯೋಗ ಕೊಡತಕ್ಕ ಭರವಸೆಯನ್ನು ಕೊಟ್ಟಿದೆ. ಆದರೆ, ಕೊಟ್ಟಂಥ ಭರವಸೆಯನ್ನು ಈಡೇರಿಸಿಲ್ಲ ಎನ್ನುವುದು ಸರ್ಕಾರದವರಿಗೂ ಕೂಡ ಗೊತ್ತಾಗಿದೆ. ಪ್ರತಿಯೊಂದು ತಾಲ್ಲೂಕಿನಲ್ಲಿ ಕೂಲಿಕಾರರ ಸಂಖ್ಯೆ ಎಷ್ಟಿದೆ ಎನ್ನುವುದನ್ನು ಗುರುತಿಸಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು ೪೦-೫೦ ಸಾವಿರ ಜನ ಕೂಲಿಕಾರರು ಇದ್ದಾರೆ. ಆದರೆ, ಸರ್ಕಾರದವರು ಕೆಲಸ ಕೊಟ್ಟಿರುವುದು ಕೇವಲ ೫-೬ ಸಾವಿರ ಜನರಿಗೆ ಮಾತ್ರ ಉಳಿದ ೩೫-೪೦ ಸಾವಿರ ಜನರಿಗೆ ಉದ್ಯೋಗ ಇಲ್ಲದೆ ಬಹಳ ತೊಂದರೆ ಪಡುತ್ತಿದ್ದಾರೆ. ನ್ಯಾಯಬೆಲೆ ಅಂಗಡಿಗಳನ್ನು ಕೊಟ್ಟರೆ ಯಾವ ಪ್ರಯೋಜನ ಇದೆ ಜನಗಳಿಗೆ ಕೆಲಸ ಇಲ್ಲದೆ, ಕೊಳ್ಳುವಂಥ ಪರಿಸ್ಥಿತಿ ಇಲ್ಲದಿರುವಾಗ. ನ್ಯಾಯಬೆಲೆ ಅಂಗಡಿಗಳನ್ನು ಕೊಟ್ಟರೆ ಏನು ಉಪಯೋಗವಾಗುತ್ತದೆ. ಆಯವ್ಯಯ ಭಾಷಣದಲ್ಲಿ ಎಲ್ಲರಿಗೂ

ಉದ್ಯೋಗ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದು ಸತ್ಯಕ್ಕೆ ದೂರವಾದ ಮಾತಾಗಿದೆ. ವ್ಯವಸಾಯದಲ್ಲಿ ಬಹಳಷ್ಟು ಕೆಲಸಗಳು ಚೆನ್ನಾಗಿ ನಡೆಯುತ್ತಿಲ್ಲ ಎನ್ನುವುದು ನನ್ನ ಭಾವನೆ.

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ನಾಳೆ ಬಂದ್ ಇದೆ. ಸಭೆ ಇರುವುದೇ ಎನ್ನುವುದು ಗೊತ್ತಾಗಲಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ಭಾರತ್ ಬಂದ್ ಇರುವುದರಿಂದ ಇದರ ಬಗ್ಗೆ ಒಂದು ತೀರ್ಮಾನ ಕೈಗೊಳ್ಳಿ.

ಅಧ್ಯಕ್ಷರು.—ಸ್ವಾಮಿ, ಮಾನ್ಯ ಕೃಷ್ಣನ್‌ರವರು ಹೊಸಬರು. ಅಪರೂಪಕ್ಕೆ ಮಾತನಾಡುವವರು ಎದ್ದಾಗ ಇವರಿಗೆ ಮಾತನಾಡುವಂಥ ಸ್ಫೂರ್ತಿ ಬರುತ್ತದೆ. ಭಾರತ ಬಂದ್‌ಗಾಗಿ ಹೆದರಿಕೊಳ್ಳಬೇಕಾದ ಪ್ರಮೇಯ ಇಲ್ಲ.

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ.—ಕರ್ನಾಟಕ ರಾಜ್ಯದಲ್ಲಿ ಕೆಲವು ಜಿಲ್ಲೆಗಳಲ್ಲಿ ಯಾವಾಗಲೂ ಬರಗಾಲ ಇದ್ದೇ ಇರುತ್ತದೆ. ಕೆಲವು ದೇಶಗಳಲ್ಲಿ ಮಳೆ ಕಡಿಮೆ ಬಂದರೂ ಕೂಡ ಎರಡು ಬೆಳೆಯನ್ನು ತೆಗೆಯುವಂಥ ವ್ಯವಸ್ಥೆಯನ್ನು ಚೆನ್ನಾಗಿ ರೂಢಿಸಿಕೊಂಡು ಬಂದಿದ್ದಾರೆ. ವ್ಯವಸಾಯ ಮಂತ್ರಿಗಳಾದ ಮಾನ್ಯ ಪ್ರಕಾಶ್‌ರವರಿಗೂ ಇದರ ಬಗ್ಗೆ ಸಾಕಷ್ಟು ಪರಿಣತಿ ಇದೆ. ಕಡಿಮೆ ಪ್ರಮಾಣದಲ್ಲಿ ಮಳೆ ಬರತಕ್ಕ ಜಿಲ್ಲೆಗಳಲ್ಲಿ ಕೂಡ ಪೂರ್ಣ ಪ್ರಮಾಣದಲ್ಲಿ ಬೆಳೆಯನ್ನು ತೆಗೆಯುವಂಥ ವ್ಯವಸ್ಥೆ ಮಾಡಬೇಕು. ಇವತ್ತು ಇಸ್ರೇಲ್ ದೇಶದಲ್ಲಿ ೭ ಇಂಚು ಮಳೆ ಬಂದರೂ ಕೂಡ ಎರಡು ಬೆಳೆಯನ್ನು ತೆಗೆಯುವಂಥ ವ್ಯವಸ್ಥೆ ಮಾಡಿದ್ದಾರೆ. ನಮ್ಮಲ್ಲಿ ೧೦-೧೨ ಇಂಚು ಮಳೆ ಬಂದರೂ ಎರಡು ಬೆಳೆಗಳನ್ನು ತೆಗೆಯುವಂಥ ವ್ಯವಸ್ಥೆ ಮಾಡುತ್ತಿಲ್ಲ. ನಮ್ಮ ವಿಜ್ಞಾನಿಗಳು, ವ್ಯವಸಾಯ ಇಲಾಖೆಯ ತಜ್ಞರುಗಳನ್ನು ಬೇರೆ ದೇಶಗಳಿಗೆ ಕಳುಹಿಸಿ ಅಧ್ಯಯನ ಮಾಡುವಂಥ ವ್ಯವಸ್ಥೆ ಮಾಡಬೇಕು. ನಮಗೆ ಸ್ವಾತಂತ್ರ್ಯ ಬಂದಾಗಿನಿಂದಲೂ ಬರಗಾಲವನ್ನು ಎದುರಿಸುವ ದಿಸೆಯಲ್ಲಿ ಶಾಶ್ವತ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದರೆ, ಇವತ್ತು ಇಂಥ ಪರಿಸ್ಥಿತಿ ಬರುತ್ತಿರಲಿಲ್ಲ. ಇವತ್ತು ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಮಾಡಿದ್ದೀರಿ. ಹೆಚ್ಚು ಹಣ ಒದಗಿಸಿ. ಕ್ಷಾಮ ಇರತಕ್ಕ ಏರಿಯಾದಲ್ಲಿ ಶಾಶ್ವತವಾದ ಕಾರ್ಯಗಳನ್ನು ಮಾಡಿಸಬೇಕು. ಇವತ್ತು ರೈತರು ಬಾವಿ ತೆಗೆಸುವುದಕ್ಕೆ ಬೋರ್‌ವೆಲ್‌ಗಳನ್ನು ಹಾಕಿಸುವುದಕ್ಕೆ, ಪಂಪುಸೆಟ್ಟುಗಳನ್ನು ಹಾಕಿಸುವುದಕ್ಕೆ ಮುಂದೆ ಬರುತ್ತಾರೆ. ಕೇಂದ್ರ ಸರ್ಕಾರ ಮತ್ತು ನಬಾರ್ಡ್‌ನವರಿಂದ ಹೆಚ್ಚು ಹೆಚ್ಚು ಹಣಕಾಸಿನ ಸಹಾಯ ಪಡೆದು, ಪ್ರತಿ ತಾಲ್ಲೂಕಿನಲ್ಲಿಯೂ ಇಂತಿಷ್ಟು ಗುರಿಯನ್ನು ಸಾಧಿಸಬೇಕೆಂದು ಗೊತ್ತು ಮಾಡಿ, ಇಷ್ಟು ಬಾವಿಗಳನ್ನು ತೋಡಿಸಬೇಕು. ಇಷ್ಟು ಜಮೀನನ್ನು ಅಭಿವೃದ್ಧಿ ಪಡಿಸಬೇಕು ಎಂದು ತೀರ್ಮಾನ ಮಾಡಿದರೆ, ಕನಿಷ್ಟ ಒಂದು ತಾಲ್ಲೂಕಿನಲ್ಲಿ ೨೫ ರಿಂದ ೩೦ ಸಾವಿರ ಎಕರೆ ನೀರಾವರಿಯಾಗುತ್ತದೆ. ಇವತ್ತು ನಮಗೆಲ್ಲಾ ಗೊತ್ತಿರುವಂತೆ ಒಂದು ವರ್ಷ ಮಳೆ ಬಂದರೆ, ಮುಂದೆ ೧೦ ವರ್ಷ ಸರಿಯಾಗಿ ಮಳೆ ಬರುತ್ತಿಲ್ಲ. ಡಿಪಿಎಪಿ, ಯೋಜನೆಯಲ್ಲಿ ಬಾವಿಗಳನ್ನು ತೋಡಿದ್ದಾಗೆ. ನೀರು ಇದೆ. ಆದರೆ ಈಲ್ಡ್ ಟೆಸ್ಟ್ ಆಗಿಲ್ಲವೆಂದು ಮೋಟರುಗಳನ್ನು ಫಿಕ್ಸ್‌ಮಾಡಿಲ್ಲ. ಒಂದೊಂದು ಊರಿನಲ್ಲಿ ಒಂದೊಂದು ತಾಲ್ಲೂಕಿನಲ್ಲಿ ೫೦೦-೬೦೦ ಎಕರೆ ನೀರಾವರಿಯಾಗುವಂಥ ಒಂದು ವ್ಯವಸ್ಥೆ ಇದೆ. ಇದರ ಬಗ್ಗೆ ೮೩ರಲ್ಲಿ ಸರ್ಕಾರದ ಆಜ್ಞೆ ಆಗಿದೆ. ಜಿಯಾಲಾಜಿಕಲ್ ಇಲಾಖೆಯವರು ಕೂಡ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಆದರೆ, ಇವತ್ತು ಬೆಲೆ ಜಾಸ್ತಿಯಾಗಿದೆ. ಲಾಸ್ ಆಗುತ್ತದೆಂದು ಸುಮ್ಮನೆ ಇದ್ದಾರೆ. ಈ ವಿಚಾರದಲ್ಲಿ ಸರ್ಕಾರದವರು ಇಲಾಖೆಗಳೊಂದಿಗೆ ವ್ಯವಹಾರ ಮಾಡಿ ಆದಷ್ಟು ಬೇಗ ಪಂಪುಗಳನ್ನು ಹಾಕಿಸಿದರೆ, ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅನುಕೂಲವಾಗುತ್ತದೆ, ಸರ್ಕಾರ ನೀರಾವರಿ ವಿಷಯದಲ್ಲಿ ಹೇಳಿರುವಂಥ ಮಾತುಗಳನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ೨೦೦೦ದ ಇಸವಿ ಹೊತ್ತಿಗೆ ರಾಜ್ಯದಲ್ಲಿರತಕ್ಕ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಬಳಸಿಕೊಳ್ಳಲಾಗುವುದೆಂದು ತಿಳಿಸಿದ್ದಾರೆ. ಆದರೆ, ೧೨೦ ಕೋಟಿ ಹಣವನ್ನು ಕೊಟ್ಟರೆ ಯಾವ ಯೋಜನೆಯೂ ಪೂರ್ಣವಾಗುವುದಿಲ್ಲ. ಹಣದ ವ್ಯವಸ್ಥೆಗಾಗಿ ಬೇರೆ ದಾರಿಯನ್ನು ಹುಡುಕಬೇಕಾಗುತ್ತದೆ. ಬೇರೆ ಬೇರೆ ದೇಶಗಳ ಹಣಕಾಸಿನ ಸಂಸ್ಥೆಗಳಿಂದ. ಕೇಂದ್ರ ಸರ್ಕಾರದಿಂದ ಹೆಚ್ಚಿನ ಸಹಾಯ ಪಡೆದು. ಪ್ರಪಂಚದ ಬ್ಯಾಂಕಿನಿಂದ ಸಹಾಯ ಪಡೆದು ಸರಿಯಾದ ವೇಳೆಯಲ್ಲಿ ಕಾವೇರಿ

ಬೇಸಿಸ್ ಯೋಜನೆಗಳನ್ನು, ಕೃಷ್ಣ ಮೇಲ್ದಂಡೆ ಯೋಜನೆಗಳನ್ನು ಮುಗಿಸುವುದಕ್ಕೆ ಪ್ರಯತ್ನವ ಮಾಡ ಬೇಕು ಪ್ರಪಂಚದ ಬ್ಯಾಂಕಿನಿಂದ ಪಡೆದಂಥ ಹಣವನ್ನು ಕಾಲಕ್ಕೆ ಸರಿಯಾಗಿ ಮುಗಿಸಿ ಕೆಲಸ ಮಾಡದೇ ಇರುವುದರಿಂದ ಇವತ್ತು ಹಣ ಕೊಡುವುದಕ್ಕೆ ಹಿಂಜರಿಯುತ್ತಾರೆ ಎನ್ನುವ ವಿಷಯವನ್ನು ಕೇಳಿ ನಮಗೆ ದುಃಖವಾಗಿದೆ.

ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಚಿತ್ರದುರ್ಗ. ಕೋಲಾರ ಬಿಜಾಪುರಗಳಲ್ಲೂ ಕೂಡ ಕ್ಷಾಮ ವಿರುತ್ತದೆ. ಚಿತ್ರದುರ್ಗದ ೯ ತಾಲ್ಲೂಕುಗಳ ಪೈಕಿ ೨ ತಾಲ್ಲೂಕುಗಳಲ್ಲಿ ರೈತರು ಒಳ್ಳೆಯ ರೀತಿಯಲ್ಲಿ ದ್ದಾರೆ ಅಲ್ಲಿ ನೀರಾವರಿ ಸೌಲಭ್ಯ ಎಲ್ಲ ಇದೆ. ಆದರೆ ಉಳಿದ ೭ ತಾಲ್ಲೂಕುಗಳಲ್ಲಿ ಯಾವ ತರಹ ನೀರಾವರಿ ಸೌಲಭ್ಯವೂ ಇಲ್ಲ. ೨೦—೩೦ ವರ್ಷದಿಂದಲೂ ಕೂಡ ನಮ್ಮ ಜಿಲ್ಲೆಯ ಜನತೆ ಭದ್ರಾ ಮೇಲ್ದಂಡೆ ಯೋಜನೆ ಆಗಬೇಕೆಂದು ಕೇಳುತ್ತಿದ್ದಾರೆ. ಆದರೆ ಮುಖ್ಯಮಂತ್ರಿಗಳ ಬಡ್ಜೆಟ್‌ನಲ್ಲಿ ಈ ಬಗ್ಗೆ ಒಂದ ಕ್ಷರವೂ ಇಲ್ಲ. ಇದರಿಂದ ನಮಗೆ ಬಹಳ ದುಃಖವಾಗುತ್ತದೆ. ನಮ್ಮ ಕರ್ನಾಟಕದಲ್ಲಿ ೧೨ ಲಕ್ಷ ಎಕರೆ ಇನ್ನೂ ನೀರಾವರಿಯಾಗಬೇಕಾಗಿದೆ. ಹಣ ಇಲ್ಲದಿದ್ದರೆ ಕರ್ನಾಟಕ ಸರ್ಕಾರ ನ್ಯಾಷನಲ್ ಪ್ರಾಜೆಕ್ಟ್ ಎಂದು ಕನ್ಸಿಡರ್ ಮಾಡಿ ಈ ಬಗ್ಗೆ ಕೇಂದ್ರದ ಮೇಲೆ ಒತ್ತಡ ತಂದು ಈ ಕೆಲಸವನ್ನು ಮಾಡಿಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ ಇದರಿಂದ ತುಮಕೂರು, ಚಿತ್ರದುರ್ಗ, ಕೋಲಾರ ಜಿಲ್ಲೆಗಳ ಸುಮಾರು ೧೨ ಲಕ್ಷ ಜನ ರೈತರಿಗೆ ಅನುಕೂಲವಾಗುತ್ತದೆಂದು ಆದರಿಂದ ನಾನು ಒತ್ತಾಯಪಡಿಸುತ್ತೇನೆ.

ಇವತ್ತಿನ ಸಂದರ್ಭದಲ್ಲಿ ನಮ್ಮ ಯುವಕರು ಯಾವುದೇ ಖಾಸಗಿ ಕಾರ್ಖಾನೆಗೆ ಹೋದರೂ ಕೂಡ ಒಬ್ಬರಿಗೂ ಕೆಲಸ ಸಿಗುತ್ತಿಲ್ಲ. ಏಕೆಂದರೆ ಪವರ್ ಶಾರ್ಟೇಜ್ ಇದೆ ಎನ್ನುತ್ತಾರೆ. ಇರಿಗೇಷನ್‌ಗೋಸ್ಕರ ೧೫೦ ಕೋಟಿ ರೂಪಾಯಿ ಕೊಟ್ಟಂತೆ ಅದೇ ರೀತಿ ಕೆ.ಪಿ.ಸಿ. ಗೂ ಇಷ್ಟೊಂದು ದುಡ್ಡು ಕೊಟ್ಟಿದ್ದರೂ ಈ ಸಮಸ್ಯೆ ನೀಗಲಿಲ್ಲ. ನಮ್ಮಲ್ಲಿರುವ ೩೦—೪೦ ಇಂಜಿನಿಯರಿಂಗ್ ಡಿಗ್ರಿ ಕಾಲೇಜುಗಳಿಂದ ಪಾಸಾಗಿ ಬರುವ ಹುಡುಗರಿಗೆ ಕೆಲಸ ಇಲ್ಲ ಎಂದರೆ ಏನು ಅರ್ಥ ತಮಗೆ ಗೊತ್ತಿದೆ ಪಶ್ಚಿಮ ಬಂಗಾಳದಲ್ಲಿ ಏನಾಯಿತು ಅನ್ನುವುದು ಇಲ್ಲೂ ಆ ಪರಿಸ್ಥಿತಿ ಬರಬಹುದು. ಆದ್ದರಿಂದ ನಾವು ಹೆಚ್ಚುಹೆಚ್ಚಾಗಿ ವಿದ್ಯುತ್ತನ್ನು ಉತ್ಪನ್ನ ಮಾಡಿ ಇರತಕ್ಕಂಥ ಯುವಶಕ್ತಿ ಏನಿದೆ ಅವರಿಗೆಲ್ಲ ಕೆಲಸ ಕೊಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರೇ, ಸುಮಾರು ೮೨-೮೩ರಲ್ಲಿ ಬೇಡ್ತಿ ಯೋಜನೆ ನಡೆಯುತ್ತಿತ್ತು. ಕೆಲವರ ಹಿತಾಸಕ್ತಿ ಗೋಸ್ಕರವಾಗಿ ಆ ಕೆಲಸವನ್ನು ಸ್ಥಗಿತಗೊಳಿಸಬೇಕಾಯಿತು. ಅದಕ್ಕೆ ಒಂದು ತಜ್ಞರ ಸಮಿತಿಯನ್ನು ನೇಮಿಸಿದರು. ಆ ಸಮಿತಿ ವಿದ್ಯುತ್ತನ್ನು ನೀರಿನಿಂದ ಉತ್ಪಾದಿಸಬೇಕೋ ಬೇಡವೋ ಎಂಬ ಬಗ್ಗೆ ವರದಿ ಯನ್ನು ಮೂರು ತಿಂಗಳಲ್ಲಿ ಕೊಡಬೇಕಾಗಿತ್ತು. ಆದರೆ ನಾಲ್ಕು ವರ್ಷವಾದರೂ ಸರ್ಕಾರದವರು ಆ ಸಮಿತಿಯ ವರದಿಯನ್ನು ಕೇಳಲಿಲ್ಲ. ಅವರೂ ಕೊಡಲಿಲ್ಲ. ಅಂದರೆ ನಮ್ಮ ಸರ್ಕಾರಕ್ಕೆ ಇದರ ಬಗ್ಗೆ ಎಷ್ಟು ಕಾಳಜಿ ಇದೆ ಎಂಬುದು ಅರ್ಥವಾಗುತ್ತದೆ. ದುರಾದೃಷ್ಟವಶಾತ್ ಒಂದಕ್ಷರವೂ ಇದರ ಬಗ್ಗೆ ಬಡ್ಜೆಟ್‌ನಲ್ಲಿ ಹೇಳಿಲ್ಲ. ಇದನ್ನು ಮಾಡಿದರೆ ೨೫೦ ಮೆಗಾವ್ಯಾಟ್ಸ್ ವಿದ್ಯುತ್ ಇದರಿಂದ ಬರುತ್ತದೆ, ಬೇಡ್ತಿ ಯೋಜನೆಯ ನೀರಿನಿಂದ ವಿದ್ಯುತ್ ಉತ್ಪಾದಿಸುವಾಗ ಪ್ರತಿ ಯೂನಿಟ್‌ಗೆ ಪ್ರೊಡಕ್ಷನ್ ಕಾಸ್ಟ್ ೧೦ ಪೈಸೆ ಬರುತ್ತದೆ. ಇದನ್ನು ಸರ್ಕಾರ ಯೋಚಿಸಬೇಕೆಂದು ಹೇಳುತ್ತೇನೆ.

ಕರ್ನಾಟಕದಲ್ಲಿ ಇವತ್ತು ಎಲ್ಲ ಕೈಗಾರಿಕೆಗಳೂ ನಿಂತುಹೋಗಿವೆ. ಮತ್ತು ಕರ್ನಾಟಕ ಸರ್ಕಾರಕ್ಕೂ ಆದಾಯ ಕಡಿಮೆಯಾಗಿದೆ. ಇದಕ್ಕೆಲ್ಲ ಕಾರಣ ವಿದ್ಯುತ್ ಅಭಾವ. ಇಂಥ ಒಳ್ಳೆಯ ಪ್ರಾಜೆಕ್ಟನ್ನು ಕೈಬಿಟ್ಟಿದ್ದೀರಿ ಇದರ ಬಗ್ಗೆ ವರದಿಯನ್ನು ಆದಷ್ಟು ಬೇಗ ತರಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರೇ, ಕೇಂದ್ರದವರು ಉತ್ತರ ಕನ್ನಡದ ಕೈಗಾದಲ್ಲಿ ಅಟಾಮಿಕ್ ರಿಯಾಕ್ಟರ್ ಕೊಟ್ಟಿದ್ದಾರೆ, ಅದಕ್ಕೆ ಕೋಟ್ಯಾಂತರ ರೂ ಅನ್ನು ಕೇಂದ್ರ ಇನ್‌ವೆಸ್ಟ್ ಮಾಡುತ್ತಿದೆ. ಅದರ ಬಗ್ಗೆಯೂ ನಮ್ಮ ಬಡ್ಜೆಟಿನಲ್ಲಿ ಏನು ಪ್ರಸ್ತಾಪಿಸಿಲ್ಲ. ಪ್ರತಿ ಬಡ್ಜೆಟ್‌ನಲ್ಲೂ ಕೂಡ ನಮಗೂ ಅಟಾಮಿಕ್ ರಿಯಾಕ್ಟರ್ ಬೇಕು ಕೇಂದ್ರ ಕರ್ನಾಟಕಕ್ಕೆ ಅನ್ಯಾಯ ಮಾಡಿದೆ ಎಂದು ಹೇಳುತ್ತಿದ್ದರು. ಅಂದು ಬಂದ ಮೇಲೆ ಆದರ ವಿಷಯದಲ್ಲಿ ಏನೂ ಇಲ್ಲ, ಒಂದು ಸಾವಿರ ಮೆಗಾವ್ಯಾಟ್ ವಿದ್ಯುತ್ ಇದರಲ್ಲಿ ಉತ್ಪನ್ನವಾಗು ತ್ತದೆ. ಇನ್ನು ನಮಗೆ ಮೋಟಾರು ಕಾರು ಬೇಡ. ಕೆಲಸ ಬೇಕು. ಇದರ ಬಗ್ಗೆ ಯೋಚಿಸಬೇಕು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಕೊಟ್ಟಮೇಲೂ ಆಕ್ಷೇಪಣೆ ಮಾಡಬೇಕೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮುಖ್ಯ ಮಂತ್ರಿಗಳೇ ಇದಕ್ಕೆ ವಿರೋಧವಾಗಿದ್ದಾರೆ ಎನ್ನುತ್ತಿದ್ದಾರೆ. ಆದ್ದರಿಂದ ದೇವೇಗೌಡರು ಇದನ್ನು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಬೇಡ್ತಿ ಯೋಜನೆ ವರದಿ ಬರಬೇಕೆಂದರೆ ದೇವೇಗೌಡರು ಮುಖ್ಯ ಮಂತ್ರಿಗಳಾಗಬೇಕು. ಅಲ್ಲಿಯವರೆಗೂ ಅದು ಬರುವುದಿಲ್ಲ.

ಶ್ರೀ ಡಿ. ಜಿ. ಬಸವಣ್ಣೇಗೌಡ.—ತಾವೆಲ್ಲರೂ ಸಪೋರ್ಟ ಮಾಡಿದರೆ ದೇವೇಗೌಡರನ್ನೇ ಮುಖ್ಯ ಮಂತ್ರಿ ಮಾಡೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನೀವೇನೋ ಹೆಣ್ಣು ಕೊಡುವುದಕ್ಕೆ ಸಿದ್ಧ, ಆದರೆ ಅವರು ಮದುವೆ ಮಾಡಿಕೊಳ್ಳುವುದಕ್ಕೆ ಒಪ್ಪಬೇಕಲ್ಲ.

(ಗದ್ದಲ)

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ.—ಇವತ್ತು ೧೯೮೨–೮೩ರಲ್ಲಿ ಸರ್ಕಾರ ಒಂದು ಆಜ್ಞೆ ಹೊರಡಿಸಿ ರೈತರಿಗೆ ನ್ಯಾಯ ಸಿಗಬೇಕು ಎಂಬ ಉದ್ದೇಶದಿಂದ ಒನ್ ಹೆಚ್‌ಪಿ ಪಂಪಿಗೆ ಕೇವಲ ೫೦ ರೂ. ಕೊಟ್ಟರೆ ಸಾಕು, ಮೀಟರ್ ಬೇಡ ಎಂದು ಹೇಳಿತ್ತು. ಆದರೆ ಈ ರೈತರ ಪರ ಸರ್ಕಾರ ಹೇಳಿಕೊಳ್ಳುವ ಇವರು ಒನ್ ಹೆಚ್‌ಪಿಗೆ ೭೫ ರೂ. ಮಾಡಿ ಮೀಟರನ್ನೂ ಹಾಕಿದ್ದಾರೆ. ಆದ್ದರಿಂದ ಹಿಂದೆ ನಾವು ಮಾಡಿದ್ದನ್ನೇ ಈಗಲೂ ಮುಂದುವರಿಸಬೇಕೆಂದು ಕೇಳುತ್ತೇನೆ.

ಇವತ್ತಿನ ದಿವಸ ಕರ್ನಾಟಕ ರಾಜ್ಯದ ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ ಅದು ಯಾವ ರೀತಿ ಕೆಲಸ ಮಾಡುತ್ತದೆಯೋ ಅರ್ಥವಾಗುತ್ತಿಲ್ಲ. ಇದಕ್ಕೆ ವಿದ್ಯುತ್ ಮಂತ್ರಿಗಳೂ ಕೂಡ ಗಮನ ಕೊಡುತ್ತಿಲ್ಲ. ಅವರೇನೋ ಒಳ್ಳೆಯವರು, ಸಭ್ಯಸ್ಥರು ಆದರೆ ಕೆಲಸವಾಗುತ್ತಿಲ್ಲ. ಪೇಪರಲ್ಲಿ ಬಂದಿರುವಂತೆ ಹುಬ್ಬಳಿಯಲ್ಲಿ ಯೂನಿಯನ್‌ನವರು ಬೋರ್ಡಿನ ಚೀಫ್ ಇಂಜಿನಿಯರನ್ನೇ ಮ್ಯಾನ್‌ಹ್ಯಾಂಡಲ್ ಮಾಡಿದ್ದಾರೆ, ಅವರದು ತಪ್ಪಿದ್ದರೆ ವಿಚಾರಣೆ ನಡೆಸಬೇಕು.ಆದ್ದರಿಂದ ಸರ್ಕಾರ ಇದನ್ನು ಸರಿಪಡಿಸಬೇಕೆಂದು ಕೇಳುತ್ತೇನೆ.

ಇವತ್ತು ಸುಮಾರು ೨೦ ಲಕ್ಷ ಯೂನಿಟ್ ವಿದ್ಯುತ್ತನ್ನು ಬೇರೆ ರಾಜ್ಯಗಳಿಂದ ತರಿಸುತ್ತಿದ್ದಾರೆ. ಅದಕ್ಕೆ ಸುಮಾರು ೩೫ ರಿಂದ ೪೦ ಲಕ್ಷ ಖರ್ಚಾಗುತ್ತಿದೆ. ಪರಿಸ್ಥಿತಿ ಹೀಗಾಗಿ ಏನಾಗಿದೆ ಎಂದರೆ ಕರ್ನಾಟಕದ ಆರ್ಥಿಕ ಸ್ಥಿತಿ ಸರಿಹೋಗಬೇಕಾದರೆ ದೇವೇಗೌಡರು ಮನಸ್ಸು ಮಾಡಿ ಇರಿಗೇಷನ್ ಪ್ರಾಜೆಕ್ಟ್‌ಗೆ ಜಾಸ್ತಿ ದುಡ್ಡು ಕೊಡಬೇಕು. ಆಗ ಮಾತ್ರ ಸರಿಯಾಗಿ ನಡೆಯುತ್ತದೆ.

೫–೦೦ ಪಿ. ಎಂ.

ನಮ್ಮಲ್ಲಿರತಕ್ಕ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಬೇಕು. ನಾವು ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಜಾಸ್ತಿ ಮಾಡುತ್ತಿದ್ದೇವೆ. ಹೆರಿಗೆ ಭತ್ಯೆ, ಸೀರೆ, ದೋತಿ ತಾಳಿ ಇಂತಹದ್ದು ಏನು ಕೊಡುತ್ತೀರಿ ಅದನ್ನೆಲ್ಲಾ ಕೊಡುವುದು ಬೇಡ. ಇದನ್ನೆಲ್ಲಾ ತಪ್ಪಿಸಿದರೆ ೧೨೦ ಕೋಟಿ ರೂಪಾಯಿ ಉಳಿತಾಯವಾಗುತ್ತದೆ. ಬಟ್ಟೆ ಕೊಡುವುದು. ಪುಸ್ತಕ ಕೊಡುವುದು ಇದನ್ನೆಲ್ಲಾ ಬಿಡಬೇಕು. ತಂದೆಯಾದವನು ಮಗನಿಗೆ ಪುಸ್ತಕ ಕೊಡಿಸುವುದಿಲ್ಲವೇನು?

ಒಬ್ಬ ಮಾನ್ಯ ಸದಸ್ಯರು.—ಹಾಗಾದರೆ ಕೊಡುವುದು ಬೇಡವೆಂದು ಹೇಳುತ್ತೀರೇನು ?

ಶ್ರೀ ಜಿ. ಎಚ್. ಅಶ್ವತ್ಥರೆಡ್ಡಿ.—ಅದು ನಿಮಗೆ ಅರ್ಥವಾಗುವುದಿಲ್ಲ ತಾವು ಕುಳಿತುಕೊಳ್ಳಿ. ಟರ್ನ್ ಓವರ್ ಟ್ಯಾಕ್ಸ್ ೫ ರಿಂದ ೧೫ ಲಕ್ಷ ಮತ್ತೆ ೧ ಕೋಟಿಯಿಂದ ಎರಡು ಕಾಲು ಕೋಟಿ ಮತ್ತೊಂದು ಒಂದರಿಂದ ಒಂದೂಕಾಲು ಪರ್ಸೆಂಟ್ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತದೆ. ಇದರಿಂದ ವರ್ತಕರಿಗೆ ಅನುಕೂಲವಾಗುತ್ತದೆ. ಅವರು ಒಂದು ರೀತಿಯ ಲೆಕ್ಕ ಬರೆದಿರುತ್ತಾರೆ ಅದು ನಮಗೆ ಅರ್ಥವಾಗುವುದಿಲ್ಲ. ಟರ್ನ್ ಓವರ್ ಟ್ಯಾಕ್ಸ್ ೫ ರಿಂದ ೧೫ ಲಕ್ಷ ಸುಮಾರು ೨ ಕೋಟಿವರೆಗೆ ರಿಯಾಯಿತಿ ಕೊಟ್ಟಿದ್ದಾರೆ, ಟ್ಯಾಕ್ಸ್ ಹಾಕಿರುವ ಬಗ್ಗೆ ಮಾನ್ಯ ಸದಸ್ಯರಾದ ನಾರಾಯಣರಾವ್ ರವರು ಮಾತನಾಡುತ್ತಾ, ರೇಸ್ ಆಡುವವರಿಗೆ ಎಕ್ಸಮ್‌ಷನ್ ಕೊಟ್ಟಿದ್ದೇವೆ, ಆ ರೀತಿ ಮಾಡಿರುವುದರಿಂದ ರೇಸ್ ಆಡುವವರು ಒಳಗೆ ಬಂದು ಆಡುತ್ತಾರೆ ಅದರಿಂದ ಸರ್ಕಾರಕ್ಕೆ ಹೆಚ್ಚು ಆದಾಯ ಬರುತ್ತದೆಂದು ಹೇಳಿದರು. ಇದರಿಂದ ಎಂದಿಗೂ ಆದಾಯ ಬರುವುದಿಲ್ಲ. ರೇಸ್ ಆಡುವವರ ಮೇಲೆ

ನೂರಕ್ಕೆ ನೂರರಷ್ಟು ಟ್ಯಾಕ್ಸನ್ನು ಹಾಕಿದರೆ ಯಾರೂ ಮಾತನಾಡುವುದಿಲ್ಲ. ಈಗೇನು ೪೩ ಕೋಟಿ ರೂಪಾಯಿ ಖೋತಾ ಇದೆ ಅದನ್ನು ಅದರಿಂದ ತುಂಬ ಬಹುದಾಗಿತ್ತು. ಮಾದಕ ಪಾನೀಯಕ್ಕೆ ಮೇಲೆ ಟ್ಯಾಕ್ಸನ್ನು ಕಡಿಮೆ ಮಾಡಿರುವುದು ಅದು ಖಂಡನೀಯ. ಅದರಿಂದ ನಮ್ಮ ಕರ್ನಾಟಕ ರಾಜ್ಯಗಳ ಅನ್ಯಾಯವಾಗಿದೆಯೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಕೋ ಆಪರೇಟೀವ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುವುದಾದರೆ, ಸಕ್ಕರೆ ಕಾರ್ಖಾನೆಗಳು ಬಹಳಷ್ಟು ನಿಂತುಹೋಗಿವೆ. ಕೋ ಆಪರೇಟೀವ್ ಮಿಲ್‌ಗಳು ಸಹ ನಿಂತು ಹೋಗಿವೆ. ಅಧ್ಯಕ್ಷರ ಜಿಲ್ಲೆಯಲ್ಲಿ ಗದಗ ಮತ್ತು ಬೇರೆ ಕಡೆ ಚೆನ್ನಾಗಿ ನಡೆಯುತ್ತವೆ. ಆದರೆ ಬೀದರ್ ಬಿಜಾಪುರ, ಹಳೆಯ ಮೈಸೂರಿನ ಭಾಗದಲ್ಲಿರತಕ್ಕ ಎಲ್ಲಾ ಕೋ ಆಪರೇಟಿವ್ ಟೆಕ್ಸ್‌ಟೈಲ್ಸ್ ಮಿಲ್‌ಗಳು ನಿಂತಿವೆ. ಸಕ್ಕರೆ ಕಾರ್ಖಾನೆಗಳು ಸಹ ಅದೇ ಸ್ಥಿತಿಯಲ್ಲಿವೆ. ಗೌರಿಬಿದನೂರು ಸಕ್ಕರೆ ಕಾರ್ಖಾನೆ, ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಸಕ್ಕರೆ ಕಾರ್ಖಾನೆ, ಮಹದೇಶ್ವರ ಸಕ್ಕರೆ ಕಾರ್ಖಾನೆ ಇವುಗಳೆಲ್ಲಾ ನಿಂತು ಹೋಗಿವೆ. ಡಿ.ಸಿ.ಸಿ. ಬ್ಯಾಂಕ್ ಮತ್ತು ಕೆನರಾ ಬ್ಯಾಂಕ್‌ಗಳಿಂದ ಸಾಲ ಪಡೆದುಕೊಂಡಿರುವ ಯೂನಿಟ್‌ಗಳೇನಿವೆ ಅವು ಸ್ವಲ್ಪ ಲಾಭದಾಯಕವಾಗಿ ನಡೆಯುತ್ತಿವೆ. ಕೋ ಆಪರೇಟಿವ್ ಸುಗರ್ ಫ್ಯಾಕ್ಟರಿ ಮತ್ತು ಟೆಕ್ಸ್‌ಟೈಲ್ಸ್ ಮಿಲ್‌ಗಳು ಏನಿವೆ ಅವುಗಳೆಲ್ಲಾ ಲಾಸ್‌ನಲ್ಲಿವೆ. ಮಾರ್ಕೆಟಿಂಗ್ ಫೆಡರೇಷನ್ ಅದು ಯಾವುದೇ ಇರಲಿ ಎಲ್ಲ ಲಾಸ್‌ನಲ್ಲಿವೆ. ಅವುಗಳಲ್ಲಿ ಸುಮಾರು ೩೦-೪೦ ವರ್ಷಗಳಿಂದ ಅಲಿಬಾಬ ಮತ್ತು ೪೦ ಮಂದಿ ಸ್ನೇಹಿತರು ಅದರಲ್ಲಿ ಸೇರಿದ್ದಾರೆ.

ಶ್ರೀ ಕೆ. ಬಿ. ಮಲ್ಲಪ್ಪ.—ಮಾನ್ಯ ಸದಸ್ಯರು ಮಾತನಾಡುವಾಗ ಆಲಿಬಾಬ ಮತ್ತು ೪೦ ಮಂದಿ ಸ್ನೇಹಿತರು ಎಂದು ಹೇಳಿದರು ಅವರು ಯಾರ್ಯಾರು ಎಂದು ಹೇಳಿದರೆ ಸಹಾಯ ಮಾಡಿದಂತಾಗುತ್ತದೆ.

ಶ್ರೀ ಜಿ. ಎಚ್. ಅಶ್ವತ್ಥರೆಡ್ಡಿ.—ಸಮಯ ಬಂದಾಗ ಹೇಳುತ್ತೇನೆ. ಕೈಗಾರಿಕೆ ಬಗ್ಗೆ ಹೇಳುವುದಾದರೆ ಆಯವ್ಯಯ ಪತ್ರದಲ್ಲಿ ಕೈಗಾರಿಕೆ ಮಾಡುವುದರಲ್ಲಿ ಯಾವುದೇ ಪ್ರಯತ್ನ ಇಲ್ಲ. ಹೊಸ ಕೈಗಾರಿಕೆಗಳನ್ನು ಮಾಡುವಲ್ಲಿ, ದೊಡ್ಡ ಕೈಗಾರಿಕೆ ಸಣ್ಣ ಕೈಗಾರಿಕೆ ಯಾವುದೂ ಮಾಡಿಲ್ಲ. ಅಲ್ಲೊಂದು ಇಲ್ಲೊಂದು ಫ್ಲೋರ್ ಮಿಲ್‌ಗಳಾಗಿವೆ. ದೊಡ್ಡ ಪ್ರಮಾಣದ ಕೈಗಾರಿಕೆಗಳು ಬರುತ್ತಾ ಇಲ್ಲ. ಬೇರೆ ಪ್ರಾಂತ್ಯಗಳಿಗೆ ಹೋಗುತ್ತಿವೆ. ಆಂಧ್ರಪ್ರದೇಶ, ಕೇರಳ ರಾಜ್ಯಗಳಿಗೆ ಹೋಗುತ್ತಿವೆ, ಇದು ಮಾನ್ಯ ಕೃಷ್ಣನ್‌ರವರಿಗೆ ಗೊತ್ತಿದೆ. ದಯವಿಟ್ಟು ಸರ್ಕಾರ ನೀರಾವರಿ ಮತ್ತು ವಿದ್ಯುತ್ ಇವುಗಳ ಕಡೆಗೆ ಆದ್ಯತೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ರೂರಲ್ ಡೆವಲಪ್‌ಮೆಂಟ್ ವಿಷಯದಲ್ಲಿ ಹೇಳುವುದಾದರೆ ಕೇಂದ್ರಸರ್ಕಾರದ ಯೋಜನೆಗಳಾದ ಎನ್‌ಆರ್‌ಇಪಿ ಮಿನಿಮಮ್ ನೀಡ್ ಪ್ರೋಗ್ರಾಮ್ ಕೆಲಸ ಕಾರ್ಯಗಳು ನಡೆಯುತ್ತಿವೆ. ಜನತಾ ಮನೆಗಳನ್ನು ಕಟ್ಟುವ ಯೋಜನೆ ಏನಿದೆ ಅದು ೫೦ ಸಾವಿರ ಮನೆಗಳನ್ನು ಕಟ್ಟುವಂತಹ ಸಂದರ್ಭದಲ್ಲಿ ಕಂಟ್ರಾಕ್ಟ್ ಕೊಡದೇ ನೇರವಾಗಿ ಲ್ಯಾಂಡ್ ಆರ್ಮಿಗೆ ಕೊಡಬೇಕು. ಲ್ಯಾಂಡ್ ಆರ್ಮಿಯವರು ಮನೆಗಳನ್ನು ಚೆನ್ನಾಗಿ ಕಟ್ಟುತ್ತಿದ್ದಾರೆ. ರಸ್ತೆ ಕೆಲಸವನ್ನು ಚೆನ್ನಾಗಿ ಮಾಡುತ್ತಿದ್ದಾರೆ. ಲ್ಯಾಂಡ್ ಆರ್ಮಿಯವರಿಗೆ ಕೊಟ್ಟರೆ ಅವರು ಒಳ್ಳೆಯ ಕೆಲಸ ಮಾಡುತ್ತಾರೆ

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಸದಸ್ಯರು ಹೇಳಿದಹಾಗೆ ಲ್ಯಾಂಡ್ ಆರ್ಮಿ ಕಾರ್ಪೊರೇಷನ್‌ರವರು ರಸ್ತೆಗಳನ್ನು ಯೂನಿಫಾರಂ ಆಗಿ ಚೆನ್ನಾಗಿ ಮಾಡಿದ್ದಾರೆ. ಮಾನ್ಯ ದೇವೇಗೌಡರು ಹೋಗಿ ನೋಡಬೇಕು ಅವರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಸರಿಯಾಗಿ ಮಾಡಿದ್ದಾರೆ ಮುಂದೆ ಹೇಗೆ ಮಾಡುತ್ತಾರೆ ನೋಡೋಣ.

ಶ್ರೀ ಜಿ.ಎಚ್. ಅಶ್ವತ್ಥರೆಡ್ಡಿ.—ಇನ್ನು ತೋಟಗಾರಿಕೆ ಇಲಾಖೆಯ ಬಗ್ಗೆ ಹೇಳುವುದಾದರೆ ತೋಟಗಾರಿಗೆ ಇಲಾಖೆಯಲ್ಲಿ ಮರಿಗೌಡರು ಇದ್ದಾಗ ಬಹಳ ಚೆನ್ನಾಗಿ ನಡೆಯುತ್ತಿತ್ತು. ಈಗ ಸರಿಯಾಗಿ ಹಣ್ಣುಗಳು ಬರುತ್ತಿವೆಯೋ ಇಲ್ಲವೋ ಗೊತ್ತಿಲ್ಲ. ತೋಟಗಾರಿಗೆ ಇಲಾಖೆಯಲ್ಲಿ ಸಮರ್ಪಕವಾಗಿ ಕೆಲಸ ಮಾಡಲಿಕ್ಕೆ ಪ್ರತಿಯೊಂದು ತಾಲ್ಲೂಕಿಗೂ ಹಣವನ್ನು ಒದಗಿಸಿಕೊಂಡಹಾಗೆ ಕಾಣುತ್ತಿಲ್ಲ. ಆ ಕೆಲಸವನ್ನು ಮಾಡಬೇಕು.

ಇನ್ನು ಹೆಲ್ತ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುವುದಾದರೆ, ರಾಜ್ಯದಲ್ಲಿ ೧೭೫ ತಾಲ್ಲೂಕುಗಳಿವೆ. ೧೨೦ ಹೆಲ್ತ್ ಸೆಂಟರ್‌ಗಳನ್ನು ಕೊಟ್ಟರೆ ಹೇಗೆ ಹಂಚುವುದು ? ಒಂದೊಂದು ತಾಲ್ಲೂಕಿಗೆ ಎರಡೆರಡು ಹೆಲ್ತ್ ಸೆಂಟರ್‌ಗಳು ಬೇಕಾಗುತ್ತವೆ. ೨ ಲಕ್ಷ ಜನಸಂಖ್ಯೆ ಇರುವ ಕಡೆ ಒಂದೆರಡು ಹೆಲ್ತ್ ಸೆಂಟರ್

ಇದ್ದರೆ ಜನರಿಗೆ ಆರೋಗ್ಯಭಾಗ್ಯವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ಯೋಚನೆ ಮಾಡಬೇಕು. ಈ ಆಯವ್ಯಯ ಪತ್ರದಲ್ಲಿ ಆ ಬಗ್ಗೆ ಏನೂ ಯೋಚನೆಯನ್ನೆ ಮಾಡಿಲ್ಲ. ದುರಾದೃಷ್ಟವಶಾತ್ ಇವತ್ತಿನ ದಿವಸ ಮಂಡಿಸಿರತಕ್ಕ ಆಯವ್ಯಯಪತ್ರದಲ್ಲಿ ಕೆಲವೊಂದು ನೂನ್ಯತೆಗಳಿಗೆ. ಈ ಆಯವ್ಯಯಪತ್ರವನ್ನು ನಾನು ವಿರೋಧಿಸಿ ನಾನು ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾಳೆ ೨೬ನೇ ತಾರೀಖು ಅದರ ಬಗ್ಗೆ ಏನೂ ಹೇಳಲಿಲ್ಲ. ಈಗಾಗಲೇ ಸಮಯ ಐದು ಗಂಟೆಯಾಯಿತು.

† ಶ್ರೀ ಹಿಂಡಸಗೇರಿ ಅಬ್ದುಲ್ ಹಕೀಂ ಮಹಮದ್ ಗೌಸ್ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೆ, ಮೊಟ್ಟಮೊದಲನೆಯ ಬಾರಿಗೆ ೧೯೭೮-೭೯ನೇ ಸಾಲಿನ ಆಯವ್ಯಯ ಮುಂಗಡ ಪತ್ರದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಅರ್ಪಿಸುತ್ತಾ, ಮಾನ್ಯ ಮುಖ್ಯ ಮಂತ್ರಿಗಳು ೧೯೭೮-೭೯ನೇ ಸಾಲಿನ ಮುಂಗಡ ಪತ್ರವನ್ನು ಈ ಸದನದಲ್ಲಿ ಏನು ಮಂಡಿಸಿದ್ದಾರೆ, ಅದನ್ನು ನಾನಾ ಕಾರಣದಿಂದ ವಿರೋಧಿಸುತ್ತಾ ನಾಲ್ಕು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಜನತಾ ಸರ್ಕಾರ ೧೯೭೮-೭೯ನೇ ಸಾಲಿನ ಆಯವ್ಯಯ ಮುಂಗಡ ಪತ್ರವನ್ನು ಜನಸಾಮಾನ್ಯರ ಉದ್ಧಾರ ಮಾಡುವಂತಹ ಬಡ್ಜೆಟ್ ಎಂದು ಹೇಳಿರುವುದನ್ನು ನೋಡಿದಾಗ ಇದು ಅವರು ಹೇಳಿರುವುದು ಸತ್ಯಕ್ಕೆ ದೂರವಾದುದಾಗಿದೆ ಎಂಬುದು ಗೊತ್ತಾಗುತ್ತದೆ. ಇದು ಬಡವರ ವಿರೋಧಿ ಮುಂಗಡ ಪತ್ರವಾಗಿದೆ. ಏಕೆಂದರೆ ಲಕ್ಷುರಿ ಗೂಡ್ಸ್‌ಗಳ ಮೇಲೆ ಇರುವಂತಹ ಟ್ಯಾಕ್ಸನ್ನು ಕಡಿಮೆ ಮಾಡಿ, ಬಡವರು ಉಪಯೋಗಿಸತಕ್ಕಂತಹ ಗೂಡ್ಸ್‌ಗಳ ಮೇಲೆ ಟ್ಯಾಕ್ಸನ್ನು ಹಾಕಿದ್ದಾರೆ. ಆದಕಾರಣ ನಾನು ಈ ಮುಂಗಡ ಪತ್ರವನ್ನು ವಿರೋಧಿಸುತ್ತೇನೆ. ಮತ್ತು ಈ ಒಂದು ಮುಂಗಡ ಪತ್ರದಲ್ಲಿ ಮೈನಾರಿಟೀಸ್ ಬಗ್ಗೆ ಒಂದು ಶಬ್ದ ಸಹ ಇಲ್ಲ. ಹೋದ ವರ್ಷ ಮೈನಾರಿಟೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನ್ನು ಮಾಡುತ್ತೇವೆಂದು ಅದಕ್ಕಾಗಿ ಒಂದು ಕೋಟಿ ರೂಪಾಯಿಗಳ ಸಹಾಯಧನವನ್ನು ಕೊಡುತ್ತೇವೆಂದು ಹೇಳಿದ್ದರು. ಆದರೆ ಈ ಸಾರಿಯ ಮುಂಗಡ ಪತ್ರದಲ್ಲಿ ಮೈನಾರಿಟೀಸ್ ಬಗ್ಗೆ ಒಂದು ಶಬ್ದವನ್ನೂ ಸಹ ಹೇಳಿಲ್ಲ. ಕಳೆದ ಸಾರಿ ರಚನೆ ಮಾಡಿದಂತಹ ಕಾರ್ಪೊರೇಷನ್ನಿಗೆ ಈ ಸಾಲಿನ ಮುಂಗಡ ಪತ್ರದಲ್ಲಿ ಹಣವನ್ನು ಕೊಟ್ಟಿದ್ದಾರೆಯೇ ಅಥವಾ ಇಲ್ಲವೇ ಎಂಬುದಾಗಿ ಹೇಳಲಿಲ್ಲ. ಮತ್ತೆ ನಮ್ಮ ರಾಜ್ಯದಲ್ಲಿರುವಂತಹ ವಕ್ಫ್ ಮಂಡಲಿಗೆ ಎಷ್ಟು ಹಣವನ್ನು ಒದಗಿಸಲಾಗಿದೆ ಎಂಬುದರ ಬಗ್ಗೆಯೂ ಈ ಒಂದು ಮುಂಗಡ ಪತ್ರದಲ್ಲಿ ಕಾಣಿಸಲಿಲ್ಲ. ಹೋದ ವರ್ಷ ಈ ಒಂದು ಮಂಡಲಿಗೆ ೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದರು. ಈ ವರ್ಷವೂ ಹಣವನ್ನು ಕೊಟ್ಟಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಕಾಣಿಸಲಿಲ್ಲ. ಮತ್ತೆ ಮೇನ್‌ಟನೆನ್ಸ್ ಗ್ರ್ಯಾಂಟ್ ಎಂಬುದಾಗಿ ೧.೨ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ. ಅದು ಬಹಳ ಕಡಿಮೆಯಾಗುತ್ತದೆ. ಆದ್ದರಿಂದ ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ, ವಕ್ಫ್ ಮಂಡಲಿಗೆ ೫೦ ಲಕ್ಷ ರೂಪಾಯಿಗಳನ್ನು ಈ ಸಾಲಿನಲ್ಲಿಯೂ ಕೊಡಬೇಕು. ಜೊತೆಗೆ ಮೈನ್‌ಟನೆನ್ಸ್ ಗ್ರ್ಯಾಂಟ್ ಎಂಬುದಾಗಿ ೨೦ ಲಕ್ಷ ರೂಪಾಯಿಗಳನ್ನಾದರೂ ಈ ಸಾಲಿನಲ್ಲಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಗ್ರಾಮೀಣ ಅಭಿವೃದ್ಧಿಯ ಸಲುವಾಗಿ ಸರ್ಕಾರ ಹಣವನ್ನು ಖರ್ಚು ಮಾಡುತ್ತಿದೆ. ಆದರೆ ಪಟ್ಟಣ ಪ್ರದೇಶಗಳ ಅಭಿವೃದ್ಧಿಗಾಗಿ ಈ ಸರ್ಕಾರ ಒಂದು ಪೈಸೆಯನ್ನೂ ಸಹ ಖರ್ಚು ಮಾಡುತ್ತಿಲ್ಲ. ಪಟ್ಟಣ ಪ್ರದೇಶಗಳಿಂದಲೇ ಸರ್ಕಾರಕ್ಕೆ ಹಣ ಬರುವುದು ಸೇಲ್ಸ್ ಟ್ಯಾಕ್ಸ್, ಎಂಟರಿ ಟ್ಯಾಕ್ಸ್ ರೂಪದಲ್ಲಿ ಬರುತ್ತಿದ್ದರೂ, ಆ ಪ್ರದೇಶಗಳ ಅಭಿವೃದ್ಧಿಗಾಗಿ ಹಣವನ್ನು ಖರ್ಚು ಮಾಡುತ್ತಿಲ್ಲ. ಈ ಬಗ್ಗೆ ತಮಗೂ ಮಾಹಿತಿ ಇದೆ. ಹುಬ್ಬಳ್ಳಿ-ಧಾರವಾಡ ಮಹಾ ನಗರಸಭೆಯ ಆರ್ಥಿಕ ಸ್ಥಿತಿ ಬಹಳ ಮುಗ್ಗಟ್ಟಿನಲ್ಲಿದೆ. ಆಕ್ಟ್ರಾಯಿಯನ್ನು ತೆಗೆದ ಮೇಲೆ ಸರ್ಕಾರದಿಂದ ಆಕ್ಟ್ರಾಯಿಯ ಬದಲು ಪರಿಹಾರ ರೂಪದಲ್ಲಿ ೫ ಪರ್ಸೆಂಟ್ ಮಾತ್ರ ಕೊಡುತ್ತಿದ್ದಾರೆ. ಇದು ಏನೇನು ಸಾಲದು. ಆದ್ದರಿಂದ ಇದನ್ನು ಕನಿಷ್ಟ ೧೫ ಪರ್ಸೆಂಟ್ ಪರಿಹಾರವನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಇದೇ ಬೆಂಗಳೂರು ನಗರ ಪಾಲಿಕೆಯ ಪತಿಯಿಂದ ಸರ್ಕಾರಕ್ಕೆ ಹೆಚ್ಚು ಹಣ ಬರುತ್ತಿದೆ. ಆದ್ದರಿಂದ ಅವರಿಗೂ ಕೂಡ ಆಕ್ಟ್ರಾಯಿ ಪರಿಹಾರವಾಗಿ ೨೫ ಪರ್ಸೆಂಟ್ ಹಣವನ್ನು ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ೧೯೭೫ರಲ್ಲಿ ಸರ್ಕಾರ ಹುಬ್ಬಳ್ಳಿ-ಧಾರವಾಡ ಮಹಾ ಸಭೆಗೆ ೫೫ ಲಕ್ಷ ರೂಪಾಯಿಗಳ ಸಾಲವನ್ನು ಕೇವಲ ಕಮೀಷನರ್‌ರವರ ಪತ್ರದ ಮೇಲೆ ಕೊಟ್ಟಿದೆ. ಈ ಹಣವನ್ನು ತಮ್ಮ ಕ್ಷೇತ್ರದಲ್ಲಿ

ಬರುವಂತಹ ಹಳ್ಳಿಗಳ ಅಭಿವೃದ್ಧಿಗಾಗಿ ಮಾತ್ರ ಖರ್ಚು ಮಾಡುತ್ತಿದ್ದಾರೆ. ಈ ರೀತಿಯ ಸಾಲವನ್ನು ಪಡೆಯುವುದಕ್ಕೆ ಹುಬ್ಬಳ್ಳಿ-ಧಾರವಾಡ ಮಹಾ ಸಭೆಯ ಸರ್ವ ಸದಸ್ಯರ ಸಭೆಯು ತನ್ನ ಮಂಜೂರಾತಿ ನೀಡಿಲ್ಲ. ಈ ರೀತಿ ಪಡೆದಿರುವಂತಹ ಹಣಕ್ಕೆ ೯ ಪರ್ಸೆಂಟ್ ಬಡ್ಡಿಯನ್ನು ಆ ಕಾರ್ಪೊರೇಷನ್ ಕೊಡ ಬೇಕಾಗಿದೆ. ಆದ್ದರಿಂದ ಈ ಹಣವನ್ನು ಗ್ರ್ಯಾಂಟ್ ರೂಪದಲ್ಲಿ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಮಲಪ್ರಭಾದಿಂದ ಹುಬ್ಬಳ್ಳಿ-ಧಾರವಾಡ ನಗರಗಳಿಗೆ ಕುಡಿಯುವ ನೀರನ್ನು ತರುವ ಸಲುವಾಗಿ ೧೯೭೬ನೇ ಇಸವಿಯಲ್ಲಿ ೫ ಕೋಟಿ ರೂಪಾಯಿಗಳ ಅಂದಾಜನ್ನು ತಯಾರು ಮಾಡಿದರು. ಆ ಕೆಲಸವನ್ನು ೧೯೭೬-೭೭-೭೮ ಈ ಮೂರು ವರ್ಷಗಳಲ್ಲಿ ಮಾಡಿ ಮುಗಿಸಬೇಕಾಗಿತ್ತು. ಆದರೆ ಅವರು ಆ ರೀತಿಯ ಟೈಮ್‌ಬೌಂಡ್ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರೂ ಕೂಡ ಆ ಕೆಲಸವನ್ನು ಮುಗಿಸದೇ ಇರುವುದರಿಂದ ೭ ಕೋಟಿ ರೂಪಾಯಿಗಳ ಹೆಚ್ಚು ಹಣವನ್ನು ಆ ಯೋಜನೆಗಾಗಿ ಖರ್ಚು ಮಾಡುವಂತಹ ಪರಿಸ್ಥಿತಿ ಬಂದಿದೆ. ಇದರಿಂದ ಎಲ್.ಐ.ಸಿ.ಗೆ ಒಂದು ವರ್ಷಕ್ಕೆ ೧ ಕೋಟಿ ರೂಪಾಯಿ ಹಣವನ್ನು ಬಡ್ಡಿಯಾಗಿ ಹುಬ್ಬಳ್ಳಿ-ಧಾರವಾಡ ಮಹಾ ನಗರ ಸಭೆ ಕೊಡಬೇಕಾಗಿದೆ, ಆದ್ದರಿಂದ ಈ ಹಣವನ್ನು ಸಾಲವನ್ನಾಗಿ ತೆಗೆದುಕೊಂಡು ಅದಕ್ಕೆ ಬಡ್ಡಿಯನ್ನು ಕೊಡುವಂತಹ ಸ್ಥಿತಿಯಲ್ಲಿ ಆ ಮಹಾನಗರಸಭೆ ಇಲ್ಲ. ಆದ್ದರಿಂದ ಈ ಹಣವನ್ನು ಗ್ರ್ಯಾಂಟ್ ರೂಪದಲ್ಲಿ ಕೊಡಬೇಕೆಂದು ಮತ್ತೊಮ್ಮೆ ಸರ್ಕಾರವನ್ನು ತಮ್ಮ ಮೂಲಕ ಕೇಳಿಕೊಂಡು ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ರಾಜವರ್ಧನ್.— ಕಾಂಗ್ರೆಸ್ ಪಕ್ಷದವರು ೯೫೧ ನಿಮಿಷವನ್ನು ಉಪಯೋಗ ಮಾಡಿ ಕೊಂಡಿದ್ದಾರೆ. ಅವರಿಗೆ ಅಲಾಟ್ ಮಾಡಿರತಕ್ಕಂತಹದ್ದು ೨೮೫ ನಿಮಿಷ ಮಾತ್ರ. ಆದ್ದರಿಂದ ಅವರು ನಮ್ಮ ಕಡೆಯವರು ಮಾತನಾಡಬೇಕಾಗಿರತಕ್ಕಂತಹ ಸದಸ್ಯರ ಸಮಯವನ್ನು ತೆಗೆದುಕೊಂಡು ಅವರಿಗೆ ತಾವು ಕೊಡುತ್ತಿದ್ದೀರಿ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.— ಅದಕ್ಕೆ ನಾವೇನು ಮಾಡೋಣ, ಅವರು ಕರೆದಾಗ ನಿಮ್ಮ ಕಡೆಯವರು ೮ ಜನರು ಇರಲೇ ಇಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಸನ್ಮಾನ್ಯ ಸರ್ಕಾರಿ ಮುಖ್ಯ ಸಚೇತಕರ ಅಭಿಪ್ರಾಯದಂತೆ ಸಭೆಯನ್ನು ನಡೆಸಬೇಕಾಗಿದ್ದರೆ ಇವತ್ತು ೪ ಗಂಟೆಗೆ ಸಭೆಯನ್ನು ಮುಂದೂಡಿ ಮನೆಗೆ ಹೋಗ ಬೇಕಾಗಿತ್ತು. ನಿಮ್ಮ ಕಡೆಯ ಸದಸ್ಯರು ೮ ಜನರನ್ನು ಕರೆದಾಗಲೂ ಯಾರೂ ಇರಲಿಲ್ಲ.

ಶ್ರೀ ಎಚ್.ಡಿ. ದೇವೇಗೌಡ.— ಕೆಲಸಗಳ ಕಾರ್ಯ ನಿಮಿತ್ತ ಹೊರಗಡೆ ಹೋಗಿದ್ದರು ಅಂತ ಕಾಣುತ್ತೆ. ಆದರೆ ನಮ್ಮ ಕಡೆಯವರು ಯಾರೂ ಮಾತನಾಡುವುದಕ್ಕೆ ಆಸಕ್ತಿ ಇಲ್ಲವೆಂದಲ್ಲ.

ಶ್ರೀ ಜಿ. ನಾರಾಯಣ ಕುಮಾರ್.— ಮಾನ್ಯ ಅಧ್ಯಕ್ಷರೇ.........

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.— ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ನಾರಾಯಣ ಕುಮಾರ್ ರವರನ್ನು ಹತೋಟಿಯಲ್ಲಿಟ್ಟುಕೊಳ್ಳಿ. ಅವರು ಯಾವಾಗ ಬೇಕೆಂದರೆ ಆವಾಗ ಎದ್ದು ಮಾತನಾಡುವ ಅಭ್ಯಾಸವಾಗಿಬಿಟ್ಟಿದೆ. ನನಗೆ ಗೊತ್ತಿದ್ದ ಹಾಗೆ ಅಲ್ಲೊಂದು ಸ್ವಿಚ್ ಇದೆ. ಅದನ್ನು ಆಪರೇಟ್ ಮಾಡಿದರೆ ಅವರು ಮಾತನಾಡುವುದು ಯಾವುದೂ ಕೇಳುವುದೇ ಇಲ್ಲ.

† ಶ್ರೀ ಗೋಪಾಲ ಮುಕುಂದ ಕಾನಡೆ (ಶಿರಸಿ).— ಮಾನ್ಯ ಅಧ್ಯಕ್ಷರೇ, ೧೯೮೬-೮೭ನೇ ಸಾಲಿನ ಮುಂಗಡ ಪತ್ರ ಏನು ಇದೆ ಇದು ಹರಿಜನ-ಗಿರಿಜನರ, ರೈತರ ಹಾಗೂ ಕೂಲಿಕಾರರ ವಿರೋಧಿ ಬಡ್ಜೆಟ್ ಆಗಿರುವುದರಿಂದ ನಾನು ವಿರೋಧ ಮಾಡುತ್ತಿದ್ದೇನೆ. ಈ ಸಾಲಿನ ಬಡ್ಜೆಟ್ಟಿನಲ್ಲಿ ಜೂಜಾಟಕ್ಕೆ ಬಹಳ ದೊಡ್ಡ ಮಹತ್ವವನ್ನು ಕೊಟ್ಟಿದ್ದಾರೆಂದು ಹೇಳುತ್ತೇನೆ ಕಂದುರೆ ಜೂಜಾಟಕ್ಕೆ ಯಾರು ಹೋಗುತ್ತಾರೋ ಅವರಿಗೆ ಈ ಜನತಾ ಸರ್ಕಾರ ಬಹಳ ಗೌರವ ಕೊಟ್ಟಿದ್ದಾರೆ, ಅದೇ ರೀತಿ ಬಡವರನ್ನು ಇನ್ನೂ ನೆಲ ಸಮ ಮಾಡಿದ್ದಾರೆ. ಈ ರಾಜ್ಯದಲ್ಲಿ ೧೬-೧೭ ಜಿಲ್ಲೆಗಳಲ್ಲಿ ಭೀಕರ ಬರಗಾಲವಿದ್ದು ಎಲ್ಲೋ ಕೆಲವು ಕಡೆ ನೀರಿನ ಸೌಕರ್ಯ ಇರುವಂತಹವರು ಬೆಳೆದಂಥ ತರಕಾರಿ ಮೇಲೂ ಇವರು ಟ್ಯಾಕ್ಸ್ ಹಾಕುವುದಕ್ಕೆ ಹೊರಟಿದ್ದಾರೆ. ಟ್ಯಾಕ್ಸ್ ಅಂದರೆ ಏನು ಎಂಬುದೇ ಗೊತ್ತಿಲ್ಲದ ಜನಗಳ ಹತ್ತಿರ ಟ್ಯಾಕ್ಸನ್ನು ವಸೂಲಿ ಮಾಡುವುದಕ್ಕೆ ಹೊರಟಿದ್ದಾರೆ. ಮಂಡಲ್ ಪಂಚಾಯಿತಿ ಎಂದು ಏನು

ಮಾಡುತ್ತಿದ್ದಾರೆ ಅವುಗಳು ಟ್ಯಾಕ್ಸ್ ಕೊಡುವಂತಹ ಪಂಚಾಯಿತಿಗಳಾಗುತ್ತವೆಂದು ಅಲ್ಲಿನ ಜನಗಳೇ ಈಗಾಗಲೇ ಹೇಳುತ್ತಿದ್ದಾರೆ. ಈ ಸರ್ಕಾರದವರು ಹರಿಜನ-ಗಿರಿಜನರನ್ನು ಉದ್ಧಾರ ಮಾಡುತ್ತೇವೆಂದು ಪ್ರತಿಯೊಂದರಲ್ಲೂ ಭಾಷಣ ಮಾಡುತ್ತಿದ್ದಾರೆ. ಆದರೆ ಇವತ್ತು ಅದನ್ನು ಒಳಹೊಕ್ಕು ನೋಡಿದಾಗ ಹರಿಜನ-ಗಿರಿಜನ ಕಲ್ಯಾಣ ಇಲಾಖೆ ಏನಿದೆ. ಆ ಇಲಾಖೆ ೧೨,೮೮.೪೦,೯೦೦ ರೂಪಾಯಿಗಳನ್ನು ಖರ್ಚು ಮಾಡದೆ ಲ್ಯಾಪ್ಸ್ ಮಾಡಿದ್ದಾರಲ್ಲಾ, ಅದನ್ನು ನೋಡಿದರೆ ಹರಿಜನ-ಗಿರಿಜನರ ಉದ್ಧಾರ ಮಾಡುತ್ತಿದ್ದೇವೆಂದು ಹೇಳುವುದಕ್ಕೆ ನಾಚಿಕೆಯಾಗುವುದಿಲ್ಲವೇ? ಈ ರೀತಿ ೧೨ ಕೋಟಿ ಹಣವನ್ನು ಖರ್ಚು ಮಾಡದೇ ಸರ್ಕಾರಕ್ಕೆ ವಾಪಸ್ಸು ಮಾಡಿದ್ದಾರಲ್ಲಾ ಆ ಅಧಿಕಾರಿಯ ಮೇಲೆ ಏಕೆ ಕ್ರಮ ತೆಗೆದುಕೊಳ್ಳಲಿಲ್ಲ? ಆ ಅಧಿಕಾರಿ ಹೇಳಿದ ಮಾತನ್ನು ಮಂತ್ರಿಗಳು ಕೇಳುತ್ತಾರೋ, ಅಥವಾ ಮಂತ್ರಿ ಹೇಳಿದ ಮಾತನ್ನು ಆ ಅಧಿಕಾರಿ ಕೇಳುತ್ತಾರೋ? ಇದನ್ನು ನೋಡಿದ ಮೇಲೆ ಮಂತ್ರಿಗಳು ಹೇಳಿದ ಮಾತನ್ನು ಅಧಿಕಾರಿಗಳು ಕೇಳುತ್ತಾ ಇಲ್ಲ ಎಂದು ಅರ್ಥವಾಗುತ್ತದೆ. ಅಧಿಕಾರಿಗಳು ಹೇಳಿದ ಮಾತನ್ನು ಮಂತ್ರಿಗಳು ಕೇಳುತ್ತಿದ್ದಾರೆಂದು ನಮಗೆ ಭಾವನೆಯಾಗುತ್ತದೆ. ಮತ್ತೆ ಈ ಸಾಲಿನಿಂದ ಒಂದೇ ಸಲ ವೆಹಿಕಲ್ ಟ್ಯಾಕ್ಸ್ ಅನ್ನು ಕಟ್ಟಬೇಕೆಂದು ಮಾಡಿದ್ದಾರೆ. ಸಾಲ ಸೋಲ ಮಾಡಿ ವೆಹಿಕಲ್‌ನ್ನು ತೆಗೆದುಕೊಂಡಿರತಕ್ಕಂತಹವರು ಒಂದೇ ಸಲ ಟ್ಯಾಕ್ಸನ್ನು ಕಟ್ಟುವುದಕ್ಕೆ ತೊಂದರೆಯಾಗುತ್ತದೆಂಬುದು ಇವರು ಗಮನಿಸಿದಂತೆ ಕಾಣುವುದಿಲ್ಲ ನಂತರ ಟ್ಯಾಕ್ಸನ್ನು ಯಾವ ರೀತಿ ಕಟ್ಟಬೇಕೆಂದರೆ. ಒಂದು ಸೀಟಿಗೆ ೧೫೦ ರೂ, ನಂತೆ ಕಟ್ಟಬೇಕೆಂದು ಮಾಡಿದ್ದಾರೆ. ಟ್ಯಾಕ್ಸನ್ನು ೪-೪ ಮನೆಗಳನ್ನು ಇಟ್ಟುಕೊಂಡು ಬಾಡಿಗೆಗೆ ಕೊಟ್ಟಿರುತ್ತಾರಲ್ಲಾ ಅವರ ಮೇಲೆ ಟ್ಯಾಕ್ಸನ್ನು ಹಾಕಿ ನಾವು ಬೇಡ ಎನ್ನುವುದಿಲ್ಲ, ಶಿವಮೊಗ್ಗದಲ್ಲಿ ನಡೆದಿರುವಂತಹ ಒಂದೇ ಒಂದು ಉದಾಹರಣೆಯನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಅನಧಿಕೃತವಾಗಿ ಮನೆ ಕಟ್ಟಿರುವಂತಹ ಒಬ್ಬರಿಗೆ ೩೦೦ ರೂ. ದಂಡ ಹಾಕಿದ್ದಾರೆ. ಅದೇ ರೀತಿ ಇನ್ನೊಬ್ಬ ಹರಿಜನ ವ್ಯಕ್ತಿಯೂ ಕೂಡ ಅನಧಿಕೃತವಾಗಿ ಮನೆಯನ್ನು ಕಟ್ಟಿದ್ದಾನೆ. ಆತನಿಗೆ ಇವರು ಹಾಕಿರುವಂತಹ ದಂಡ ೧,೦೦೦ ರೂ, ಮತ್ತೆ ನಮ್ಮ ಜಿಲ್ಲೆಯಲ್ಲಿ ಮೊನ್ನೆ ಒಂದು ಬೆಂಕಿ ಅನಾಹುತವಾಗಿ ೩೦-೪೦ ಮನೆಗಳು ಸುಟ್ಟುಹೋಗಿವೆ ಎಂಬುದಾಗಿ ಜಿಲ್ಲಾಧಿಕಾರಿಗಳು ಟೆಲೆಕ್ಸ್ ಮೆಸೇಜ್ ಕೊಟ್ಟಿದ್ದಾರೆ ಆ ಬಗ್ಗೆ ಕೂಡಲೇ ಪರಿಹಾರವನ್ನು ಕೊಡಬೇಕೆಂದು ಮುಖ್ಯಮಂತ್ರಿಗಳಿಗೆ ನಾನೊಂದು ಪತ್ರವನ್ನು ಬರೆದೆ, ಅವರು ಆ ಪತ್ರಕ್ಕೆ ಕೊಟ್ಟಿರುವಂತಹ ಉತ್ತರವೂ ಕೂಡ ಇಲ್ಲೇ ಇದೆ. ಎಲ್ಲರಿಗೂ ಪರಿಹಾರ ಕೊಟ್ಟಿದ್ದೇವೆಂದು ಹೇಳಿದ್ದಾರೆ.

ಅವರು ಸುಮಾರು ೩೦ ಮನೆಗಳಿಗೆ ಏನೇನು ಪರಿಹಾರ ಕೊಟ್ಟಿಲ್ಲ. ಎ.ಸಿ.ಯವರು ಕೊಡಬೇಕಾದ ಪರಿಹಾರವನ್ನು ಕೊಟ್ಟಿಲ್ಲ. ಡಿ.ಸಿ.ಯವರು ಕೊಡಬೇಕಾದ ಪರಿಹಾರವನ್ನು ಕೊಟ್ಟಿಲ್ಲ ಮುಖ್ಯಮಂತ್ರಿಗಳು ಕೊಡುವ ಪರಿಹಾರವನ್ನು ಕೊಟ್ಟಿಲ್ಲ. ಆದರೆ ಇವರು ಯಾರಿಗೆ ಕೊಟ್ಟಿದ್ದಾರೆಂದರೆ ಅವರ ಜಾತಿಯವರಿಗೆ ಮಾತ್ರ ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಯವರಿಗೆ ಮಾತ್ರ ಕೊಟ್ಟಿದ್ದಾರೆ. ತಹಶೀಲ್ದಾರರ ಕಚೇರಿಯಿಂದ ೩೦೦ ರೂಪಾಯಿ, ಎ.ಸಿ ಕಚೇರಿಯಿಂದ ೩೫೦ ರೂಪಾಯಿ ಡಿ.ಸಿ. ಕಚೇರಿಯಿಂದ ೧೫೦ ರೂಪಾಯಿ ಮತ್ತು ಮುಖ್ಯ ಮಂತ್ರಿಗಳ ಕಚೇರಿಯಿಂದ ೩೩.೫೦೦ ರೂಪಾಯಿಗಳನ್ನು ಅವರ ಸಂಬಂಧಿಕರಾದ ಮಡಿವಾಳ ಜನಾಂಗದವರಿಗೆ ಕೊಟ್ಟಿದ್ದಾರೆ.

ಶ್ರೀ ಜಿ. ನಾರಾಯಣ ಕುಮಾರ್.— ನನ್ನದೊಂದು ಕ್ರಿಯಾಲೋಪ, ಮುಖ್ಯಮಂತ್ರಿಗಳ ಸಂಬಂಧಿಕರು ಮಡಿವಾಳರು ಎಂದು ಹೇಳುತ್ತಿದ್ದಾರೆ.

ಶ್ರೀ ಗೋಪಾಲ ಮುಕುಂದ ಕಾನಡೆ.— ಮುಖ್ಯ ಮಂತ್ರಿಗಳ ಅಪ್ತ ಕಾರ್ಯದರ್ಶಿಯವರ ಜಾತಿಯವರಿಗೆ ಮಾತ್ರ ಕೊಟ್ಟಿದ್ದಾರೆ ಉಳಿದವರಿಗೆ ಏತಕ್ಕೆ ಕೊಟ್ಟಿಲ್ಲ. ರಾಮಪ್ಪನವರ ಜಾತಿಯವರಿಗೆ ಮಾತ್ರ ಕೊಟ್ಟಿದ್ದಾರೆ. ಸರ್ಕಾರದವರು ಅಧಿಕಾರಿಗಳಿಗೆ ಮೋಸ ಮಾಡುತ್ತಿದ್ದಾರೆಯೇ ಹೇಗೆ? ನನ್ನ ಹತ್ತಿರ ಟೆಲೆಕ್ಸ್ ಮೆಸೇಜ್ ಇದೆ. ಇದರಲ್ಲಿ ಡಿ.ಸಿ.ಯವರು ಎಲ್ಲರಿಗೂ ಪರಿಹಾರ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇದನ್ನು ತಮ್ಮ ಕಡೆ ಕಳುಹಿಸಿಕೊಡುತ್ತೇನೆ. ಮುಖ್ಯ ಸಚೇತಕರು ಒಂದು ಮಾತು ಹೇಳಿದರು. ರಾಜಕೀಯ ಸಾಮಾಜಿಕವಾಗಿರಬೇಕು. ರಾಜಕೀಯ ದೃಷ್ಟಿಕೋನ ಇರಬಾರದು ಎಂದು. ಆದರೆ ಕೆಲವು ವಿಚಾರಗಳನ್ನು ಸದನದಲ್ಲಿ ತೆಗೆದುಕೊಂಡರೆ ಅದು ಕೋರ್ಟಿನಲ್ಲಿದೆ, ಅದನ್ನು ಈಗ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ದಿನಗೂಲಿ ನೌಕರರನ್ನು ಕೆಲಸದಿಂದ ತೆಗೆದರು. ೧೯೮೩ರಲ್ಲಿ ಅವರು ಸ್ಟೇ ತಂದರು ಆಮೇಲೆ ತಮ್ಮ ಸರ್ಕಾರ ೧೯೮೫ ರಲ್ಲಿ ಹಿಂದಿನ ಸಂಬಳವನ್ನು ಕೂಡ

ಕೊಡಬೇಕೆಂದು ಮಾಡಿತು. ನಾಲ್ಕು ಸಾವಿರ ಜನ ಕೆಲಸ ಮಾಡದೆ ಇದ್ದವರಿಗೆ ೫ ಕೋಟಿ ರೂಪಾಯಿ ಕೊಟ್ಟಿದೆ. ಅದೇ ಒಬ್ಬ ಬಡವ ಗೋಪಾಲ ಎಂಬ ಹರಿಜನ ನೌಕರನಿಗೆ ಪ್ರವಾಸ ಹೋಗುವುದಕ್ಕೆ ೩ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದರು. ಅವನು ಟೂರ್ ಹೋದ ಕಾಗದ ಪತ್ರಗಳನ್ನು ಕೊಟ್ಟಿಲ್ಲವೆಂದು ಅವನಿಗೆ ತೊಂದರೆ ಮಾಡಿದ್ದಾರೆ ಅವನು ಮಂಪ್ಪರ ಕುಳಿತು ಇಲ್ಲಿಗೆ ೪೦೦ ದಿವಸಗಳು ಕಳೆದವು ಬಹುಶಃ ಇವರು ಜಾತಿ ಮೇಲೆ, ವರ್ಗದ ಮೇಲೆ ನೋಡುತ್ತಾರೆಂದು ಕಾಣುತ್ತದೆ. ೫ ಕೋಟಿ ರೂಪಾಯಿ ಕೊಟ್ಟಿದ್ದನ್ನು ಆಯವ್ಯಯದಲ್ಲಿ ತೋರಿಸಿಲ್ಲ. ಕೇವಲ ೩ ಸಾವಿರ ರೂಪಾಯಿಗಳಿಗಾಗಿ ಅವನು ತೊಂದರೆಗೆ ಒಳಗಾಗಿದ್ದಾನೆ. ನಮ್ಮ ಸಿರಸಿ ಆಸ್ಪತ್ರೆಯಲ್ಲಿ ಸರ್ಜನ್ ಇಲ್ಲವೆಂದು ನಾನು ಈಗಾಗಲೇ ಸರ್ಕಾರಕ್ಕೆ ಹತ್ತು ಸಾರಿ ಹೇಳಿದ್ದೇನೆ. ಏತಕ್ಕೆ ಹಾಕಿಲ್ಲವೆಂದರೆ ಖಾಸಗಿ ವೈದ್ಯರಿಗೆ ಹೊಡೆತ ಬೀಳುತ್ತದೆಂದು ಹೇಳುತ್ತಾರೆ. ಹಿಂದೆ ಶ್ರೀನಿವಾಸ್ ಎಂಬ ವೈದ್ಯರು ಇದ್ದರು ಅವರು ಆಪರೇಷನ್ ಎಲ್ಲ ಮಾಡುತ್ತಿದ್ದರು. ಜೆ. ಹೆಚ್. ಪಟೇಲ್ ಬಂದಾಗಲೂ ಅವರು ಅಲ್ಲೇ ಇದ್ದರು. ಅವರನ್ನು ವರ್ಗ ಮಾಡಿದ ಬಳಿಕ ಬೇರೊಬ್ಬ ವೈದ್ಯರನ್ನೇನು ಹಾಕಿದ್ದಾರೆ ಅವರು ಸರ್ಜನ್ ಅಲ್ಲ. ಏತಕ್ಕೆ ಅಂಥವರನ್ನು ಹಾಕಿದ್ದಾರೆ? ಹೀಗಾಗಿ ಅಲ್ಲಿರತಕ್ಕ ಖಾಸಗಿ ವೈದ್ಯರಿಗೆ ದುಡ್ಡಾಗುತ್ತದೆ. ಈಗ ಆ ವೈದ್ಯರು ಇರುವುದರಿಂದ ಯಾರೂ ಆ ಆಸ್ಪತ್ರೆಗೆ ಹೋಗುತ್ತಿಲ್ಲ. ಈ ರೀತಿಯಾಗಿ ಸರ್ಕಾರದವರು ಒಂದಲ್ಲ ಒಂದು ರೀತಿಯಲ್ಲಿ ಕಿರುಕುಳ ಕೊಡುತ್ತಿದ್ದಾರೆ. ಇವತ್ತಿನ ದಿವಸ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುವುದಿಲ್ಲ. ನಿಮ್ಮ ಎದುರಿಗೆ ೨೦ ಹಳ್ಳಿಗಳಲ್ಲಿ ಕೆಲಸ ಆಗಿಲ್ಲವೆಂದು ಹೇಳಿದರು; ಅಲ್ಲಿ ರಸ್ತೆ ಇಲ್ಲ, ಕೊಳವೆ ಬಾವಿ ಇಲ್ಲ. ರಸ್ತೆ ರಿಪೇರಿ ಮಾಡಿದ್ದೇವೆಂದು ಹೇಳಿದ ಕಡೆ ರಿಪೇರಿ ಆಗಿರುವುದಿಲ್ಲ. ನಮ್ಮಲ್ಲಿ ವರದಾ ನದಿ ಇದೆ. ಅದಕ್ಕೆ ಅಣೆಕಟ್ಟು ಆಗಲಿಲ್ಲ. ಕೃಷ್ಣಾ ನದಿಗೆ ಅಣೆಕಟ್ಟು ಕಟ್ಟಿ ನೀರಾವರಿ ಮಾಡಿಕೊಳ್ಳುತ್ತಿದ್ದಾರೆ. ಸಿರಸಿಯಲ್ಲಿ ಬನವಾಸೆ ಎಂದು ಇದೆ ಅಲ್ಲಿ ೭೦೦ ಎಕರೆ ಜಮೀನಿಗೆ ನೀರಿನ ಅನುಕೂಲ ಆಗಬೇಕಾಗಿದೆ. ಹರಿಜನರಿಗೆ ಒಂದು ಸಾವಿರ ರೂಪಾಯಿ ದಂಡ ಹಾಕಿದರೆ ಬೇರೆಯವರಿಗೆ ೩೦೦ ರೂಪಾಯಿ ಹಾಕಿದ್ದಾರೆ. ಆ ಜನ ಬೇರೆ ಈ ಜನ ಬೇರೆಯೇ ಎಂದು ಕೇಳುತ್ತೇನೆ. ಇಟ್ಟಿಗೆ ಮಾಡುವವರಿಗೆ ಒಂದರಿಂದ ಎರಡು ಪಟ್ಟು ಹಾಕಿದ್ದಾರೆ. ಕಲ್ಲು ಕೆಲಸ ಮಾಡುವವರಿಗೆ ಒಂದರಿಂದ ೪ ಪಟ್ಟು ಹಾಕಿದ್ದಾರೆ. ಈ ರೀತಿಯಾಗಿ ಜನರಿಗೆ ಮೋಸ ಮಾಡುತ್ತಿದ್ದಾರೆ. ಕೇಳಿದರೆ ೨೫ ಪರ್ಸಂಟ್ ಹಾಕಿದ್ದೇವೆಂದು ಹೇಳುತ್ತಾರೆ. ಆದ್ದರಿಂದ ಈ ಸರ್ಕಾರವನ್ನು ಹರಿಜನ–ಗಿರಿಜನ ವಿರೋಧಿ ಸರ್ಕಾರ ರೈತರ ವಿರೋಧಿ ಸರ್ಕಾರ ಎಂದು ಖಂಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.— ಕಾನಡೆಯವರು ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಯವರ ಶಿಫಾರಸ್ಸಿನ ಮೇಲೆ ಒಬ್ಬ ವ್ಯಕ್ತಿಗೆ ೩೫ ಸಾವಿರ ರೂಪಾಯಿ ಕೊಟ್ಟಿದ್ದಾರೆಂದು ಅಪಾದನೆ ಮಾಡಿದ್ದಾರೆ. ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ ಅವರ ಜಾತಿಗೆ ಸೇರಿದವರೆಂದು ಹೇಳಿದ್ದಾರೆ. ನಾನು ಡಿ.ಸಿ. ಯವರು ಕಳುಹಿಸಿರುವ ಟೆಲೆಕ್ಸ್ ಮೆಸೇಜನ್ನು ಓದುತ್ತೇನೆ ಕೇಳಿ. "An amount of Rs. 35,000 has already been sanctioned to 20 families out of Chief Minister's Relief fund vide letter dated so and so." this is the offical message.

ಶ್ರೀ ಗೋಪಾಲ ಮುಕುಂದ ಕಾನಡೆ.— ನಿಮಗೆ ಓದುವುದಕ್ಕೆ ಬರುವುದಿಲ್ಲ ಬಿಡಿ.

ಅಧ್ಯಕ್ಷರು.— ಅಂಥದ್ದೇನಾದರೂ ತೊಂದರೆಯಾಗಿದ್ದರೆ ಸಚಿವರನ್ನು ಭೇಟಿಯಾಗಿ ಹೇಳಿ.

ಶ್ರೀ ಗೋಪಾಲ ಮುಕುಂದ ಕಾನಡೆ— ನಾನು ಮುಚ್ಚುಮರೆ ಇಲ್ಲದೆ ಮಾತನಾಡುವುದಕ್ಕೆ ಬಂದಿದ್ದೇನೆ. ನಾನು ನಾಳೆ ದಿವಸ ಜನರಿಗೆ ಉತ್ತರ ಹೇಳಬೇಕು.

ಶ್ರೀ ಹೆಚ್.ಡಿ. ದೇವೇಗೌಡ, — ಯಾರನ್ನೂ ಭೇಟಿಯಾಗಬೇಕೆಂದು ಕೇಳುತ್ತಿಲ್ಲ. ಸದನದಲ್ಲಿ ಕೇಳುವ ಅಧಿಕಾರ ಸದಸ್ಯರಿಗೆ ಇದೆ. ಡಿ.ಸಿ.ಯವರು ಕಳುಹಿಸಿರತಕ್ಕ ಟೆಲೆಕ್ಸ್ ಮೆಸೇಜ್‌ನಲ್ಲಿ ೨೦ ಕುಟುಂಬಗಳಿಗೆ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ೩೫ ಸಾವಿರ ರೂಪಾಯಿಗಳನ್ನು ರಿಲೀಸ್ ಮಾಡಿರುವ ಕಾಪಿಯನ್ನು ಲಗತ್ತಿಸಿದ್ದಾರೆ. ಅದನ್ನು ಮುಖ್ಯ ಮಂತ್ರಿಗಳು ಕಾನಡೆಯವರಿಗೆ ಪತ್ರ ಬರೆದು ತಿಳಿಸಿದ್ದಾರೆ. ದಯವಿಟ್ಟು ಅಪಾರ್ಥ ಕಲ್ಪನೆ ಮಾಡುವುದು ಬೇಡವೆಂದು ವಿನಂತಿಸುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.— ಪತ್ರವನ್ನು ನೋಡಿ, ೩೦–೪೦ ಮನೆಗಳು ಸುಟ್ಟಿವೆ ಎಂದು ಕೊಟ್ಟಿದ್ದಾರೆ,

ಅಧ್ಯಕ್ಷರು.— ಅವರ ಪಕ್ಕದಲ್ಲಿ ಬಂದು ಮಾತನಾಡಿ.

ಶ್ರೀ ಗೋಪಾಲ ಮುಕುಂದ ಕಾನಡೆ.— ನಾನು ಇಲ್ಲೇ ಇದ್ದೇನೆ. ಪಕ್ಕದಲ್ಲಿ ಏತಕ್ಕೆ ಬರಲಿ ? ಹರಿಜನ ಮನೆ ಸುಟ್ಟಿದೆ. ಮುಸ್ಲಿಮರ ಮನೆ ಸುಟ್ಟಿದೆ. ಅವರಿಗೆ ಯಾರಿಗಾದರೂ ಪರಿಹಾರ ಕೊಟ್ಟಿದ್ದಾರೆಯೇ? ಲಿಸ್ಟ್ ಅವರ ಹತ್ತಿರವೇ ಇದೆ. ಈ ರೀತಿ ತಾರತಮ್ಯವನ್ನು ಏತಕ್ಕೆ ಮಾಡುತ್ತಾರೆ?

ಅಧ್ಯಕ್ಷರು.— ನೀವು ಕೊಟ್ಟಿದ್ದೀರಿ. ಅವರು ನೋಡುತ್ತಾರೆ, ಕುಳಿತುಕೊಳ್ಳಿ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವಾಗ ಅದರಲ್ಲಿ ಯಾರ್ಯಾರು ಮಾತನಾಡಿದ್ದಾರೆ ಅವರಿಗೆ ಇದರಲ್ಲಿ ಅವಕಾಶ ಕೊಡುವುದಿಲ್ಲ. ಮುಂದೆ ಬೇಡಿಕೆಗಳ ಮೇಲೆ ಮಾತನಾಡುವಾಗ ಕೊಡುತ್ತೇನೆಂದು ಹೇಳಿದ್ದೇನೆ ಶ್ರೀಯುತರಾದ ಉಮರಬ್ಬ, ಲೈಕುದ್ದೀನ್, ಉದಾಸ್, ಕೋಳಿವಾಡ, ಶ್ರೀನಿವಾಸ್ ಚಿನ್ನಪ್ಪ, ರಾಮಯ್ಯ ಮತ್ತು ಶ್ರೀಮತಿ ಮುಕ್ತರುನ್ನೀಸ ಬೇಗಂ ಇವರೆಲ್ಲಾ ಹಿಂದೆ ಮಾತನಾಡಿದ್ದಾರೆ. ಈಗ ಕಾನಡೆಯವರು ಇನ್ನು ಅನೇಕರು ಮಾತನಾಡಿದ್ದಾರೆ. ರಾಜ್ಯಪಾಲರ ಭಾಷಣದ ಮೇಲೆ ಯಾರು ಮಾತನಾಡಿಲ್ಲ. ಆಯವ್ಯಯದ ಮೇಲೆ ಯಾರು ಮಾತನಾಡಿಲ್ಲ ಅವರಿಗೆಲ್ಲ ಮುಂದೆ ಬೇಡಿಕೆಗಳ ಮೇಲೆ ಚರ್ಚೆ ಮಾಡುವಾಗ ಕರೆದು ಅವಕಾಶ ಕೊಡುತ್ತೇನೆ

೫.೩೦ ಪಿ.ಎಂ.

ಯಾರ್ಯಾರು ಎಷ್ಟೆಷ್ಟು ಮಿನಿಟ್ ಮಾತನಾಡಿದ್ದಾರೆಂದು ನನ್ನ ಲಿಸ್ಟಿನಲ್ಲಿದೆ. ಮತ್ತೆ ಅವಕಾಶ ಕೊಡುತ್ತೇನೆ. ಉಮರಬ್ಬನವರ ಭಾಷಣ ಕೇಳಬೇಕು. ಅವರಿಗೆ ಅವಕಾಶ ಮಾಡಿಕೊಡುತ್ತೇನೆ. ಆ ಕಡೆಯವರೂ, ಈ ಕಡೆಯವರೂ ಸಹಕರಿಸಬೇಕು. ರತ್ನಾಕರ್‌ರವರಿಗೂ ಅವಕಾಶ ಮಾಡಿಕೊಡುತ್ತೇನೆ. ಬಜೆಟ್ ಮೇಲೆ ಮಾತನಾಡಿದ್ದರಲ್ಲಿ ಕಾನಡೆಯವರೇ ಕೊನೆಯವರು. ನಾನು ಎದ್ದು ನಿಂತಾಗ ನೀವು ಎದ್ದು ನಿಲ್ಲಬಾರದು ನಿಮಗೆ ಅವಕಾಶ ಮಾಡಿಕೊಡುತ್ತೇವೆ, ಇಲ್ಲಿಗೆ ಈ ಚರ್ಚೆ ಮುಕ್ತಾಯವಾಯಿತು ಇನ್ನು ಮಂತ್ರಿಗಳ ಉತ್ತರ......

ಮನವಿ

ಭಾರತ್ ಬಂದ್ ಬಗ್ಗೆ ಸದನಕ್ಕೆ ರಜಾ ಕೊಡುವ ಬಗ್ಗೆ

† ಶ್ರೀ ಎಂ. ಎಸ್. ಕೃಷ್ಣನ್.— ಅಧ್ಯಕ್ಷರೇ, ನಾಳೆ ದಿವಸ ಈ ಸದನ ನಡೆಯಬೇಕೇ? ಬೇಡವೇ? ಇದು ಮುಖ್ಯವಾದ ಪ್ರಶ್ನೆ ತಾವು ಸಭೆಯನ್ನು ಅಡ್ಜರ್ನ್ ಮಾಡುವಂಥ ಪರಿಸ್ಥಿತಿಯಲ್ಲಿದ್ದೀರಿ. ಅದಕ್ಕಾಗಿ ಹೇಳುತ್ತಿದ್ದೇನೆ, ನಾಳೆ ಭಾರತ ಬಂದ್ ಕಾರ್ಯಕ್ರಮವನ್ನು ೧೨ ವಿರೋಧ ಪಕ್ಷಗಳು ಮತ್ತು ರಾಷ್ಟ್ರೀಯ ಆಂದೋಳನ ಸಮಿತಿ ಟ್ರೇಡ್ ಯೂನಿಯನ್ ಇವರೆಲ್ಲರೂ ಸೇರಿ ಆಚರಿಸುತ್ತಿದ್ದಾರೆ. ಪೆಟ್ರೋಲಿಯಂ, ಕೆರೋಸಿನ್ ಬೆಲೆ ಏರಿಕೆಯ ವಿರುದ್ಧವೂ ನಡೆಯುತ್ತಿದೆ. ಭಾರತ ಬಂದ್‌ಗೆ ಸಂಬಂಧಪಟ್ಟ ಹಾಗೆ ಎಲ್ಲಾ ಶಾಲೆಗಳು ಫ್ಯಾಕ್ಟರಿಗಳು ಇರುವುದಿಲ್ಲ. ಬಸ್ಸುಗಳು ನಾಳೆ ಓಡಾಡುವುದಿಲ್ಲ. ತಮಗೆ ಗೊತ್ತಿರುವ ಹಾಗೆ ಈ ರೀತಿ ಬಂದಾಗುವುದರಿಂದ ಇಂಥ ಒಂದು ಕೆಟ್ಟ ವಾತಾವರಣ ನಾಳೆ ಉಂಟಾಗುತ್ತದೆ, ಈ ವಾತಾವರಣ ನಮ್ಮ ದೇಶದಲ್ಲಿ ನಮ್ಮ ರಾಜ್ಯದಲ್ಲಿ ನಾಳೆ ಉಂಟಾಗುತ್ತದೆ. ಎಲ್ಲಾ ಸರ್ಕಾರಿ ನೌಕರರು ನಾಳೆ ದಿವಸ ಅವರು ಸ್ಟ್ರೈಕ್ ಮಾಡುತ್ತಿದ್ದಾರೆ. ಮುಷ್ಕರ ಹೂಡುತ್ತಿದ್ದಾರೆ, ೩೧೧ ರ ಆರ್ಟಿಕಲ್ ವಿರುದ್ಧವಾಗಿ ಸುಪ್ರೀಂಕೋರ್ಟ್‌ನ ತೀರ್ಮಾನ ಸರಿಯಿಲ್ಲವೆಂದು ಅವರೂ ಕೂಡ ಮುಷ್ಕರ ಹೂಡುತ್ತಿದ್ದಾರೆ. ಇಂಥ ಪ್ರಕ್ಷುಬ್ಧತೆ ದೇಶದಲ್ಲಿ ಏರ್ಪಟ್ಟಿದೆ ರಾಜ್ಯದಲ್ಲಿಯೂ ಸಹ ಕೆಟ್ಟ ಪರಿಸ್ಥಿತಿ ಏರ್ಪಟ್ಟಿದೆ ಈ ವಾತಾವರಣದಲ್ಲಿ ನಾವು ಬರಲಿಕ್ಕೂ ಆಗುವುದಿಲ್ಲ, ಹೋಗುವುದಕ್ಕೂ ಆಗುವುದಿಲ್ಲ. ಪರಿಸ್ಥಿತಿ ಯಾವ ರೀತಿ ಇದೆ ಎನ್ನುವುದು ತಮಗೇ ಗೊತ್ತಿದೆ. ಆದ್ದರಿಂದ ಈ ಸದನವನ್ನು ನಾಳೆ ದಿವಸ ನಡೆಸುವುದಕ್ಕಾಗುವುದಿಲ್ಲ. ಬಂದ್ ಶಾಂತ ರೀತಿಯಿಂದ ನಡೆಯಬೇಕು ಎನ್ನುವುದು ನಮ್ಮ ಅಭಿಪ್ರಾಯ ಸಿ.ಪಿ.ಐ. ಸಿ.ಪಿ.ಎಂ. ಬಿ.ಜೆ.ಪಿ. ಎಲ್ಲಾ ಪಕ್ಷಗಳು ಹೋಗಿ ಶಾಂತಿಯುತವಾಗಿ ಬಂದ್‌ನಲ್ಲಿ ಭಾಗಿಯಾಗಬೇಕೆಂದಿದ್ದೇವೆ. ಬೇರೆ ಗಲಾಟೆ ಗಲಭೆಗಳು ಪ್ರಕ್ಷುಬ್ಧ ವಾತಾವರಣ ನಡೆಯದಂತೆ ನೋಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ನಾಳೆ ದಿವಸ ಸಭೆಯನ್ನು ನಿಲ್ಲಿಸಬೇಕೆಂದು ನನ್ನ ಮನವಿ.

ಶ್ರೀ ಆರ್. ವೆಂಕಟರಾಮಯ್ಯ.— ಅಧ್ಯಕ್ಷರೇ, ನಾಳೆ ದಿವಸ ಇಡೀ ಭಾರತ ಬಂದ್ ಆಗುತ್ತದೆ. ಇಲ್ಲಿ ಅಧಿಕಾರಿಗಳು ಬೇರೆ ಇರುವುದಿಲ್ಲ. ಸರ್ಕಾರಿ ಅಧಿಕಾರಿಗಳು ಸ್ಟ್ರೈಕ್ ಮಾಡುತ್ತಾರೆ. ಸ್ಟಾಫ್ ಸ್ಟ್ರೈಕ್ ಮಾಡುತ್ತಾರೆ. ಇಂಥ ವಾತಾವರಣ ಇರುವುದರಿಂದ ನಾವು ನಮ್ಮ ಕ್ಷೇತ್ರಕ್ಕೆ ಹೋಗಬೇಕು,

ಅಲ್ಲಿ ಲಾ ಅಂಡ್ ಆರ್ಡರನ್ನು ಮೈನ್‌ಟೈನ್ ಮಾಡಬೇಕಾಗುತ್ತದೆ. ಬಂದ್‌ನಲ್ಲಿ ಯಾವುದೇ ಒಂದು ಅಹಿತಕರ ಘಟನೆಗಳು ನಡೆಯದಂತೆ ಮಾಡಬೇಕಾಗುತ್ತದೆ. ದಯಾವಿಟ್ಟು ಎಲ್ಲರೂ ಸಹಕರಿಸಬೇಕು. ಅಲ್ಲಿಯೂ ನಮ್ಮ ಸ್ನೇಹಿತರು ಸಹಕರಿಸಬೇಕು. ನಾಳೆ ದಿವಸ ಈ ಸಭೆಯನ್ನು ನಡೆಸಬಾರದೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ. — ಅಧ್ಯಕ್ಷರೇ, ಭಾರತ ಬಂದ್‌ನ್ನು ಕೇಂದ್ರ ಸರ್ಕಾರ ದಿನ ನಿತ್ಯ ಉಪಯೋಗ ವಸ್ತುಗಳ ಮೇಲೆ ಬೆಲೆ ಏರಿಕೆಯನ್ನು ಏರಿಸಿರುವುದರಿಂದ ಎಲ್ಲಾ ಪಕ್ಷಗಳು ಸೇರಿ ಈ ಬಂದನ್ನು ಕರೆದಿದ್ದಾರೆ. ಶಾಸಕರು ಅಲ್ಲಿದ್ದರೆ ಶಾಂತ ರೀತಿಯಲ್ಲಿ ಬಂದಾಗುತ್ತದೆ. ಆದ್ದರಿಂದ ಈ ಬಂದನ್ನು ಆಚರಿಸಿ ಯಾವುದೇ ಅಶಾಂತಿ ವಾತಾವರಣ ಉಂಟಾಗದಂತೆ ಮಾಡುವುದೇ ಶಾಸಕರ ಕರ್ತವ್ಯ ಎಂದು ಭಾವಿಸಿದ್ದೇನೆ. ಸದನದಲ್ಲಿ ಇದನ್ನು ಚರ್ಚೆ ಮಾಡಬೇಕೆಂದು ಇದನ್ನು ನಿಲುವಳಿ ಸೂಚನೆಯಲ್ಲಿ ಕೊಟ್ಟಿದ್ದೆ. ಆದರೆ ಆ ಸಂದರ್ಭ ಬರಲಿಲ್ಲ. ಈ ಸಂದರ್ಭದಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ ವಿಶೇಷವಾಗಿ ಕಾಂಗ್ರೆಸ್ ಸದಸ್ಯರು ಬೆಲೆ ಏರಿಕೆ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾರೆ. ಎಲ್ಲರೂ ಒಟ್ಟಿಗೆ ಸೇರಿ ಭಾರತ ಬಂದ್ ಆಚರಿಸೋಣ. ಬಂದನ್ನು ಯಶಸ್ವಿಯಾಗಿ ಮಾಡಬೇಕು. ರಾಜ್ಯದ ಎಲ್ಲಾ ಜನತೆಯು ಅಪಾರವಾಗಿ ಬಂದ್‌ನಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಜಿ. ಬೆಲ್ಲದ್ — ಅಧ್ಯಕ್ಷರೇ, ತಮಗೆ ಗೊತ್ತಿದೆ. ಈ ಬೆಲೆ ಏರಿಕೆಯ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಶರ್ತ ಪ್ರಕಾರ ನಿಲುವಳಿ ಸೂಚನೆಯನ್ನು ತಂದಿದ್ದೆ. ಈ ಬೆಲೆ ಏರಿಕೆ ಇಡೀ ದೇಶದ ಜನತೆಯ ಮೇಲೆ ದೊಡ್ಡ ಪರಿಣಾಮವಾಗುತ್ತದೆ, ಬಡತನ ರೇಖೆಯ ಕೆಳಗಿರುವಂತಹವರಿಗೆ ಬಹಳ ಪರಿಣಾಮವಾಗುತ್ತದೆ. ಭಾರತ್ ಬಂದ್ ಎನ್ನುವಂಥ ಘೋಷಣೆ ಮಾಡಿರುವುದರಿಂದ ಎಲ್ಲಾ ಸಂಘಗಳು ಇದರಲ್ಲಿ ಇವತ್ತು ಭಾಗವಹಿಸಿ ಕಾರ್ಯ ಮಾಡುತ್ತಿದ್ದಾರೆ ಇವತ್ತಿನ ದಿವಸ ನಾವುಗಳೂ ಕೂಡ ನಮ್ಮ ನಮ್ಮ ಕ್ಷೇತ್ರಕ್ಕೆ ಹೋಗಿ ಜನತೆಯ ಅಥವಾ ಅಲ್ಲಿ ವಾತಾವರಣವನ್ನು ಶಾಂತತೆಯಿಂದ ಕೂಡಿರುವ ರೀತಿಯಲ್ಲಿ ಜನತೆಯ ಸಂರಕ್ಷಣೆ ಕಾರ್ಯಕ್ಕಾಗಿ ನಾವು ಹೋಗಬೇಕಾಗಿದೆ. ಆದ್ದರಿಂದ ತಾವು ನಾಳೆ ದಿವಸ ಈ ಸಭೆಯನ್ನು ನಿಲ್ಲಿಸಬೇಕೆಂದು ಹೇಳಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ. — ಸನ್ಮಾನ್ಯ ಅಧ್ಯಕ್ಷರೇ, ಈಗ ಈ ಮಾನ್ಯ ಸದಸ್ಯರಾದ ಕೃಷ್ಣನ್ ರವರು ವೆಂಕಟರಾಮಯ್ಯನವರು, ಯಡಿಯೂರಪ್ಪನವರು ಮತ್ತು ಅನೇಕ ಮಾನ್ಯರು ನಾಳೆ ಏನು ಭಾರತ ಬಂದಾಗುತ್ತದೆ ಮತ್ತು ಮುಷ್ಕರ ಇದೆ. ಆದ್ದರಿಂದ ಈ ಸದನದ ಕಾರ್ಯಕಲಾಪಗಳನ್ನು ನಾಳೆ ಮಟ್ಟಿಗೆ ಮುಂದುವರಿಸಬೇಕು ಎಂದು ಒತ್ತಾಯ ಮಾಡಿದ್ದಾರೆ. ಈಗ ತಮಗೆ ಗೊತ್ತಿದೆ. ಈ ಭಾರತ ಬಂದ್ ನಡೆಯುತ್ತಿದೆ , ನನಗೆ ತಿಳಿದ ಪ್ರಕಾರ ಇದು ಕರ್ನಾಟಕ ಸರ್ಕಾರದವರು ಕೊಟ್ಟಂಥ ಕಾಲ್ ಅಂತೂ ಇಲ್ಲ. ಕೆಲವು ಪಕ್ಷಗಳು ಕೊಟ್ಟಿವೆ. ಆದರೆ ಈ ದೇಶದಲ್ಲಿ ಅನೇಕ ಪಕ್ಷಗಳು ಇವೆ. ಅತ್ಯಂತ ದೊಡ್ಡ ಪಕ್ಷ ಲಕ್ಷಾಂತರ ಮಂದಿ ಸದಸ್ಯರುಳ್ಳ ಕಾಂಗ್ರೆಸ್ ಪಕ್ಷವಂತು ಬಂದ್‌ಗೆ ಕಾಲ್ ಕೊಟ್ಟಿಲ್ಲ. ಸಹಕಾರ ಕೂಡ ಮಾಡುತ್ತಿಲ್ಲ. ಆದ್ದರಿಂದ ಈ ಬಂದ್ ಮತ್ತು ಸಹಕಾರ ಈ ವಿಷಯ ರಾಜಕೀಯವಾಗಿ ಜನ ಮಾತನಾಡಬೇಕು. ಇದರ ಬಗ್ಗೆ ಹೊರಗಡೆ ನಾವೂ ನೀವೂ ಮಾತನಾಡುತ್ತೇವೆ. ಆದರೆ ಈ ಸದನಕ್ಕೆ ಸೀಮಿತವಾಗಿ ತಮಗೆ ಹೇಳಬೇಕಾದರೆ ನಾಳೆ ನಾವು ಸದನದ ಕಾರ್ಯಕಲಾಪಗಳನ್ನು ನಿಲ್ಲಿಸ ತಕ್ಕಂಥದ್ದು ಅಕ್ರಮವಾಗುತ್ತದೆ. ಬಹಳ ಕೆಟ್ಟ ಪರಂಪರೆಯನ್ನು ನಾವು ಅನುಸರಿಸಿದಂತೆ ಆಗುತ್ತದೆ. ಏಕೆಂದರೆ ನಾವು ಈ ಕರ್ನಾಟಕದ ಪರಂಪರೆಯನ್ನು ನೋಡಿ. ದೇಶದ ಬೇರೆ ಯಾವುದೇ ಪರಂಪರೆಯನ್ನು ನೋಡಿ, ಒಂದು ಬಂದನ್ನು ಆಚರಿಸುತ್ತಿದ್ದರೆ ಅಥವಾ ಮುಷ್ಕರ ಮಾಡುತ್ತಿದ್ದರೆ ಎಲ್ಲಿಯೂ ಕೂಡ ಸದನವನ್ನು ನಿಲ್ಲಿಸತಕ್ಕಂಥದ್ದು ನನ್ನ ಅನುಭವಕ್ಕೆ ಬಂದಿಲ್ಲ, ಇತಿಹಾಸದಲ್ಲಿ ನೋಡಿಲ್ಲ. ನನ್ನ ಅನುಭವದಲ್ಲಿಯಂತೂ ನೋಡಿಯೇ ಇಲ್ಲ. ಸಮಕಾಲೀನದ ಅನುಭವದಲ್ಲಿಯೂ ಕೂಡ ಆಗಿಲ್ಲ. ಅಲ್ಲಿಯ ಹಿರಿಯ ಸದಸ್ಯರಿದ್ದೀರಿ, ಸನ್ಮಾನ್ಯ ವಿರೋಧ ಪಕ್ಷಗಳಲ್ಲಿ ಕೆಲಸ ಮಾಡುವಂಥ ಮಾನ್ಯರು ಇದ್ದಾರೆ. ಮುಷ್ಕರ ಮಾಡುವುದಕ್ಕೆ ಅನೇಕ ಸಂಘ ಸಂಸ್ಥೆಗಳು ಇವೆ. ಕೆಲವರು ಮುಷ್ಕರಕ್ಕೆ ಕಾಲ್ ಕೊಡುತ್ತಾರೆ, ಅದರಲ್ಲಿ ಎಂಪ್ಲಾಯೀಸ್ ಯೂನಿಯನ್‌ಗಳು ಇವೆ. ಅದರಲ್ಲಿ ಅನೇಕ ವಿಭಾಗಗಳು ಇವೆ. ಅವರಲ್ಲಿ ಕೆಲವರು ಮುಷ್ಕರಕ್ಕೆ ಕಾಲ್ ಕೊಡುವುದಿಲ್ಲ. ಕೆಲವು ಲಾಯಲ್ ಪೀಪಲ್ ಅವರು ಕೆಲಸಕ್ಕೆ ಹಾಜರಾಗಬೇಕಾಗುತ್ತದೆ. ಕರ್ತವ್ಯ ಇದೆ ಎಂದು ಕೆಲಸಕ್ಕೆ ಹಾಜರಾಗಬೇಕಾದರೆ ತಾವು ಕಛೇರಿಯನ್ನು ಬಂದ್ ಮಾಡಿದರೆ ವಿಧಾನಸಭೆಯಲ್ಲಿ ಸಂವಿಧಾನಾತ್ಮಕವಾದ ಕೆಲಸ ಮಾಡಬೇಕಾದಂಥ

ವಿಧಾನಸಭೆಯನ್ನು ತಾವು ಕ್ಲೋಸ್ ಮಾಡಬಾರದು. ರಾಷ್ಟ್ರೀಯ ಪ್ರಜ್ಞೆ ಇಟ್ಟುಕೊಂಡು ಕರ್ತವ್ಯವನ್ನು ನಿರ್ವಹಿಸಬೇಕು ಎಂದು ಬಂದರೆ ತಾವು ಉತ್ತರ ಕೊಡಲಿಕ್ಕೆ ತಮಗೆ ಏನು ಸಾಧ್ಯತೆ ಇದೆ. ಕಾರ್ಯಾಂಗ ಒಂದು ಜುಡಿಷಿಯಲ್ ಕೋರ್ಟ್. ಬಂದ್ ಅಥವಾ ಮುಷ್ಕರಕ್ಕೆ ಕಾಲ್ ಕೊಟ್ಟರೂ ಕೂಡ ಕೋರ್ಟ್‌ಗಳಿಗೆ ಬಂದರೆ ಯಾವುದೇ ರೀತಿಯ ಕೋರ್ಟನ್ನು ಬಾಗಿಲು ಮುಚ್ಚತಕ್ಕಂಥದ್ದು ಎಲ್ಲೂ ನೋಡುವುದಿಲ್ಲ. ಅಫಿಸಿಯಲ್ ನಾವು ರಜಾ ಘೋಷಣೆ ಮಾಡಿ ಕಾರ್ಯಕಲಾಪಗಳನ್ನು ನಿಲ್ಲಿಸಿ ಎಂದು ಮುಖ್ಯ ನ್ಯಾಯಾಧೀಶರು ಎಂದು ಹೇಳುವುದಿಲ್ಲ ಎಲ್ಲಿಯೂ ಕೂಡ ನೋಡುವುದಿಲ್ಲ. ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ ಈ ರೀತಿ ಅಂಗಗಳು ಇವೆ. ಇವುಗಳಲ್ಲಿ ಒಂದಕ್ಕೊಂದು ಮಿಕ್ಸ್ ಅಪ್ ಮಾಡಬಾರದು. ಕಾರ್ಯಾಂಗದಲ್ಲಿ ಅಸ್ಥಿರತೆ ಆಗಿದ್ದಲ್ಲಿ ಶಾಸಕಾಂಗ, ಕಾರ್ಯಾಂಗದ ಬೆನ್ನ ಹಿಂದೆ ಹೋಗತಕ್ಕಂಥ ಕೆಲಸ ಮಾಡುವಂಥದನ್ನು ಇವತ್ತು ಮಾಡಿದರೆ ಒಂದು ಪರಂಪರೆ ಬೆಳೆಯುತ್ತದೆ. ಈ ನಿರ್ಣಯವನ್ನು ಎಂಪ್ಲಾಯಿಸ್ ಅಸೋಸಿಯೇಷನ್ ಅಥವಾ ರಾಜ್ಯದಲ್ಲಿರತಕ್ಕಂಥ ಎಂಪ್ಲಾಯಿಸ್ ಅಸೋಸಿಯೇಷನ್ ಅವರು ಒಂದು ಬಂದ್‌ಗೆ ಕಾಲ್ ಕೊಡುತ್ತಾರೆ. ಇನ್ನೊಂದು ಅಸೋಸಿಯೇಷನ್ ರವರು ಬಂದ್‌ಗೆ ಕಾಲ್ ಕೊಟ್ಟರೆ ಸದನದ ಕಾರ್ಯಕಲಾಪ ಮುಚ್ಚಬೇಕಾಗುತ್ತದೆ. ಪರಂಪರೆ ಇವತ್ತು ನಾವು ಮಾಡಿದರೆ ಇದು ಹೋಗತಕ್ಕಂಥ ಪರಂಪರೆಯಲ್ಲ. ನಾಳೆ ಇದೇ ಪರಂಪರೆಯನ್ನು ಅನುಸರಿಸಬೇಕಾಗುತ್ತದೆ. ಕರ್ನಾಟಕದ ಬಂದ್ ಒಂದು ಕಾಲ್ ಕೊಡುತ್ತಾರೆ. ಭಾರತ ಬಂದ್‌ಗೆ ಕಾಲ್ ಕೊಡುತ್ತಾರೆ. ಕಾರ್ಯಕಲಾಪಗಳನ್ನು ನಿಲ್ಲಿಸಿ ನಾಳೆ ನಾವು ಏನೋ ತೊಂದರೆಯಾಗುತ್ತದೆ. ಭಯಪ್ರದವಾದಂತಹ ಪರಿಸ್ಥಿತಿ ಇದೆ ಎಂದು ತಿಳಿದು ಬಂದ್‌ಗೆ ಅವಕಾಶ ಕೊಡಬಾರದು. ಮತ್ತೆ ಯಾರೂ ಈ ತರಹ ಕಾರ್ಯಕ್ರಮಗಳಿಗೆ ಸಹಕಾರ ಕೊಡುವುದಿಲ್ಲ. ಅಥವಾ ಕಾರ್ಯಕ್ರಮಕ್ಕೆ ಸಹಕಾರ ಕೊಟ್ಟಿದ್ದೇ ಆದರೆ ರಾಷ್ಟ್ರೀಯ ಆಂದೋಳನದಲ್ಲಿ ನಮ್ಮ ಕರ್ತವ್ಯ ಮಾಡಬಹುದು. ಕೆಲಸಕ್ಕೆ ಹಾಜರಾಗಬೇಕು ಎಂದು ಬಂದಾಗ ತಡೆ ಹಿಡಿಯತಕ್ಕಂಥದ್ದು ಅಕ್ರಮವಾಗುತ್ತದೆ. ಅನ್ಯಾಯವಾಗುತ್ತದೆ. ಇಲ್ಲೀಗಲ್ ಆಗುತ್ತದೆ.

ಅದಕ್ಕೆ ಸಂವಿಧಾನದ ಬೆಂಬಲ ಇರುವುದಿಲ್ಲ. ಯಾವುದಕ್ಕೆ ಸಂವಿಧಾನದ ಬೆಂಬಲ್ಲ ಇರುವುದಿಲ್ಲ. ಕಾನೂನಿನ ಬೆಂಬಲ ಇರುವುದಿಲ್ಲ. ಆದುದರಿಂದ ಅದಕ್ಕೆ ಶಾಸಕಾಂಗ ಮನ್ನಣೆ ಕೊಡುವುದಕ್ಕಾಗುವುದಿಲ್ಲ. ಇದು ಮೂಲಭೂತವಾದ ಪ್ರಶ್ನೆ. ಆದ್ದರಿಂದ ಅದಕ್ಕೆ ರಜಾ ಘೋಷಣೆ ಮಾಡುವುದಕ್ಕಾಗುವುದಿಲ್ಲ. ನಾಳೆ ಸಭೆ ಸೇರುವುದಿಲ್ಲ. ನಾಡಿದ್ದು ಸೇರುತ್ತದೆ ಎಂದು ಘೋಷಣೆ ಮಾಡಿದರೆ ಏನು ಪರಿಣಾಮವಾಗುತ್ತದೆ? ಸಂವಿಧಾನದ ಪ್ರಕಾರ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಆ ರೀತಿ ಮಾಡಿದರೆ that means ths House will be encouraging bundhs. Bundh is bundh and strike is strike we will be legalising it. Let the Hon. Minister here stand up and say about it. ಕಾನೂನು ಪ್ರಕಾರ ಸರ್ಕಾರ ಘೋಷಣೆ ಮಾಡುತ್ತದೆಯೋ? ದೇವೇಗೌಡರು ಹೇಳಲಿ. ನಮ್ಮ ಸರ್ಕಾರ ನಾಳೆ ಮುಷ್ಕರಕ್ಕೆ ಬಂದ್‌ಗೆ ಬೆಂಬಲ ಕೊಡುತ್ತದೆ ಆದ್ದರಿಂದ ರಜಾ ಘೋಷಣೆ ಮಾಡುತ್ತದೆ. ಎಂದು ಕಾರ್ಯಾಂಗ ಹೇಳಲಿ ತಾವು ಆಲೋಚನೆ ಮಾಡಿ. ಅವರು ಹೇಳದೇ ತಾವು (ಅಧ್ಯಕ್ಷರಿಗೆ) ಏತಕ್ಕೆ ಹೇಳಬೇಕು? ದೇವೇಗೌಡರು...

ಅಧ್ಯಕ್ಷರು.— ಎಲ್ಲರನ್ನೂ ಕೇಳಿ ಆ ಮೇಲೆ ಹೇಳುತ್ತೇನೆ.

SRI M. VEERAPPA MOILY.— Let Mr. Deve Gowda stand up and say that the Governmenrt has declared holiday in view of the Bundh and strike. I will appreciate it. Holiday ಎಂದು ಡಿಕ್ಲೇರ್ ಮಾಡಲಿ ದೇವೇಗೌಡರು ಕಾರ್ಯಾಂಗವೇ ಮಾಡುವುದಕ್ಕೆ ತಯಾರಿಲ್ಲ. ತಾವೇಕೆ ಮಾಡುತ್ತೀರಿ?

ಅಧ್ಯಕ್ಷರು.— ಇನ್ನೂ ಮಾಡುವುದಕ್ಕೆ ಹೊರಟಿಲ್ಲ. ನಿಮ್ಮ ಅಭಿಪ್ರಾಯ ತೆಗೆದುಕೊಂಡು ಆಮೇಲೆ ಹೇಳುತ್ತೇನೆ. ಇನ್ನೂ ಯಾವ ತೀರ್ಮಾನಕ್ಕೂ ಬಂದಿಲ್ಲ.

SRI M. VEEAPPA MOILY.— When the executive itself is not prepared to declare holiday, why you want to .. ? If there is crisis of

confidence in the Government we can appriciate it. ಒಂದು ವೇಳೆ ಬಂದ್ ಆದಾಗ ಸಂರಕ್ಷಣೆ ಮಾಡುವುದಕ್ಕೆ ಶಕ್ತಿ ಇಲ್ಲ ಎಂದು ಸರ್ಕಾರ ಹೇಳಲಿ. ಆ ಕೆಲಸ ಮಾಡುವುದಿಲ್ಲ ಎಂದು ಕಾಣುತ್ತದೆ. ಏಕೆಂದರೆ ಸರ್ಕಾರ ನಡೆಸಬೇಕು. ಒಂದು ನಿವಿಷವಾದರೂ ಸರ್ಕಾರದ ಕಾರ್ಯಕ್ರಮ ನಿರ್ವಹಣೆ ಮಾಡುವುದಕ್ಕಾಗುವುದಿಲ್ಲ ಎಂದು ಅಸಹಾಯಕತೆಯನ್ನು ದೇವೇಗೌಡರು ಪ್ರದರ್ಶನ ಮಾಡಿದರೆ ಆ ಮಾತು ಬೇರೆ ಬಂದ್ ಇದ್ದುದರಿಂದ ಮುಷ್ಕರ ಇದ್ದುದರಿಂದ ಕಾನೂನು ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಏನಾದರೂ ಹೇಳಿದರೆ ಭಯ ಇದ್ದರೆ ದೇವೇಗೌಡರು ಹೇಳಲಿ. ಆಗ ಪಾಪ ಬಹಳ ಕಷ್ಟದಲ್ಲಿದ್ದಾರೆ ಸರ್ಕಾರದವರು ಕಾನೂನು ನಿರ್ವಹಣೆ ಮಾಡುವುದಕ್ಕಾಗುವುದಿಲ್ಲ? ಬಂದ್‌ಗೆ ಹೆದರಿಬಿಟ್ಟಿದ್ದಾರೆ ಎಂದು ಹೇಳಬಹುದು ಆ ರೀತಿ ಹೇಳಿದರೆ ಆ ಸಂಗತಿ ಬೇರೆ. ಅಧ್ಯಕ್ಷರೇ, ಕಾರ್ಯಾಂಗ ಆ ರೀತಿ ಘೋಷಣೆ ಮಾಡುವುದಕ್ಕೆ ತಯಾರಿಲ್ಲ. ನ್ಯಾಯಾಂಗ ಮಾಡುವುದಕ್ಕೆ ತಯಾರಿಲ್ಲ. ಶಾಸಕಾಂಗ ಎಲ್ಲಕ್ಕಿಂತ ಉನ್ನತವಾದುದು We should not set a pace we should not put a precedent. ತಾವು ರಜಾ ಘೋಷಣೆ ಮಾಡಿದರೆ, ಆ ಪರಂಪರೆಯನ್ನು ತಾವೇ ಹಾಕುವುದಕ್ಕೆ ಹೋದರೆ ನಾವಂತೂ ನಮ್ಮ ಪಕ್ಷ ಒಪ್ಪುವುದಕ್ಕೆ ತಯಾರಿಲ್ಲ. ಅಂಥ ಕೆಟ್ಟ ಪರಂಪರೆಯನ್ನು ಈ ಸದನದಲ್ಲಿ ಹಾಕಿದರೆ ಅದನ್ನು ಒಪ್ಪಲು ನಮ್ಮ ಪಕ್ಷ ಸಿದ್ಧವಿಲ್ಲ. ಈ ಸದನ ಕೂಡ ಅದಕ್ಕೆ ಒಪ್ಪಿಗೆ ಕೊಡಬಾರದು. ಎಂದು ಅನೇಕ ಹಿರಿಯ ಸದಸ್ಯರ ಹತ್ತಿರ ಮತ್ತು ದೇವೇಗೌಡರಂಥ ಹಿರಿಯರ ಹತ್ತಿರ ವಿನಂತಿಮಾಡಿಕೊಳ್ಳುತ್ತೇನೆ. ಇಂಥ ಅಕ್ರಮವಾದ ಬಂದ್ ಮತ್ತು ಮುಷ್ಕರದ ಬೆದರಿಕೆಗೆ ಹೆದರಿ ಸದನದ ಕಾರ್ಯಕಲಾಪವನ್ನು ನಿಲ್ಲಿಸತಕ್ಕ ಅಥವಾ ರಜೆ ಘೋಷಣೆ ಮಾಡತಕ್ಕ ಕೆಲಸಕ್ಕೆ ತಾವು ಕೂಡ ಬೆಂಬಲ ಕೊಡುವುದಕ್ಕೆ ಹೋಗಬೇಡಿ. Let us stand by certain conventions which have been laid upon by our Constitutional fathers and also by all people. Let him say where any such holidays have been declered or where such activities of legislature is closed. ಯಾರು ಹಿಂದೆ ಆ ರೀತಿ ಮಾಡಿದ್ದಾರೆ? ಒಂದು ರೆಕಾರ್ಡ್ ಇದ್ದರೆ ತೋರಿಸಿ. ನಾನೇನು ನೆನೆಸಿಕೊಂಡೆ ಎಂದರೆ ತಮ್ಮ ಕಚೇರಿಯಿಂದ (ಅಧ್ಯಕ್ಷರ ಕಚೇರಿಯಿಂದ) ಸುತ್ತೋಲೆ ಹೋಗಿರಬಹುದು ಎಂದು ಅಂದುಕೊಂಡಿದ್ದೆ. ರಾಚಯ್ಯನವರಿಗೆ ಸುತ್ತೋಲೆ ಹೋಗಿರಬೇಕು. ನಾಳೆ ಸದನಕ್ಕೆ ಹಾಜರಾಗಿ ಕಾರ್ಯಕ್ರಮವೆಲ್ಲಾ ಬಹಳ ಸುಸೂತ್ರವಾಗಿ ಸಾವಧಾನವಾಗಿ ಆಗುವ ಹಾಗೆ ಎಲ್ಲರಿಗೂ ರಕ್ಷಣೆ ಕೊಡಬೇಕೆಂದು ತಮ್ಮ ಕಚೇರಿಯಿಂದ ಈಗಾಗಲೇ ಸುತ್ತೋಲೆ ಹೋಗಿರಬೇಕು ಎಂದುಕೊಂಡಿದ್ದೆ ಈಗಾಗಲೇ ಹೋಗಬೇಕಾಗಿತ್ತು ಒಂದು ವೇಳೆ ಕಳುಹಿಸದೇ ಇದ್ದರೆ ದಯಮಾಡಿ ಕಳುಹಿಸಿ ಕ್ರಮಬದ್ಧವಾಗಿ, ಕಾನೂನು ಪ್ರಕಾರವಾಗಿ, ಸಂವಿಧಾನಾತ್ಮಕವಾಗಿ ಶಾಸಕಾಂಗದ ಕೆಲಸ ಸತತವಾಗಿ ಮುಂದುವರೆಸಿಕೊಂಡು ಹೋಗತಕ್ಕ ಒಂದು ಒಳ್ಳೆಯ ಪರಂಪರೆಯನ್ನು ಕಾಪಾಡಿಕೊಂಡು ಹೋಗಬೇಕೆಂದು ನಮ್ಮ ಪಕ್ಷದ ಪರವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.— ಮಾನ್ಯ ಅಧ್ಯಕ್ಷರೇ, ಆ ದೇಶದಲ್ಲಿ ಇರತಕ್ಕ ಎಲ್ಲ ವಿರೋಧ ಪಕ್ಷಗಳು...

ಶ್ರೀ ಎಂ. ಎಸ್. ಕೃಷ್ಣನ್.— ಸರ್ಕಾರದವರು ಹೇಳುವುದಕ್ಕೆ ಮುಂಚೆ ಒಂದು ವಿಷಯ ಹೇಳುತ್ತೇನೆ.

ಶ್ರೀ ಎಚ್. ಡಿ ದೇವೇಗೌಡ.— ನಾನು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ನಾನು ಒಂದೆರಡು ಮಾತು ಆಡುತ್ತೇನೆ. ಮಾನ್ಯ ಅಧ್ಯಕ್ಷರೇ, ಈಗ ಎರಡು ವಿಷಯಗಳ ಮೇಲೆ ಮಾತನಾಡುತ್ತಿದ್ದಾರೆ ಒಂದನೆಯದು ಬಂದ್ ವಿಷಯ. ಸಾರ್ವಜನಿಕ ಕುಂದು ಕೊರತೆಗಳ ಪರಿಹಾರಕ್ಕಾಗಿ ಕೆಲವು ಪಕ್ಷಗಳು ಬಂದ್ ಮಾಡಲು ಮುಂದೆ ಬಂದಿವೆ. ಸರ್ಕಾರದವರು ಬೆಲೆ ಏರಿಸಿದರು. ಅದಕ್ಕೋಸ್ಕರ ನಾವು ವಿರೋಧ ಮಾಡಬೇಕು ಎಂದು ಮಾಡುತ್ತಿದ್ದಾರೆ. ಲೆಜಿಸ್ಲೇಚರ್‌ನಲ್ಲಿ ಸರ್ಕಾರದವರು ಯಾರೂ ಆ ಬಗ್ಗೆ ಘೋಷಣೆ ಮಾಡಿಲ್ಲ. ಮಾಡುತ್ತಾರೋ ಏನೋ ಗೊತ್ತಿಲ್ಲ. ಒಂದು ವಿಷಯ ಹೇಳುತ್ತಿದ್ದೇನೆ. ಪ್ರಜಾಪ್ರಭುತ್ವಕ್ಕೆ ದೊಡ್ಡ ಕೊಡಲಿಪೆಟ್ಟು ಬೀಳಕ್ಕ ಪ್ರಶ್ನೆ ಏನು ಬರುತ್ತದೆಂದರೆ ಸಾರ್ವಜನಿಕರ ಕುಂದುಕೊರತೆಗಳನ್ನು ಕಾರ್ಯಾಂಗ ಏನಿದೆ ಅದು ನೇರವಾಗಿ ಬೀದಿಯಲ್ಲಿ ಕುಳಿತುಕೊಂಡು ತೀರ್ಮಾನಿ ಮಾಡತಕ್ಕ ಪ್ರವೃತ್ತಿ

ಏನು ನಡೆದುಕೊಂಡು ಬಂದಿದೆ ಅದನ್ನು ನಾವು ಕೊನೆ ಮಾಡಬೇಕು. ಕಾರ್ಯಾಂಗ ಇದೆ, ಸರ್ಕಾರ ಇದೆ ಶಾಸಕಾಂಗ ಇದೆ. ಶಾಸಕಾಂಗದಲ್ಲಿ ನಾವೆಲ್ಲಾ ಸಾರ್ವಜನಿಕರ ಪ್ರತಿನಿಧಿಗಳು ಇದ್ದೇವೆ, ನಮ್ಮ ಅಭಿಪ್ರಾಯ ಪ್ರಾಮುಖ್ಯವಾದು, ನಮ್ಮ ಅಭಿಪ್ರಾಯದಿಂದ ಸರ್ಕಾರ ನಡೆಯತಕ್ಕದು ನಮ್ಮ ಅಭಿಪ್ರಾಯದಿಂದ ಶಾಸನ ಮಾಡತಕ್ಕದ್ದು.

ಶ್ರೀ ಕೆ. ವೆಂಕಟರಾಮಯ್ಯ.— ಶ್ರೀಮತಿ ಇಂದಿರಾಗಾಂಧಿಯವರು...

ಶ್ರೀ ಬಿ. ಬಸವಲಿಂಗಪ್ಪ.— ನಾನು ಈಲ್ಡ್ ಆಗಿಲ್ಲ. ನಮ್ಮ ಅಭಿಪ್ರಾಯ ಏನಿದೆ ಅದನ್ನು ಬೀದಿಗೆ ತೆಗೆದುಕೊಂಡು ಹೋಗಬಾರದು. ಕೆಲವು ವಿರೋಧ ಪಕ್ಷಗಳು ಇವೆ. ಕಮ್ಯೂನಿಸ್ಟ್ ಪಕ್ಷದವರು ಇದ್ದಾರೆ. ಬಿ.ಜೆ.ಪಿ. ಯಾವರಿದ್ದಾರೆ ಅವರು ಮಾಡಲಿ. ನಮ್ಮ ಅಭ್ಯಂತರ ಇಲ್ಲ. ಅವರ ಧ್ಯೇಯ ಧೋರಣೆಗಳು, ಉದ್ದೇಶಗಳು ಬೇರೆ ಅವರ ಶಕ್ತ್ಯಾನುಸಾರ ಬಂದ್, ಸತ್ಯಾಗ್ರಹ ಮಾಡಲಿ. ಬೀದಿ ಬೀದಿಯಲ್ಲಿ ಮೆರವಣಿಗೆ ಮಾಡಲಿ. ನಮ್ಮ ಅಭ್ಯಂತರ ಇಲ್ಲ. ಆದರೆ ಕಾರ್ಯಾಂಗ, ಶಾಸಕಾಂಗ ಬಯಲಿಗೆ ಹೋಗಿ ಕುಂದುಕೊರತೆಗಳನ್ನು ರಸ್ತೆಯಲ್ಲಿ ತೀರ್ಮಾನ ಮಾಡತಕ್ಕದ್ದು. ಸರಿಯೋ ತಪ್ಪೋ ಎಂಬುದನ್ನು ಯೋಚನೆ ಮಾಡಬೇಕು. ನನ್ನ ದೃಷ್ಟಿಯಲ್ಲಿ ಅದು ಸರಿಯಲ್ಲ. ನಾಲ್ಕೈದು ವರ್ಷದಿಂದ ಕರ್ನಾಟಕ ರಾಜ್ಯದಲ್ಲಿ ಏನಾಗಿದೆ? ರೈತರ ಕುಂದುಕೊರತೆಗಳನ್ನಾಗಲೀ ಉಪಾಧ್ಯಾಯರ ಕಾರ್ಮಿಕರ ಅಥವಾ ನೌಕರರ ಕುಂದುಕೊರತೆಗಳನ್ನಾಗಲೀ ಬಯಲಿನಲ್ಲಿ ನಿಂತು ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಈ ಸಭೆಯನ್ನು ನಿರ್ಲಕ್ಷ್ಯ ಮಾಡಿದ್ದಾರೆ. ಆದ್ದರಿಂದ ನಾವು ಒಂದು ಒಳ್ಳೆಯ ಪರಂಪರೆಯನ್ನು ಹಾಕಿಕೊಂಡು ಹೋಗಬೇಕು. ಯಾರೋ ಏನೋ ಹೇಳುತ್ತಾರೆ. ಬಯಲಿನಲ್ಲಿ ಏನೋ ಶಬ್ದ ಬರುತ್ತದೆ ಕರಡಿ ಕೂಗುತ್ತದೆ. ಎಂದು ನಮ್ಮ ನಡೆಯನ್ನು ಬೇರೆ ಕಡೆ ತಿರುಗಿಸಬಾರದು ನಮ್ಮ ನಡೆ ನೇರವಾಗಿ ಇರಬೇಕು. ಕಾರ್ಯಾಂಗದ ನಡೆ, ಶಾಸಕಾಂಗದ ನಡೆ ನೇರವಾಗಿ ಹೋಗಬೇಕು. ಆದ್ದರಿಂದ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ವಿರೋಧ ಪಕ್ಷಗಳಿಗೆಅವರ ಭಾವನೆಗಳಿಗೆ ಮನ್ನಣೆ ಕೊಡುವುದಕ್ಕೆ ನನ್ನ ಅಭ್ಯಂತರಇಲ್ಲ. ಅವರು ಬೇಕಾದ್ದು ಮಾಡಲಿ, ಆದರೆ ಸದನವಾಗಲೀ, ಸರ್ಕಾರವಾಗಲೀ ಬಂದ್‌ಗೆ ಬೆಂಬಲ ನೀಡುವುದು ಸರಿಯಲ್ಲ. ಇಷ್ಟು ಹೇಳುತ್ತಿದ್ದೇನೆ. ಎರಡನೇ ವಿಚಾರ ಏನೆಂದರೆ ಎರಡು ಸಾರಿಅಡ್ಜರ್ನ್‌ಮೆಂಟ್ ಮೋಷನ್ ಬಂದಿವೆ. ಸುಮಾರು ಆರೇಳು ಗಂಟೆಗಳ ಕಾಲಹರಣ ಮಾಡಿದ್ದೇವೆ.ಹಲವಾರು ಜನ ಮಾತನಾಡಿದ್ದಾರೆ. ನಾನೇನೂ ಮಾತನಾಡಲಿಲ್ಲ. ಬಜೆಟ್ ಮೇಲೆ ನಾನು ಮಾತನಾಡಲಿಲ್ಲ. ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.— ಈಗ ಚರ್ಚೆ ಮುಕ್ತಾಯವಾಗಿದೆ ಎಂದು ಹೇಳಿದ್ದೇನೆ. ಮುಂದೆ ಯಾವುದಾದರೂ ಡಿಮ್ಯಾಂಡ್ ಬಂದಾಗ ಮೊದಲು ನಿಮಗೆ ಛಾನ್ಸ್ ಕೊಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ನಾವು ಇಲ್ಲಿ ಏನು ಮಾತನಾಡುತ್ತೇವೆ ಅದನ್ನು ಅವರು ಕಿವಿ ಮೇಲೆ ಹಾಕಿಕೊಂಡು ಅದರಂತೆ ನಡೆಯುತ್ತಾರೆ ಎಂಬ ನಿರೀಕ್ಷಣೆ ನನಗಿಲ್ಲ. ನಮ್ಮ ಕರ್ತವ್ಯವನ್ನು ನಾವು ಮಾಡುತ್ತಿದ್ದೇವೆ. ಹೊರಗಿನ ಜನರ ಅಭಿಪ್ರಾಯವನ್ನು ಬದಲಾವಣೆ ಮಾಡುವುದಕ್ಕೆ ನಮ್ಮ ಪ್ರಯತ್ನ ಮಾಡುತ್ತೇವೆ. ನಾವು ಹೇಳಿದ ಹಾಗೆ ಅವರು (ಸರ್ಕಾರದವರು) ನಡೆಯುತ್ತಾರೆಂದು ತಿಳಿದುಕೊಂಡಿಲ್ಲ. ಬಜೆಟ್ ಮೇಲೆ...

ಅಧ್ಯಕ್ಷರು.— ಬಜೆಟ್ ಮೇಲೆ ಉತ್ತರ ಅಷ್ಟೆ. ಅದು ನಾಳೆಯೋ ನಾಡಿದ್ದೋ ಎಂಬ ವಿಚಾರ ಹೇಳುತ್ತೇನೆ, ನೀವು ಮಾತನಾಡಿ.

ಶ್ರೀ ಬಿ. ಬಸವಲಿಂಗಪ್ಪ. ನೀವು ಇನ್ನೂ ಒಂದು ದಿವಸ ಮುಂದುವರೆಸಿದರೆ...

ಅಧ್ಯಕ್ಷರು.— ನಾನು ರೂಲಿಂಗ್ ಕೊಟ್ಟಿದ್ದೇನೆ. ಚರ್ಚೆ ಮುಕ್ತಾಯವಾಗಿದೆ, ಉತ್ತರ ನಾಳೆಯೋ ನಾಡಿದ್ದೋ ಎಂಬುದನ್ನು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ನೀವು ಆಗುವುದಿಲ್ಲ ಎಂದು ಹಠ ಹಿಡಿದರೆ ಅದಕ್ಕೆ ತಲೆಬಾಗುತ್ತೇವೆ, ರೂಲಿಂಗ್‌ಗೆ ತಲೆ ಬಾಗುತ್ತೇವೆ.

ಅಧ್ಯಕ್ಷರು.— ಬೇರೆ ವಿಷಯ ಹೇಳಿ.

ಶ್ರೀ ಬಿ. ಬಸವಲಿಂಗಪ್ಪ.—ನೀವು ಏತಕ್ಕೆ ಮಾತನಾಡುತ್ತೀರೋ ಅರ್ಥವಾಗುವುದಿಲ್ಲ. Speaker should not speak. He should here. If you go on talking we cannot talk.

ಅಧ್ಯಕ್ಷರು.—ಅದು ಹಿಂದಿನ ಕಾಲದಲ್ಲಿತ್ತು, ಸ್ಪೀಕರ್ ರೂಲಿಂಗ್ ಕೊಟ್ಟಮೇಲೆ ಯಾವ ಸದಸ್ಯರೂ ತಲೆ ಹಾಕಬಾರದು. ಹದ್ದು ಮೀರಿ ಮಾತನಾಡುತ್ತೇವೆಂದರೆ ಹೇಗೆ ?

ಶ್ರೀ ಬಿ. ಬಸವಲಿಂಗಪ್ಪ.—ನಾನು ನಿಮ್ಮ ಮಾತಿಗೆ ಮನ್ನಣೆ ಕೊಡುತ್ತೇನೆ ಎಂದು ಹೇಳಿದೆ. ಆ ವಿಷಯ ಬೇರೆ. ಈಗ ಸದನವನ್ನು ನಾಳೆ ಮುಂದೂಡುವ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಯಾವ ಕಾರಣಕ್ಕೂ ಸದನವನ್ನು ಮುಂದಕ್ಕೆ ಹಾಕಬಾರದು. ಈ ಬಗ್ಗೆ ಸರ್ಕಾರದ ಪರವಾಗಿ ಮಾನ್ಯ ದೇವೇಗೌಡರು ಮಾತನಾಡುವವರಿದ್ದಾರೆ. ಈ ಬಗ್ಗೆ ಒಂದು ಸತ್ಸಂಪ್ರದಾಯವನ್ನು ನಾವು ಹಾಕಿ ಕೊಂಡು ಹೋಗಬೇಕು.

ಶ್ರೀ ಎಚ್. ಟಿ. ಕೃಷ್ಣಪ್ಪ.—ಅಧ್ಯಕ್ಷರೇ, ಮಾನ್ಯ ಮೊಯ್ಲಿಯವರು ಹಾಗೂ ಮಾನ್ಯ ಬಸವಲಿಂಗಪ್ಪನವರು ಮಾಡಿದ ವಾದ ಸರಣಿಯಲ್ಲಿ ಒಂದು ಎಳೆಯನ್ನು ಮಾತ್ರ ತೆಗೆದುಕೊಂಡು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಕಾರ್ಯಾಂಗ ಮತ್ತು ನ್ಯಾಯಾಂಗಗಳಿಗಿಂತಲೂ ಸಾರ್ವಭೌಮತ್ವ ಹೊಂದಿರತಕ್ಕದ್ದು ಶಾಸಕಾಂಗ ಎಂದು ಮಾನ್ಯ ಮೊಯ್ಲಿಯವರು ಹೇಳಿದರು. ಹಾಗು ಸಾರ್ವಭೌಮತ್ವ ಹೊಂದಿರತಕ್ಕ ಶಾಸಕಾಂಗ ಯಾವ ಸಂದರ್ಭದಲ್ಲಿ ಯಾವ ರೀತಿ ನಡೆದುಕೊಳ್ಳಬೇಕೆನ್ನುವ ಬಗ್ಗೆ ಉಪದೇಶ ಮಾಡಿದರು. ಹಿಂದೆ ಯಾವತ್ತೂ ಇಂತಹ ಒಂದು ಪ್ರಸಂಗ ಒದಗಿರಲಿಲ್ಲ. ಇವತ್ತು ಹೊಸ ದಾಗಿ ಕೆಟ್ಟ ಸಂಪ್ರದಾಯಕ್ಕೆ ಹೋಗಬೇಡಿ ಎಂದು ಹೇಳಿದರು. ಈಗ ನಾವು ಕಾರ್ಯಾಂಗವನ್ನು ಕೇಳಿ ತೀರ್ಮಾನವನ್ನು ತೆಗೆದುಕೊಳ್ಳತಕ್ಕ ಪ್ರಶ್ನೆ ಇಲ್ಲ. ನಾಳೆ ಇರತಕ್ಕ ವಿಶಿಷ್ಟ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಯಾವ ತೀರ್ಮಾನ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ತಮ್ಮ ಮನವೊಲಿಸಲು, ಶಾಸನಸಭೆಯ ಮನ ಒಲಿಸಲು ಎದ್ದು ನಿಂತು ಮಾತನಾಡತಕ್ಕ ಪ್ರಸಂಗ ಬಂದಿದೆ. ಹಿಂದೆ ಒಂದು ಬಾರಿ ವಿದ್ಯಾರ್ಥಿಗಳ ಚಳುವಳಿ ನಡೆದ ಸಂದರ್ಭದಲ್ಲಿ ನಾನು ಜನರಲ್ ಹಾಸ್ಟೆಲ್‌ನಲ್ಲಿ ಇದ್ದೆ. ಆಗ ನಾವು ಓ ಕಾಂಗ್ರೆಸ್‌ನಲ್ಲಿ ಇದ್ದೆವು. ಆಗ ಚಳುವಳಿ ನಡೆವ ಸಂದರ್ಭದಲ್ಲಿ ಇಬ್ಬರು ಶಾಸಕರನ್ನು ಇವರು ಆಡಳಿತ ಪಕ್ಷದವರು ಎಂದು ತಿಳಿದು ವಿದ್ಯಾರ್ಥಿಗಳು ಅವರನ್ನು ಕಾರಿನಿಂದ ಕೆಳಕ್ಕೆ ಎಳೆದುಕೊಂಡು ಹೊಡೆದರು. ಅವರ ಬಟ್ಟೆಯನ್ನು ಹರಿದುಹಾಕಿದರು. ಅಂತಹ ಪ್ರಸಂಗ ನಾಳೆಯೂ ಕೂಡಾ ಬರಬಾರದು. ನಾಳೆ ನಾವು ಶಾಸನಸಭೆಯ ಸದಸ್ಯರ ಪ್ರಾಣ ರಕ್ಷಣೆಯನ್ನೂ ಕೂಡಾ ನಾವು ನೋಡಬೇಕು. ಅವರು ಯಾರು ಎಂದು ನೋಡುವುದಿಲ್ಲ. ಯಾರು ಜುಬ್ಬ ಹಾಕಿರುತ್ತಾರೋ ಅವರೆಲ್ಲಾ ಒಂದೇ ಎಂದು ಹೇಳಿ ಹೊಡೆಯುತ್ತಾರೆ. ಬಂದ್ ನಡೆಯುವ ಕಾಲದಲ್ಲಿ, ವಾಹನಗಳು ಇಲ್ಲದೇ ಇರುವ, ಎಲ್ಲಾ ನೌಕರರೂ ಮನೆಯಲ್ಲೇ ಇರುವ ಕಾಲದಲ್ಲಿ ನಾವು ಬಂದು ಇಲ್ಲಿ ಕಾರ್ಯಕಲಾಪಗಳನ್ನು ನಡೆಸತಕ್ಕದ್ದು ಎಂತಹ ಒಂದು ಬುದ್ಧಿಗೇಡಿತನದ ಒಂದು ವಿಚಾರವಂತಿಕೆ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಆ ರೀತಿ ತಾವು ಮಾತನಾಡಬಾರದು.

ಶ್ರೀ ಎಚ್. ಟಿ. ಕೃಷ್ಣಪ್ಪ.—ನಾವೂ ಕೂಡಾ ಕ್ರಿಯಾಶೀಲರಾಗಿರುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರ ಬುದ್ಧಿ ಎಷ್ಟು ದಪ್ಪ ಎಂದು ಇದು ತೋರಿಸುತ್ತದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಈ ಸದನದಲ್ಲಿ ಯಾವುದೋ ಒಬ್ಬ ನೌಕರನ ವರ್ಗಾವಣೆ ಬಗ್ಗೆ ೩-೪ ಗಂಟೆಗಳ ಚರ್ಚೆ ಮಾಡಿದ್ದೇವೆ. ಈ ಬಂದ್ ವಿಷಯ ಇಡೀ ಭರತ ಖಂಡಕ್ಕೇ ಸೇರಿದಂತಹದ್ದಾದ್ದರಿಂದ ಆ ಪಕ್ಷ ಈ ಪಕ್ಷ ಎನ್ನದೇ ನಾವೂ ಕೂಡಾ ಒಪ್ಪಿಕೊಂಡಿರತಕ್ಕ ಪಕ್ಷದಲ್ಲೇ ಇರುವವರು ಅದಕ್ಕೆ ಭಾಗವಹಿಸದೇ ಇರುವುದು ಕರ್ತವ್ಯಲೋಪವಾಗುತ್ತದೆ. ಕಾರ್ಯಾಂಗದ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಾಳೆಯ ದಿವಸ ನಮ್ಮ ನಮ್ಮ ಕ್ಷೇತ್ರಗಳಲ್ಲೂ ಬಂದ್ ಆಗುತ್ತದೆ. ಅಲ್ಲಿ ಏನಾದರೂ ಹೆಚ್ಚು ಕಡಿಮೆ ಯಾದರೆ ನಾವು ನಿಗಾ ವಹಿಸಬೇಕಾಗುತ್ತದೆ, ನಾವು ಅಲ್ಲಿ ಇಲ್ಲದಿದ್ದರೂ ಸಹಾ ಕರ್ತವ್ಯ ಲೋಪವನ್ನು ಮಾಡಿದಹಾಗೆ ಆಗುತ್ತದೆ. ಆದುದರಿಂದ ನಾವು ನಮ್ಮ ಜವಾಬ್ದಾರಿಯನ್ನು ಅರಿತು ನಡೆದುಕೊಳ್ಳ ಬೇಕಾಗುತ್ತದೆ. ಆದರೆ ಅವರು ಯಾವ ದೃಷ್ಟಿಕೋನದಿಂದ ಮಾತನಾಡುತ್ತಾರೋ ಅದು ಅವರಿಗೆ

ಸರಿ ಎಂದು ಕಾಣಬಹುದು. ಸಮಗ್ರ ಚಿತ್ರವನ್ನು ನಾವು ದೃಷ್ಟಿಯಲ್ಲಿ ಇಟ್ಟುಕೊಂಡು ನೋಡಿದರೆ ಅವರು ಮಾತನಾಡತಕ್ಕ ಮಾತಿನಲ್ಲಿ ಯಾವ ಹುರುಳೂ ಇಲ್ಲ. ಆದ್ದರಿಂದ ದಯವಿಟ್ಟು ಅವರ ಆಕ್ಷೇಪಣೆಯನ್ನು ತಳ್ಳಿಹಾಕಿ ಮಾನ್ಯ ಕೃಷ್ಣನ್ ಅವರು ಏನು ವಿಚಾರವನ್ನು ಇಟ್ಟಿದ್ದಾರೋ ಅದನ್ನು ನಾನು ಬೆಂಬಲಿಸುತ್ತೇನೆ. ಇದನ್ನು ಅನೇಕ ಶಾಸಕ ಮಿತ್ರರೂ ಕೂಡಾ ಬೆಂಬಲಿಸುತ್ತಾರೆಂದು ಹೇಳುತ್ತೇನೆ.

ಶ್ರೀ ಬಿ. ಎ. ಉಮರಬ್ಬ.—ಅಧ್ಯಕ್ಷರೇ, ಲ್ಯಾಡರ್ ಇಲ್ಲದೇ ಲೀಡರ್ಸ್ ಇಲ್ಲ. ಆದ್ದರಿಂದ ಲೀಡರ್ಸ್‌ಗೆ ಮಾತ್ರ ಮಾತನಾಡಲು ಅವಕಾಶ ಕೊಡದೇ ಅವರ ಜೊತೆ ನಮ್ಮಂತಹ ಲ್ಯಾಡರ್ಸ್‌ಗೂ ಅವಕಾಶ ಕೊಡಬೇಕು.

ಅಧ್ಯಕ್ಷರು.—ಈಗ ಶ್ರೀ ಕೆ. ಎಚ್. ಶ್ರೀನಿವಾಸ ಅವರು ಮಾತನಾಡಲಿ.

ಶ್ರೀ ಕೆ. ಎಚ್. ಶ್ರೀನಿವಾಸ.—ಅಧ್ಯಕ್ಷರೇ, ನನಗೆ ಅರ್ಥವಾದ ಮಟ್ಟಿಗೆ ಬಹಳ ಮಿತವಾದ ಪ್ರಶ್ನೆ ಬಗ್ಗೆ ನಾವು ಈಗ ಆಲೋಚನೆ ಮಾಡುತ್ತಿದ್ದೇವೆ. ಕೆಲವೊಂದು ರಾಜಕೀಯ ಪಕ್ಷಗಳು ನಾಳೆ ದಿವಸ ಬಂದ್ ಆಚರಣೆಗೆ ಕರೆ ಕೊಟ್ಟಿರುವುದರ ಹಿನ್ನೆಲೆಯಲ್ಲಿ ನಾವು ನಾಳೆ ಏನು ಮಾಡಬೇಕೆನ್ನುವುದು ನಮ್ಮ ಮುಂದೆ ಇರತಕ್ಕ ಪ್ರಶ್ನೆ. ಮಾನ್ಯ ಎಚ್. ಟಿ. ಕೃಷ್ಣಪ್ಪನವರಿಗೆ ಅವರ ದೇಹ ಸಂರಕ್ಷಣೆಯ ವಿಚಾರದಲ್ಲಿ ಗಾಬರಿಯುಂಟಾಗಿದೆ. ಅದರ ಬಗ್ಗೆ ನನ್ನ ಸಹಾನುಭೂತಿ ಉಂಟು. ಅದು ಬೇರೆ ವಿಚಾರ. ಅವರಿಗೆ ಅಪಾಯ ಆಗದೇ ಇರಲಿ ಎಂದು ನಾನು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇನೆ. ಆದರೆ ಪ್ರಶ್ನೆ ಏನೆಂದರೆ, ಸಹಜವಾಗಿ ರಾಜಕೀಯ ಪಕ್ಷಗಳು ತಮ್ಮ ಹಲವಾರು ಕಾರ್ಯಕ್ರಮಗಳನ್ನು ಮಾಡುತ್ತವೆ. ಬಂದ್ ಎನ್ನತಕ್ಕದ್ದೂ ಕೂಡಾ ಒಂದು ಕಾರ್ಯಕ್ರಮ. ಹೆಚ್ಚು ಕಡಿಮೆ ಸಹಜವಾಗಿ ಬಂದ್‌ನ್ನು ಮಾಡಬಹುದು ಎನ್ನುವ ರೀತಿಯಲ್ಲಿ ಅನೇಕ ವರ್ಷಗಳಿಂದ ಬಂದುಬಿಟ್ಟಿದೆ. ಆದುದರಿಂದ ಅದು ಸರಿಯೋ ತಪ್ಪೋ ಎಂದು ಯೋಚನೆ ಮಾಡತಕ್ಕದ್ದು ಸಾಧ್ಯವಿಲ್ಲ. ಆದರೆ ಅದಕ್ಕೆ ಬೆಂಬಲವನ್ನು ಯಾರೇ ಸಾರ್ವಜನಿಕರು ಕೊಡುವುದು, ಬಿಡುವುದು ಸಾರ್ವಜನಿಕರಿಗೆ ಸಂಬಂಧಪಟ್ಟದ್ದಾಗಿದೆ. ಆದರೆ ಶಾಸಕರು ಯಾರು ಯಾರು ಭಾಗವಹಿಸಬೇಕು ಹಾಗೂ ಶಾಸನಸಭೆಗೆ ಬರಬೇಕು ಬರಬಾರದು ಎನ್ನುವುದರ ಬಗ್ಗೆ ಶಾಸನಸಭೆಗಳಲ್ಲಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಮುಖ್ಯವಾಗಿ ಸರ್ಕಾರದ ನಿಲುವು ಏನು ಎನ್ನುವುದನ್ನು ನಮ್ಮ ರಾಜ್ಯದಲ್ಲಿ ಸ್ಪಷ್ಟವಾಗಬೇಕಾಗಿದೆ, ಕಾರಣ ಏನೆಂದರೆ, ಸರ್ಕಾರ ಯಾವ ಪಕ್ಷದಿಂದ ರಚಿತವಾಗಿದೆಯೋ ಆ ಪಕ್ಷ ಈ ತೀರ್ಮಾನದಲ್ಲಿ ಭಾಗವಹಿಸಿದೆ. ಈ ತೀರ್ಮಾನಕ್ಕೆ ಕೆಲವು ಕಡೆ ಎಕ್ಸಂಪ್ಷನ್ ಇದೆ. ಹರಿಯಾಣ ರಾಜ್ಯದಲ್ಲಿ ಜನತಾ ಪಾರ್ಟಿ ಬಂದ್‌ನಲ್ಲಿ ಭಾಗವಹಿಸುತ್ತಾ ಇಲ್ಲ, ಈ ಬಗ್ಗೆ ಇಲ್ಲೂ ಆ ರೀತಿ ತೀರ್ಮಾನ ಮಾಡಿದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಕೆಲವು ದಿವಸಗಳ ಹಿಂದೆ ದೆಹಲಿಯಲ್ಲಿ ಮುಖ್ಯಮಂತ್ರಿಯವರು ಹೇಳಿಕೆ ಕೊಟ್ಟಿರುವುದು, ಪ್ರಶ್ನೆಗೆ ಉತ್ತರ ಕೊಟ್ಟಿರುವುದು ಗಮನಕ್ಕೆ ಬಂದಿದೆ. ಸರ್ಕಾರ ಬಂದ್‌ಗೆ ಪ್ರೋತ್ಸಾಹ ಮಾಡುವುದಾಗಲೀ, ಮನ್ನಣೆ ಕೊಡುವುದಾಗಲೀ ಸಾಧ್ಯವಿಲ್ಲವೆಂದು ಅವರು ಹೇಳಿದ್ದಾರೆ. ಇಲ್ಲೂ ಕೂಡಾ ಸರ್ಕಾರ ಏನು ನಿಲುವು ತೆಗೆದುಕೊಂಡಿದೆಯೆಂಬುದು ನಮಗೆ ಗೊತ್ತಾಗಿಲ್ಲ. ಸರ್ಕಾರ ಕೂಡ ನಾವು ಬಂದ್‌ಗೆ ಬಾಗಿಯಾಗಿದ್ದೇವೆ ಎಂದು ಹೇಳಿದರೆ ಅದು ಬೇರೆ ಕತೆ. ಹಾಗೆ ಆದರೂ ಕೂಡಾ ತಮಗೆ ಈ ಸದನದ ಅಧ್ಯಕ್ಷರಾಗಿ ಈ ಸದನವನ್ನು ನಡೆಸುವುದಕ್ಕೆ ಬೇಕಾಗುವ ಸಹಕಾರವನ್ನು ಕೊಡಬೇಕೆಂದು ಸರ್ಕಾರಕ್ಕೆ ನಿರ್ದೇಶನವನ್ನು ಕೊಡುವುದಕ್ಕೆ ನಿಮಗೆ ಅಧಿಕಾರ ಇದೆ. ಸರ್ಕಾರದ ನಿರ್ಧಾರದಿಂದ ನಾವು ಈ ಸದನವನ್ನು ಪ್ರತಿಬಂಧ ಮಾಡುವುದಕ್ಕೆ ಸಾಧ್ಯವಿಲ್ಲ. ಸಭೆಯನ್ನು ನಡೆಸುವುದಕ್ಕೆ ತಮಗೆ ಸಂಪೂರ್ಣ ಅಧಿಕಾರ ಇದೆ. ಬಿಸಿನೆಸ್ ಅಡ್ವೈಸರಿ ಕಮಿಟಿಯ ತೀರ್ಮಾನದ ಪ್ರಕಾರ ಈ ಸಭೆ ನಡೆದುಕೊಂಡು ಹೋಗುತ್ತದೆ. ಈ ಬಗ್ಗೆ ಕೆಲವು ಶಾಸಕರಿಗೆ ಅನಾನುಕೂಲ ಇರಬಹುದು. ಕೆಲವು ಶಾಸಕರಿಗೆ ತಮ್ಮ ತಮ್ಮ ಕ್ಷೇತ್ರಕ್ಕೆ ಹೋಗಿ ಅಲ್ಲಿ ನೋಡಬೇಕೆಂದು ಇರಬಹುದು. ಮೊನ್ನೆ ಮಂಗಳೂರಿಗೆ ಪೋಪ್ ಅವರು ಬಂದಿದ್ದಾಗ ಇಲ್ಲಿಯ ಅನೇಕ ಜನ ಶಾಸಕರು ಅಲ್ಲಿಗೆ ಹೋಗಿ ಅವರ ದರ್ಶನ ಮಾಡಿಕೊಂಡು ಬಂದರು. ಹಾಗೂ ಅಲ್ಲಿಯ ಕೆಲವು ಶಾಸಕರು ಅವರನ್ನು ರಿಸೀವ್ ಮಾಡಿಕೊಳ್ಳುವ ಪ್ರಶ್ನೆಯೂ ಇದೆ. ಅವರು ಅಲ್ಲಿಗೆ ಹೋದರು. ಆಗ ಬಾಕೀ ಜನರಿಂದ ಇಲ್ಲಿಯ ಸದನದ ಕಾರ್ಯಕಲಾಪ ನಡೆಯಿತು. ಆದುದರಿಂದ ವೈಯುಕ್ತಿಕವಾಗಿ ಮಾನ್ಯ ವೆಂಕಟರಾಮಯ್ಯನವರಿಗಾಗಲೀ, ಮತ್ತೊಬ್ಬರಿಗಾಗಲೀ ಅವರ ಕ್ಷೇತ್ರದಲ್ಲೇ ಇರಲೇಬೇಕಾದ ಸಂದರ್ಭ ಬರಬಹುದು. ಅದನ್ನೇ ನಾವು ಲಕ್ಷ್ಯದಲ್ಲಿಟ್ಟು ಸದನವನ್ನು ಮುಂದೆ ಹಾಕುವುದು ಸರಿಯಾದ ಸಂಪ್ರದಾಯವಾಗುವುದಿಲ್ಲ, ಸಾರ್ವಜನಿಕ ಜೀವನದಲ್ಲಿ ಕಾಲಿಟ್ಟಮೇಲೆ

ರಿಸ್ಕನ್ನು ತೆಗೆದುಕೊಳ್ಳಲೇಬೇಕಾಗುತ್ತದೆ. ಆದರೆ ಮಾನ್ಯ ಕೃಷ್ಣಪ್ಪನವರು ನಾಳೆ ದಿವಸ ಹೊರಗಡೆ ಬರುವುದು ಬೇಡ.

ಶ್ರೀ ಎಚ್. ಟಿ. ಕೃಷ್ಣಪ್ಪ.—ನನಗೆ ಆ ಭಯ ಇಲ್ಲ ಸ್ವಾಮಿ.

೬-೦೦ ಪಿ.ಎಂ.

ಶ್ರೀ ಹೆಚ್.ಟಿ. ಕೃಷ್ಣಪ್ಪ —ಸ್ವಾಮಿ, ನಿಮ್ಮ ಬಗ್ಗೆ ನಾನು ಯೋಚನೆ ಮಾಡುತ್ತಿದ್ದೇನೆ. ನಮ್ಮ ಬಗ್ಗೆ ನಾವು ಯೋಚನೆಯನ್ನೇ ಮಾಡುವುದಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್. —ನಿಮ್ಮ ಬಗ್ಗೆಯೂ ಯೋಚನೆ ಮಾಡಬೇಕಾದ ಕಾಲ ಬರಬಹುದು. ಆದರೆ ಇಂಥ ಯಾವುದೇ ದುರ್ಘಟನೆ ನಡೆಯದಿರುವಂತೆ ಸರ್ಕಾರ ರಕ್ಷಣೆ ಕೊಡಬೇಕು. ರಾಜ್ಯದಲ್ಲಿ ಇಡೀ ಜನತೆಯೇ ದಂಗೆ ಎದ್ದಾಗ ಎಲ್ಲ ಕಡೆಯಲ್ಲೂ ನೀವು ರಕ್ಷಣೆಯನ್ನು ಕೊಡುವುದಕ್ಕಾಗುವುದಿಲ್ಲ. ಪ್ರತಿಯೊಬ್ಬರೂ ಅವರವರ ಪಾಲಿನ ಕರ್ತವ್ಯವನ್ನು ಮಾಡಬೇಕು. ಇಲ್ಲದೇಹೋದರೆ ಅದರ ಪರಿಣಾಮವನ್ನು ಎಲ್ಲರೂ ಎದುರಿಸಬೇಕಾಗುತ್ತದೆ. ಆದರೆ ಇವತ್ತು ಈ ಚರ್ಚೆ ಏತಕ್ಕೆ ಬಂತೋ ಗೊತ್ತಾಗುತ್ತಿಲ್ಲ. ಸರ್ಕಾರದವರು ನಾಳೆಯ ದಿವಸಕ್ಕೆ ರಜೆಯನ್ನು ಏನೂ ಘೋಷಣೆ ಮಾಡಿಲ್ಲ. ಅಂದಮೇಲೆ ನಾಳೆ ಸರ್ಕಾರಿ ಕಛೇರಿಗಳೂ ನಡೆಯುತ್ತವೆ, ಈ ವಿಧಾನಸಭೆಯೂ ನಡೆಯುತ್ತದೆಂದು ಅರ್ಥ. ಆದರೆ ಈ ವಿಧಾನಸಭೆಯನ್ನು ಮುಂದೂಡಬೇಕೆಂದು ಮಾನ್ಯ ಸದಸ್ಯರು ಏತಕ್ಕೆ ಹೇಳುತ್ತಿದ್ದಾರೋ ನನಗೆ ತಿಳಿಯುತ್ತಿಲ್ಲ, ಒಂದು ದಿವಸವೂ ಈ ಸದನಕ್ಕೆ ರಜೆಯನ್ನು ಕೊಡದೆ ನಡೆಸುತ್ತಾ ಬಂದಿದ್ದೀರಿ. ಯಾವ ಮಾನ್ಯ ಸದಸ್ಯರಿಗೆ ಬಂದ್ ಬಗ್ಗೆ ಆಸಕ್ತಿ ಇದೆಯೋ ಅವರು ಹೋಗಲಿ. ಉಳಿದವರ ಸಹಕಾರವನ್ನು ತೆಗೆದುಕೊಂಡು ತಾವು ಈ ಸಭೆಯನ್ನು ನಡೆಸಿ. ಒಂದುವೇಳೆ ನಾಳೆ ಸಭೆ ಸೇರಿದಾಗ ಸಭೆಯಲ್ಲಿ ಕೋರಂ ಇಲ್ಲದೇ ಹೋದರೆ ಅದು ಬೇರೆ ಮಾತಾಗುತ್ತದೆ. ಯಾರೋ ಕೆಲವು ಮಾನ್ಯ ಸದಸ್ಯರು ಈ ಸಭೆಯನ್ನು ಮುಂದಕ್ಕೆ ಹಾಕಬೇಕೆಂದು ಹೇಳುತ್ತಿದ್ದಾರೆಂದು ತಾವು ಸಭೆಯನ್ನು ಮುಂದೂಡುವುದಾದರೆ ನಾಳಿನ ಬಂದ್‌ಗೆ ತಾವೇ ಸಂಪೂರ್ಣವಾಗಿ ಬೆಂಬಲವನ್ನು ಕೊಟ್ಟಂತಾಗುತ್ತದೆ. ಆದರೆ ಈ ಬಂದ್‌ಗೆ ನಮ್ಮ ಪಕ್ಷದ ಬೆಂಬಲವಂತೂ ಇಲ್ಲ. ಅಂದಮೇಲೆ ನೀವು ಏತಕ್ಕೆ ಬೆಂಬಲವನ್ನು ಕೊಡಬೇಕು ? ನಾಳೆಯ ದಿವಸ ಈ ಸಭೆಯನ್ನು ತಾವು ನಡೆಸಲೇಬೇಕು. ಇಲ್ಲದೇ ಹೋದರೆ ಈ ಬಂದ್ ಬಗ್ಗೆ ಸರ್ಕಾರದ ನೀತಿ ಏನು ಎಂಬುದನ್ನು ತಾವು ಸ್ಪಷ್ಟವಾಗಿ ಹೇಳಬೇಕು. ಈ ದಿವಸ ಸರ್ಕಾರದ ಸ್ಪಷ್ಟ ಜವಾಬ್ದಾರಿ ಏನಿದೆ ಅದನ್ನು ಖಂಡಿತವಾಗಿ ನೀವು ನಿರ್ವಹಿಸುತ್ತೀರೆಂದು ನಾನು ಭರವಸೆಯನ್ನಿಟ್ಟಿದ್ದೇನೆ.

† ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಸನ್ಮಾನ್ಯ ಸಭಾಧ್ಯಕ್ಷರೆ, ಈ ಬಂದ್‌ನಲ್ಲಿ ನಮ್ಮ ಮಾನ್ಯ ಸಭೆಯು ಭಾಗವಹಿಸಬೇಕೆಂದು ಹೇಳತಕ್ಕ ಒಂದು ಚಕಾರದ ಮಾತನ್ನೂ ಕೂಡ ನಾವು ಹೇಳುತ್ತಿಲ್ಲ. ಈ ಸಭೆಯ ಮೌಲ್ಯ, ಗೌರವ ಏನೆಂಬುದು ಪ್ರತಿಯೊಬ್ಬರಿಗೂ ಗೊತ್ತಿದೆ. ಆದರೆ ಇಲ್ಲಿ ಉಂಟಾಗಿರತಕ್ಕ ಅನಿವಾರ್ಯ ಪ್ರಸಂಗ ಏನು ಎಂಬುದನ್ನೂ ಯೋಚನೆ ಮಾಡಬೇಕಾಗಿದೆ. ಪಾರ್ಲಿಮೆಂಟ್‌ನಲ್ಲಿರತಕ್ಕ ಇಡೀ ವಿರೋಧಪಕ್ಷಗಳು ಈ ಬಂದ್‌ಗೆ ಕರೆ ಕೊಟ್ಟಿವೆ. ಕೇಂದ್ರ ಸರ್ಕಾರಿ ನೌಕರರೂ ಕೂಡ ನಾಳೆ ಮುಷ್ಕರ ಹೂಡುವ ಸಲುವಾಗಿ ಕರೆಕೊಟ್ಟಿದ್ದಾರೆ. ಅದೇ ರೀತಿ ನಮ್ಮ ರಾಜ್ಯ ಸರ್ಕಾರಿ ನೌಕರರೂ ಕೂಡ ಆಗ ಮುಷ್ಕರ ಮಾಡುತ್ತೇವೆಂದು ಹೇಳಿದ್ದಾರೆ. ಇದರಿಂದಾಗಿ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಏನಾದರೂ ಶಾಂತಿಭಂಗ ಉಂಟಾಗಬಹುದೇನೋ ಎಂಬ ಶಂಕೆಯಿಂದ ನಮ್ಮ ನಮ್ಮ ಕ್ಷೇತ್ರಗಳಿಗೆ ಹೋಗಿ ನಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದೆ. ನಾಳೆಯ ದಿವಸ ಬಂದ್‌ನಲ್ಲಿ ನಾವು ಭಾಗವಹಿಸುತ್ತೇವೆಂದು ನಮ್ಮ ರಾಜ್ಯ ಸರ್ಕಾರೀ ನೌಕರರು ನೇರವಾಗಿ ಹೇಳಿರುವುದರಿಂದ ಅವರು ಯಾರೂ ಕೂಡ ಇಲ್ಲಿಗೆ ಬರುವುದಿಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ನಾವು ನಮ್ಮ ನಮ್ಮ ಕ್ಷೇತ್ರಗಳಿಗೆ ಹೋಗಿ ಅಲ್ಲಿ ಶಾಂತಿ ಸುವ್ಯವಸ್ಥೆಯನ್ನು ನೋಡಿಕೊಳ್ಳಬೇಕಾಗಿದೆ. ಸಾರ್ವಜನಿಕರ ಜೀವನಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳಬೇಕಾಗುತ್ತದೆ. ಈ ಕಾರಣದಿಂದಾಗಿ ನಾವು ನಾಳೆಯ ದಿವಸ ಈ ಸಭೆಗೆ ಬರಲು ಸಾಧ್ಯವಿಲ್ಲ. ಈ ಪರಿಸ್ಥಿತಿಯನ್ನು ತಾವು ತಿಳಿದುಕೊಂಡು ನಮಗೆ ನಾಳೆ ರಜೆಯನ್ನು ಕೊಡಿ ಎಂದು ಕೇಳುತ್ತಿದ್ದೇವೆಯೇ ಹೊರತು ಈ ಸಭೆಗೆ ರಜೆಯನ್ನು ಕೊಡಿ ಎಂದು ನಾವು ಕೇಳುತ್ತಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ನಾನು ಕೇವಲ ಒಂದೆರಡು ಮಾತುಗಳನ್ನು ಮಾತ್ರ ಹೇಳಬಯಸುತ್ತೇನೆ. ರಾಷ್ಟ್ರ ಪ್ರಜ್ಞೆಯನ್ನು ಹೊಂದಿರತಕ್ಕ ಯಾವುದೇ ವ್ಯಕ್ತಿಯಾಗಲಿ ಅಥವಾ ಯಾವುದೇ ವಿರೋಧಪಕ್ಷವಾಗಿರಲಿ ಈ ಒಂದು ವಿಚಾರವನ್ನು ಯೋಚನೆ ಮಾಡಲೇಬೇಕಾಗುತ್ತದೆ. ಹಾಗೆ ಯೋಚನೆ ಮಾಡಿಯೇ ಈ ಒಂದು ಬಂದ್‌ಗೆ ಕರೆನೀಡಿವೆ. ಈ ದೇಶದ ಜನರ ಭಾವನೆಯನ್ನು ಅರ್ಥಮಾಡಿಕೊಂಡು ಅದರಂತೆ ನಾವು ನಡೆದುಕೊಳ್ಳಬೇಕಾಗುತ್ತದೆ. ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರು ಹೇಳಿದರು ಇಂಥ ಸಂಪ್ರದಾಯಗಳನ್ನು ಹಾಕಬಾರದು ಎಂದು. ನಾನಾದರೂ ಹೇಳುತ್ತೇನೆ, ನೀವು ಈ ಸದನವನ್ನು ಮುಂದೂಡಿ ಒಂದು ಹೊಸ ಸಂಪ್ರದಾಯವನ್ನು ಹಾಕಿದರೆ ಅದರಲ್ಲಿ ಏನೂ ತಪ್ಪಿಲ್ಲ. ಇಡೀ ಭಾರತ ದೇಶದಲ್ಲಿ ಬಂದ್‌ನ್ನು ಆಚರಿಸುತ್ತಿರುವುದರಿಂದ ನಾವೂ ಕೂಡ ನಮ್ಮ ನಮ್ಮ ಕ್ಷೇತ್ರಗಳಿಗೆ ಹೋಗಿ ಬಂದ್ ಎಂದರೇನು ಎನ್ನುವ ಬಗ್ಗೆ ನಮ್ಮ ಜನಗಳಿಗೆ ತಿಳುವಳಿಕೆಯನ್ನು ಹೇಳಬೇಕಾಗುತ್ತದೆ. ಏತಕ್ಕಾಗಿ ಇದನ್ನು ಮಾಡುತ್ತೇವೆ ಎನ್ನುವ ಬಗ್ಗೆ ಅವರಿಗೆ ಅರಿವು ಮೂಡಿಸಬೇಕಾಗಿದೆ. ಅಷ್ಟೇ ಅಲ್ಲ ನಾಳೆಯ ದಿವಸ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳೂ ನಡೆಯದಂತೆ ಶಾಂತಿ ವಾತಾವರಣವನ್ನು ನಿರ್ಮಾಣ ಮಾಡುವ ಸಲುವಾಗಿ ನಾಳೆಯ ದಿವಸ ನಡೆಯಬೇಕಾದ ಈ ಸದನವನ್ನು ನಾವು ನಾಡಿದ್ದಕ್ಕೆ ಮುಂದೂಡಬೇಕೆಂದು ತುಂಬಾ ದೀರ್ಘ ಯೋಚನೆಯನ್ನು ಮಾಡಿ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಮಾನ್ಯ ನೀರಾವರಿ ಮತ್ತು ಲೋಕೋಪಯೋಗಿ ಖಾತೆ ಸಚಿವರು).—ಮಾನ್ಯ ಸಭಾಧ್ಯಕ್ಷರೆ, ನಾಳೆ ದಿವಸದ ಈ ಸದನದ ಕಾರ್ಯಕಲಾಪಗಳನ್ನು ಮುಂದೂಡಿದರೆ ಈ ಸದನಕ್ಕಿರತಕ್ಕ ಸಾರ್ವಭೌಮತ್ವಕ್ಕೆ ಚ್ಯುತಿಯುಂಟಾಗುತ್ತದೆಂದು ವಿರೋಧಪಕ್ಷದ ಮಾಜಿ ನಾಯಕರಾದ ಮಾನ್ಯ ವೀರಪ್ಪಮೊಯ್ಲಿಯವರೂ ಹಾಗೂ ಮಾನ್ಯ ಸದಸ್ಯರುಗಳಾದ ಬಸವಲಿಂಗಪ್ಪ, ಮತ್ತು ಶ್ರೀ ಶ್ರೀನಿವಾಸ್‌ರವರೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅವರು ಮಾತನಾಡುವಾಗ ಸಂವಿಧಾನದ ಚೌಕಟ್ಟಿನಲ್ಲಿ, ಕಾರ್ಯಾಂಗಕ್ಕೆ ಇರತಕ್ಕ ಇತಿಮಿತಿ ನ್ಯಾಯಾಂಗಕ್ಕೆ ಇರತಕ್ಕ ಇತಿಮಿತಿ ಮತ್ತು ಶಾಸಕಾಂಗಕ್ಕೆ ಇರತಕ್ಕ ಇತಿಮಿತಿಗಳನ್ನು ಉಲ್ಲೇಖ ಮಾಡಿದ್ದಾರೆ. ನಾಳೆ ಈ ಬಂದ್‌ನ್ನು ಏತಕ್ಕೆ ಆಚರಿಸಬೇಕೆಂದು ನಿರ್ಣಯ ಮಾಡುವುದಕ್ಕೆ ಮುಂಚಿತವಾಗಿ ಅವರು ಇನ್ನೂ ಮುಂದಕ್ಕೆ ಹೋಗಿ ವಿಶ್ಲೇಷಣೆಯನ್ನು ಮಾಡಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ನ್ಯಾಯಾಂಗವು ಶಾಸಕಾಂಗಕ್ಕೆ ಮನ್ನಣೆಯನ್ನು ಕೊಡದೆ ಅಗೌರವವನ್ನು ತೋರಿಸಿರುವುದರಿಂದ, ಅಪಚಾರವನ್ನು ಮಾಡಿರುವುದರಿಂದ ಅದನ್ನು ಪ್ರತಿಭಟಿಸಲು ಇಡೀ ದೇಶದಲ್ಲಿರತಕ್ಕ ಎಲ್ಲ ವಿರೋಧ ಪಕ್ಷಗಳೂ ನಾಳೆಯ ಬಂದ್‌ಗೆ ಕರೆ ನೀಡಿವೆ. ನ್ಯಾಯಾಂಗವು ಹಾಸ್ಯಾಸ್ಪದವಾಗಿ, ಉದ್ಧಟತನದಿಂದ ನಡೆದುಕೊಂಡಿದ್ದರಿಂದ ಇವತ್ತು ಇಂಥ ಒಂದು ಪರಿಸ್ಥಿತಿ ಉದ್ಭವವಾಗುವುದಕ್ಕೆ ಕಾರಣವಾಯಿತು. ಸರ್ಕಾರದಲ್ಲಿ ಕೆಲಸಮಾಡತಕ್ಕ ಪ್ರತಿಯೊಬ್ಬ ಕರ್ಮಚಾರಿಗೂ ಇರತಕ್ಕ ಹಕ್ಕನ್ನು ಕಿತ್ತುಕೊಳ್ಳತಕ್ಕ ತೀರ್ಮಾನವನ್ನು ನ್ಯಾಯಾಂಗ ಏನು ಮಾಡಿದೆ ಅದರ ವಿರುದ್ಧ ಇಡೀ ದೇಶದಲ್ಲಿರತಕ್ಕ ಎಲ್ಲ ಸರ್ಕಾರಿ ಕರ್ಮಚಾರಿಗಳೂ ಸೇರಿ ಈ ಬಂದನ್ನು ಆಚರಿಸಲು ಹೊರಟಿದ್ದಾರೆ. ಜನರು ತಮ್ಮ ಮನಸ್ಸಿನಲ್ಲಿರತಕ್ಕ ಭಾವನೆಗಳನ್ನು ಬಹಿರಂಗವಾಗಿ ತಿಳಿಸುವುದಕ್ಕೆ ಅವರಿಗೆ ಇರತಕ್ಕ ಹಕ್ಕು ಇದು ಎಂಬುದನ್ನು ತಿಳಿದುಕೊಳ್ಳಬೇಕು. ಇದೊಂದು ಸಿದ್ಧಾಂತ. ಇದು ಹೊಸ ವಿಷಯವೇನೂ ಅಲ್ಲ. ಇವತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರೀ ಕರ್ಮಚಾರಿಗಳು ನಾವು ಈ ಬಂದ್‌ನಲ್ಲಿ ಭಾಗವಹಿಸುತ್ತೇವೆಂದು ಹೇಳಿದರೆ ಅದು ಸರ್ಕಾರದ ಅಭಿಪ್ರಾಯವಲ್ಲ. ಕೆಲವು ರಾಜ್ಯಗಳು ಈ ಬಂದ್‌ಗೆ ತಮ್ಮ ಬೆಂಬಲ ಕೊಟ್ಟಿವೆ, ಇನ್ನು ಕೆಲವು ಕೊಟ್ಟಿಲ್ಲವೆಂದು ಕಾಣುತ್ತದೆ. ಆದರೆ ಇದರ ಬಗ್ಗೆ ನಾನು ಹೆಚ್ಚು ವಿಶ್ಲೇಷಣೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ನಮ್ಮ ಸರ್ಕಾರ ಈ ಬಂದ್‌ಗೆ ಯಾವುದೇ ರೀತಿಯಲ್ಲೂ ಬೆಂಬಲವನ್ನು ಕೊಟ್ಟಿಲ್ಲ ಎನ್ನುವ ಮಾತನ್ನು ನಾವು ಈ ಸಂದರ್ಭದಲ್ಲಿ ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ.

ನಾಳೆ ರಾಜ್ಯ ಸರ್ಕಾರದ ಜವಾಬ್ದಾರಿ ಏನು ಇದೆ ಎನ್ನುವುದೂ ಕೂಡ ಗೊತ್ತಿದೆ. ಇವತ್ತು ಸರ್ಕಾರ ಕಾನೂನನ್ನು ಪಾಲನೆ ಮಾಡತಕ್ಕಂಥ ಕಾಲದಲ್ಲಿ ಯಾವುದೇ ರೀತಿಯಾದ ದುಷ್ಟ ಶಕ್ತಿಗಳು, ದುಷ್ಕರ್ಮಿಗಳು ಈ ಒಂದು ಸದವಕಾಶವನ್ನು ಉಪಯೋಗ ಮಾಡಿಕೊಳ್ಳತಕ್ಕ ಹವಣಿಕೆಯೂ ಇದೆ. ಇದನ್ನು ತಡೆಗಟ್ಟತಕ್ಕಂಥ ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಆ ದಿಕ್ಕಿನಲ್ಲಿ ಮುಂಜಾಗರೂಕತೆ ಕ್ರಮ ತೆಗೆದುಕೊಳ್ಳತಕ್ಕಂಥದ್ದು ಇರುತ್ತದೆ. ಅದರ ಬಗ್ಗೆ ಯಾರೂ ಯೋಚನೆ ಮಾಡಬೇಕಾದ

ಅವಶ್ಯಕತೆ ಇಲ್ಲವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಾಳೆ ಈ ಸದನವನ್ನು ನಡೆಸ ಬೇಕಾದರೆ ಇಲ್ಲಿರತಕ್ಕಂಥ ಕರ್ಮಚಾರಿಗಳು ಪ್ರತಿಭಟನೆ ಮಾಡಲಿಕ್ಕೆ ಹೊರಟಿದ್ದಾರೆ, ಅದು ಅವರಿಗೆ ಇರತಕ್ಕಂಥ ಸಂವಿಧಾನದ ಹಕ್ಕು. ಅದನ್ನು ಕಿತ್ತುಕೊಳ್ಳುವುದಕ್ಕೆ ನಮಗೆ ಸಾಧ್ಯವಿಲ್ಲವೆಂದು ಇಷ್ಟೇ ಈ ಸಂದರ್ಭದಲ್ಲಿ ಹೇಳಲು ನಾನು ಇಚ್ಛೆ ಪಡುವುದು. ರಿಪೋರ್ಟರ್ ಇಲ್ಲದೆ ಸಭೆಯನ್ನು ನಡೆಸಬಹು ದೆಂದು ತೀರ್ಮಾನ ಮಾಡಿದ್ದೇವೆ. ಟೇಪ್ ರೆಕಾರ್ಡ್ ಇಟ್ಟುಕೊಂಡು ನಡೆಸಬಹುದು. ಆದರೆ ಸದನದ ಕೆಲಸ ನಡೆಸಬೇಕಾದರೆ ಕರ್ಮಚಾರಿಗಳ ಸಹಕಾರ ಇಲ್ಲದೆ ಕೆಲಸ ನಡೆಸಲು ಕಷ್ಟವಾಗುತ್ತದೆ. ನಿಮಗೂ ಕಷ್ಟವಾಗುತ್ತದೆ. ನಾಳೆ ಬೆಳಿಗ್ಗೆ ಮಾನ್ಯ ಕಾನಡೆಯವರು ಬಂದರೆ ಅವರನ್ನು ಘೇರಾವ್ ಮಾಡಿದರೆ ಯಾರು ಅವರಿಗೆ ರಕ್ಷಣೆಯನ್ನು ಕೊಡುತ್ತಾರೆ? ನಾವು ಬಂದರೂ ಕೂಡ ಆಗುವುದಿಲ್ಲ. ಆದ್ದರಿಂದ ಈ ಸದನವನ್ನು ನಾವು ಗೌರವದಿಂದ ನಡೆಸಿಕೊಂಡು ಹೋಗಬೇಕಾಗಿರುತ್ತದೆಯೇ ಹೊರತು ಯಾವ ವಿಧ ದಿಂದಲೂ ಕಡಿಮೆ ಮಾಡಲು ಸಾಧ್ಯವಾಗುವುದಿಲ್ಲವೆಂದು ಸರ್ಕಾರ ಸ್ಪಷ್ಟೀಕರಣ ನೀಡಲು ಇಚ್ಛೆ ಪಡುತ್ತೇನೆ. ಸದನವನ್ನು ನಡೆಸಿ ಒಂದು ಕೆಟ್ಟ ಸಂಪ್ರದಾಯವನ್ನು ಹಾಕಲಿಕ್ಕೆ ಸಾಧ್ಯವಿಲ್ಲ. ಸದನ ವನ್ನು ನಡೆಸಬೇಕಾದರೆ ನಮಗಿರತಕ್ಕಂಥ ಈ ತೊಂದರೆಯ ಸನ್ನಿವೇಶದಲ್ಲಿ ನಡೆಸಲಿಕ್ಕೆ ಸಾಧ್ಯವಿಲ್ಲ, ಆದ್ದರಿಂದ ಮಾನ್ಯ ಅಧ್ಯಕ್ಷರೇ ಸಭೆಯ ಅಭಿಪ್ರಾಯವನ್ನು ತೆಗೆದುಕೊಂಡು ನಿರ್ಣಯ ಮಾಡತಕ್ಕಂಥ ಹಕ್ಕು ತಮಗೆ ಇದೆ. ತಾವು ಯಾವ ರೀತಿ ನಿರ್ಣಯವನ್ನು ತೆಗೆದುಕೊಳ್ಳುತ್ತೀರೋ ಅದಕ್ಕೆ ನಾವು ತಲೆಬಾಗಿ ಒಪ್ಪಿಕೊಳ್ಳುತ್ತೇವೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನಾನು ಒಂದು ವಿವರಣೆಯನ್ನು ಕೊಡ ಬಯಸುತ್ತೇನೆ. ಮಾನ್ಯ ದೇವೇಗೌಡರು ತಮ್ಮ ಸರ್ಕಾರದ ಬೆಂಬಲ ಇದಕ್ಕೆ ಇಲ್ಲವೆಂದು ಹೇಳುತ್ತಾ, ಬಂದ್ ಆಚರಿಸುತ್ತಿರುವುದು ಅಷ್ಟೇ ನ್ಯಾಯಯುತವಾದುದು ಮತ್ತು ಅಷ್ಟೇ ಸಕಾರಣವಾದುದು ಎನ್ನುವ ಬಗ್ಗೆಯೂ ಕೂಡ ವ್ಯಾಖ್ಯಾನ ಕೊಟ್ಟಿದ್ದಾರೆ. ನ್ಯಾಯಾಂಗ ಶಾಸಕಾಂಗಕ್ಕೆ ಅನ್ಯಾಯ ಮಾಡಿದ್ದಾರೆ, ಮತ್ತು ಕೇಂದ್ರ ಸರ್ಕಾರದವರು ಬೆಲೆಗಳನ್ನು ಏರಿಸಿದ್ದಾರೆ ಎಂಬುದರ ಬಗ್ಗೆ ವ್ಯಾಖ್ಯಾನ ಮಾಡಿರುತ್ತಾರೆ. ದಯವಿಟ್ಟು ತಮಗೆ ಗೊತ್ತಿದೆ. ಅಡ್ಮಿನಿಸ್ಟ್ರೇಷನ್ ಪ್ರೈಸಸ್ ಜಾಸ್ತಿ ಮಾಡಿದ್ದಾರೆ.

ಶ್ರೀ ಎಚ್.ಡಿ. ದೇವೇಗೌಡ.—ಅದರ ಬಗ್ಗೆ ನಾನು ಪ್ರಸ್ತಾಪ ಮಾಡಲಿಕ್ಕೆ ಹೋಗಲಿಲ್ಲ. ಪ್ರೈಸ್ ರೈಸ್ ಮಾಡಿರುವ ಬಗ್ಗೆ ಚರ್ಚೆಯಾದಾಗ ಅದರ ಬಗ್ಗೆ ಉತ್ತರಕೊಡಲಿಕ್ಕೆ ಹೋಗಲಿಲ್ಲ. ಆದರೆ ಶಾಸಕಾಂಗಕ್ಕೆ ಇರತಕ್ಕಂಥ ಒಂದೇ ಅವಕಾಶವನ್ನೂ ಕೂಡ ಕಸಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದೆ ಎನ್ನುವುದು ಮೂಲ ಕಾರಣವನ್ನು ನಾನು ಹೇಳತಕ್ಕಂಥದ್ದು.

ಶ್ರೀ ಕೆ. ಎಚ್. ಶ್ರೀನಿವಾಸ್.—ನೀವು ಹೇಳತಕ್ಕಂಥದ್ದು ಸಮಂಜಸವಾದುದಲ್ಲ. ಇದೇ ಕೆಲಸ ವನ್ನು ತಾವು ಕೂಡ ಮಾಡಿದ್ದೀರಿ. ಎಲೆಕ್ಟ್ರಿಸಿಟಿ ಬೆಲೆಯನ್ನು ಜಾಸ್ತಿ ಮಾಡಿದಾಗ, ಹಾಲಿನ ದರವನ್ನು ಜಾಸ್ತಿ ಮಾಡಿದಾಗ, ಬಸ್ ದರವನ್ನು ಜಾಸ್ತಿ ಮಾಡಿದಾಗ ವಿಧಾನ ಸಭೆಯನ್ನು ವಿಶ್ವಾಸಕ್ಕೆ ತೆಗೆದು ಕೊಂಡು ತಾವು ಬೆಲೆಯನ್ನು ಜಾಸ್ತಿ ಮಾಡಲಿಲ್ಲ. ವಿಧಾನ ಸಭೆಯು ನಡೆಯುತ್ತಿರುವ ಹೊತ್ತಿನಲ್ಲಿಯೇ ಹೇಳದೆ ಕೇಳದೆ ಮಧ್ಯಂತರ ಅವಧಿಯಲ್ಲಿ ತಾವು ಈ ಕೆಲಸ ಮಾಡಿಬಿಟ್ಟು ಈಗ ಅಡ್ಮಿನಿಸ್ಟ್ರೇಷನ್ ಪ್ರೈಸ್ ಎಂದು ಕಾರಣ ಕೊಡುವುದು ಬೇಡಿ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ತಮಗೆ ಗೊತ್ತಿದೆ ಅಸೆಂಬ್ಲಿ ಮುಗಿದ ೪-೫ ದಿವಸಗಳ ಒಳಗೆ ಎಲೆಕ್ಟ್ರಿಸಿಟಿ ಜಾಸ್ತಿ ಮಾಡಿದಿರಿ. ಕೆ ಎಸ್.ಆರ್.ಟಿ.ಸಿ. ದರವನ್ನು ಜಾಸ್ತಿ ಮಾಡಿದಿರಿ, ಮಿಲ್ಕ್ ಪ್ರೈಸ್ ಜಾಸ್ತಿ ಮಾಡಿದಿರಿ, ಆವಾಗ ಸವಾರಿ ಮಾಡಲಿಲ್ಲ. ಈಗ ಸವಾರಿ ಮಾಡುತ್ತಿದ್ದೀರಿ. ಅದೇ ರೀತಿಯಲ್ಲಿ ಇದು ಅಟಾನಮಸ್‌ಬಾಡಿ ಇದೆ ಎಂದು ಈಗ ವಿ.ಐ.ಎಸ್.ಎಲ್, ಸ್ಟೀಲ್ ಪ್ರೈಸ್‌ನ್ನು ಜಾಸ್ತಿ ಮಾಡಿದ್ದೀರಿ. ಈ ರೀತಿಯಾದ ವಿತ್ತಂಡವಾದ ಮಾಡುವುದು ಬೇಡ. ಇದು ಸವಾರಿ ಮಾಡತಕ್ಕಂಥದ್ದು ಲೈಸನ್ಸ್‌ನ್ನೆಲ್ಲ ಮನಾಪಲೈಸ್ಡ್ ಮಾಡಿಬಿಡಿ.

ಶ್ರೀ ಎಚ್.ಡಿ. ದೇವೇಗೌಡ.—ಅದನ್ನು ಹೇಳಿ, ಯಾವಾಗ ಜಾಸ್ತಿ ಮಾಡಿದ್ದು ಎನ್ನುವುದನ್ನು ಚರ್ಚೆ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ಹೇಳತಕ್ಕಂಥ ಮಾತನ್ನು ಸಾರ್ವಜನಿಕ ಸಭೆಯಲ್ಲಿ ಮಾತನಾಡಿ. ಈ ಸದನದಲ್ಲಿ ಯಾವ ರೀತಿ ನಡೆದುಕೊಳ್ಳಬೇಕೋ ಆ ರೀತಿ ನಡೆದುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾಳೆ ದಿವಸ ರಾಜ್ಯ ಸರ್ಕಾರದ ವಿರುದ್ಧ ನೀವು ಬಂದ್ ಮಾಡಿ, ಕೇಂದ್ರ ಸರ್ಕಾರದ ವಿರುದ್ಧ ನಾವು ಬಂದ್ ಮಾಡುತ್ತೇವೆ, ಎಲ್ಲ ಸೇರಿಕೊಂಡು ಕೊನೆಗೆ ದೇಶವೇ ಬಂದ್ ಆಗಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸದನದ ಕಾರ್ಯಕಲಾಪಗಳನ್ನು ನಾಳೆ ನಡೆಸದಿದ್ದರೆ ಇದು ಒಂದು ಕೆಟ್ಟ ಸಂಪ್ರದಾಯವಾಗುತ್ತದೆ.

ಅಧ್ಯಕ್ಷರು.—ಪರಿಸ್ಥಿತಿ ಹೀಗಿದೆ. ಇಡೀ ಭಾರತ ದೇಶದ ನೌಕರರು ಸಂವಿಧಾನವನ್ನು ತಿದ್ದುಪಡಿ ಮಾಡಬೇಕು ಎನ್ನುವ ದೃಷ್ಟಿಯಿಂದ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಅವರಿಗೆ ಸಪೋರ್ಟ್ ಆಗಿ ರಾಜ್ಯ ಸರ್ಕಾರದ ನೌಕರರು ಸಂಪು ಹೂಡಲಿದ್ದಾರೆ. ಆದ್ದರಿಂದ ನಾಳೆ ಸಭೆಯನ್ನು ನಡೆಸಲಿಕ್ಕೆ ತೊಂದರೆಯಾಗುತ್ತದೆ. ಎನ್ನುವ ಮಾತು ಸಭೆಯ ಮುಂದೆ ಇತ್ತು. ಆದ್ದರಿಂದ ನಾಳೆ ಸರ್ಕಾರಿ ನೌಕರರು ಯಾರು ಬರಲಿಲ್ಲವೆಂದರೆ ಮಾಹಿತಿಯನ್ನು ಕೊಡಲಾಗದೆ ಸಭೆಯನ್ನು ನಡೆಸುವುದು ಕಷ್ಟವಾಗುತ್ತದೆ ಎನ್ನುವುದು ಒಂದು......

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ ಈ ಸದನವನ್ನು ರಕ್ಷಣೆ ಮಾಡತಕ್ಕಂಥ ಶಕ್ತಿ ಈ ಸರ್ಕಾರಕ್ಕೆ ಇಲ್ಲವೇ?

(ಗೊಂದಲ)

ಅಧ್ಯಕ್ಷರು.—ಈಗ ತಾವು ಏನು ಹೇಳುತ್ತೀರಿ ಎಂದರೆ ಈ ಸಭೆಯನ್ನು ನಾಳೆ ನಡೆಸಬೇಕು, ಇದನ್ನು ಮುಂದೆ ಹಾಕಬಾರದು, ಮುಂದೆ ಹಾಕತಕ್ಕಂಥದ್ದು ನ್ಯಾಯ ಸಮ್ಮತವಲ್ಲವೆಂದು ನಿಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದೀರಿ. ಆದರೆ ಸಿ.ಪಿ.ಐ.ನವರೂ ನಾಳೆ ಸಭೆಯನ್ನು ನಡೆಸಬಾರದು ಮುಂದೆ ಹಾಕಬೇಕೆಂದು ಅವರೂ ಕೂಡ ಹೇಳುತ್ತಿದ್ದಾರೆ. ಬಿಸಿನೆಸ್ ಅಡ್ವೈಸರಿ ಅಭಿಪ್ರಾಯದ ಪ್ರಕಾರವೆಂದು ಅವರು ಹೇಳಿದರು. ಬಿಸಿನೆಸ್ ಅಡ್ವೈಸರಿಗಿಂತಲೂ ಈ ಸಭೆ ಸುಪ್ರೀಮ್ ಇರುತ್ತದೆ. ಆದ್ದರಿಂದ ಸಭೆಯ ಅಭಿಪ್ರಾಯವನ್ನು ಪಡೆದು ಕೆಲಸ ಮಾಡಬೇಕೇ ಹೊರತು ಸಭೆಯ ಅಭಿಪ್ರಾಯವನ್ನು ಬಿಟ್ಟು ಕೆಲಸ ಮಾಡಲಿಕ್ಕೆ ಆಗುವುದಿಲ್ಲ. ಒಮ್ಮೊಮ್ಮೆ ಸಭೆಯ ಅಭಿಪ್ರಾಯವನ್ನು ಪಡೆದು ಕೆಲಸ ಮಾಡಬೇಕಾಗುತ್ತದೆ. ಈಗ ಸಭೆಯ ಬಹುಮತವೇನೆಂದರೆ ನಾಳೆಯ ದಿವಸ ಸಭೆಯನ್ನು ನಡೆಸಬಾರದು ಎನ್ನುವುದು ಬಹುಮತದ ಅಭಿಪ್ರಾಯವಾಗಿದೆ. ಆದ್ದರಿಂದ ಈಗ ಸಭೆಯನ್ನು ನಾಳಿದ್ದು ಬೆಳಿಗ್ಗೆ ೧೦ ಘಂಟೆಗೆ ಮುಂದೂಡಲಾಗಿದೆ.

(ಸಭೆಯು ಆರು ಘಂಟೆ ಇಪ್ಪತ್ತು ನಿಮಿಷಕ್ಕೆ ಮುಕ್ತಾಯವಾಗಿ ಪುನಃ ಇಪ್ಪತ್ತೇಳನೆ ಫೆಬ್ರುವರಿ ಮಾಹೆ ೧೯೮೬ರ ಗುರುವಾರದಂದು ಹತ್ತು ಘಂಟೆಗೆ ಸೇರಲು ನಿಶ್ಚಯಿಸಲಾಯಿತು.)